# ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ KPSC VAANI APP ಡೌನ್ಲೋಡ್ ಮಾಡಿಕೊಳ್ಳಿ

KPSC Vaani

**ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ**



**ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ**

**ನಮ್ಮ ಗುಂಪುಗಳನ್ನು ಸೇರಿಕೊಳ್ಳಿ**

Click here To Join

To Download Our App

Follow Us on Facebook

Follow Us on Instagram

Scan QR Code To Download KPSC Vaani App

# 01-04-2021

## ಕೇಂದ್ರ ಸಚಿವ ಸಂಪುಟವು ಆಹಾರ ಸಂಸ್ಕರಣಾ ಉದ್ಯಮದ PLI ಯೋಜನೆಗೆ ಒಪ್ಪಿಗೆ



* ಕೇಂದ್ರ ಸಚಿವ ಸಂಪುಟವು ಆಹಾರ ಸಂಸ್ಕರಣಾ ಕ್ಷೇತ್ರಕ್ಕೆ ಸರಿ ಸುಮಾರು 10,900 ಕೋಟಿ ರೂ. ವೆಚ್ಚದ ಉತ್ಪಾದನಾ ಸಂಬಂಧಿತ ಪ್ರೋತ್ಸಾಹಕ ಯೋಜನೆಗೆ ಅನುಮೋದನೆ ನೀಡಿದೆ.

* ಮುಂದಿನ 2026 27ರ ಸಮಯಕ್ಕೆ 2.5 ಲಕ್ಷ ಜನರಿಗೆ ಉದ್ಯೋಗ ಸೃಷ್ಟಿ ಮತ್ತು ಸಂಸ್ಕರಿಸಿದ ಆಹಾರ ಉತ್ಪಾದನೆ ಸಾಮರ್ಥ್ಯವನ್ನು 33,494 ಕೋಟಿ ರೂ.ಗೆ ಹೆಚ್ಚಿಸುವ ಉದ್ದೇಶದಿಂದ ಈ ಯೋಜನೆಗೆ ಕೇಂದ್ರ ಸಚಿವ ಸಂಪುಟವು ಈ ಪಿಎಲ್ಐ (Production Linked Incentive) ಯೋಜನೆಗೆ ಒಪ್ಪಿಗೆಯನ್ನು ನೀಡಿದೆ.

* ಈ ಯೋಜನೆಯಿಂದಾಗಿ ಭಾರತೀಯ ಬ್ರಾಂಡ್ ಗಳನ್ನು ಉತ್ತೇಜಿಸಲು ಮತ್ತು ಕೃಷಿ ಉತ್ಪನ್ನಗಳ ಸಂಭಾವನೆ ಮತ್ತು ರೈತರಿಗೆ ಹೆಚ್ಚಿನ ಆದಾಯವನ್ನು ಹೆಚ್ಚಿಸುವದೇ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ಸಚಿವ ಸಂಪುಟ ತಿಳಿಸಿದೆ.

## ಭಾರತದದಿಂದ ಶೀಘ್ರದಲ್ಲೇ ಸಕ್ಕರೆ ಮತ್ತು ಹತ್ತಿ ಆಮದು ಮಾಡಿಕೊಳ್ಳಲಿರುವ ಪಾಕಿಸ್ತಾನ


shutterstock.com · 435110413

* ಈ ಹಿಂದೆ ಸರಿ ಸುಮಾರು ಎರಡು ವರ್ಷಗಳಿಂದ ಪಾಕಿಸ್ತಾನವು ಭಾರತದ ಸಕ್ಕರೆ ಮತ್ತು ಹತ್ತಿ ಆಮದಿಗೆ ನಿಷೇಧ ಹೇರಿತ್ತು ಇದೀಗ ಅತೀ ಶೀಘ್ರದಲ್ಲೇ ಸಕ್ಕರೆ ಮತ್ತು ಹತ್ತಿ ಆಮದು ಮಾಡಿಕೊಳ್ಳಲು ಪಾಕಿಸ್ತಾನವು ಸಿದ್ಧವಾಗಿದೆ ಎಂದು ನೂತನ ಹಣಕಾಸು ಸಚಿವ ಹಮ್ಮದ್ ಅಜರ್ ತಿಳಿಸಿದ್ದಾರೆ.

* ಪಾಕಿಸ್ತಾನವು ಜೂನ್ ತಿಂಗಳಿನಿಂದ ಭಾರತದ ಸಕ್ಕರೆ ಮತ್ತು ಹತ್ತಿ ಆಮದು ಮಾಡಿಕೊಳ್ಳಲು ಪುನ: ಆರಂಭಿಸಲಿದೆ ಎಂದು ಹಮ್ಮದ್ ಅಜರ್ ಮಾಹಿತಿಯನ್ನು ನೀಡಿದರು.

* ಪ್ರಸ್ತುತ ಪಾಕಿಸ್ತಾನವು ತನ್ನ ಖಾಸಗಿ ವಲಯಕ್ಕೆ ಭಾರತದಿಂದ ಐದು ಲಕ್ಷ ಟನ್ ಬಿಳಿ ಸಕ್ಕರೆಯನ್ನು ಖರೀದಿಸಲು ಆರ್ಥಿಕ ಸಮನ್ವಯ ಸಮಿತಿಯು ಅವಕಾಶವನ್ನು ಕಲ್ಪಿಸಿದೆ.

## ಅಮೆರಿಕ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕಗೊಂಡ ಮೊದಲ ಕಪ್ಪು ವರ್ಣೀಯ ಮುಸ್ಲಿಂ ಮಹಿಳೆ



* ಪ್ರಸ್ತುತ ಅಮೇರಿಕ ಬೈಡೆನ್ ಸರ್ಕಾರವು ಮೊದಲ ಕಪ್ಪು ವರ್ಣೀಯ ಮುಸ್ಲಿಂ ಮಹಿಳೆಯನ್ನು ಅಮೇರಿಕದ ಫೆಡರಲ್ ಕೋರ್ಟ್‌ಗೆ ನೂತನವಾಗಿ 11 ನ್ಯಾಯಮೂರ್ತಿಗಳನ್ನು ನೇಮಕ ಮಾಡಿದೆ ಎಂದು ತಿಳಿಸಿದೆ.

* ಈಗಿನ ಅಮೆರಿಕಾದ ಬೈಡನ್ ಸರ್ಕಾರವು ಫೆಡರಲ್ ಕೋರ್ಟ್‌ಗೆ ನೇಮಕ ಮಾಡಿರುವ 11 ಜನಗಳಲ್ಲಿ ಇಬ್ಬರು ಮಾತ್ರ ಪುರುಷ ಮತ್ತು ಇನ್ನುಳಿದ 9 ಜನ ಮಹಿಳೆಯರಾಗಿದ್ದರೆ ಎಂದು ತಿಳಿದುಬಂದಿದೆ.

* ಇದೀಗ ಜೋ ಬೈಡನ್ ಸರ್ಕಾರದಲ್ಲಿ ಇಬ್ಬರು ಆಫ್ರಿಕನ್ ಅಮೆರಿಕನ್ ಮಹಿಳೆಯರು, ಇಬ್ಬರು ಏಷ್ಯನ್ ಅಮೆರಿಕನ್ ಮಹಿಳೆಯರಿದ್ದಾರೆ ನೇಮಕ ಗೊಂಡಿದ್ದಾರೆ, ಈ ಮೊದಲು ಅಮೆರಿಕದ ಹೈಕೋರ್ಟ್‌ನಲ್ಲಿ ಇಲ್ಲಿಯವರೆಗೂ ಯಾವುದೇ ಕಪ್ಪುವರ್ಣೀಯ ಮಹಿಳೆಯರು ಕಾರ್ಯ ನಿರ್ವಹಿಸಿರಲಿಲ್ಲ ಎಂದು ತಿಳಿದು ಬಂದಿದೆ.

## ಚೀನಾದ ಮೊದಲ ಆಲ್ಕೋಹಾಲ್ ಘಟಕ ಪಾಕಿಸ್ತಾನದಲ್ಲಿ ಸ್ಥಾಪನೆ



* ಚೀನಾ ದೇಶದ ಮದ್ಯ (ಆಲ್ಕೋಹಾಲ್) ಕಂಪನಿ ತನ್ನ ಘಟಕವನ್ನು ಪಾಕಿಸ್ತಾನದಲ್ಲಿ ಇತ್ತೀಚಿಗೆ ಸ್ಥಾಪನೆ ಮಾಡಿದೆ.

* 2020ರ ಏಪ್ರಿಲ್ 30 ರಂದು ಚೀನಾದ ಹುಯಿ ಕೋಸ್ಟಲ್ ಬ್ರೂವರಿ ಮತ್ತು ಡಿಸ್ಟಿಲರಿ ಲಿಮಿಟೆಡ್ ಕಂಪನಿಯು ಪಾಕಿಸ್ತಾನ ಮಾರುಕಟ್ಟೆಯನ್ನು ಲಗ್ಗೆ ಇಟ್ಟಿತು, ಮತ್ತು ದೇಶದ ಹಣಕಾಸು ನಿಯಂತ್ರಣ ಸಂಸ್ಥೆಯಲ್ಲಿ ನೋಂದಣಿ ಮಾಡಲಾಗಿದೆ ಎಂದು ತಿಳಿದು ಬಂದಿದೆ.

* ಚೀನಾದ ಈ ಕಂಪನಿಯು ಕಳೆದ ವಾರ ಮದ್ಯ ಉತ್ಪಾದನೆಯನ್ನು ಆರಂಭಿಸಿದೆ.

* ಅಬಕಾರಿ ತೆರಿಗೆ ನಿರ್ದೇಶಕ ನಿರ್ದೇಶಕ ಮೊಹಮ್ಮದ್ ಜಮಾನ್ ಖಾನ್ ನೀಡಿರುವ ಮಾಹಿತಿ ಪ್ರಕಾರ ಚೀನಾದ ಕಂಪನಿಯು ತಯಾರಿಸಿದ ಈ ಮದ್ಯವನ್ನು ಪಾಕಿಸ್ತಾನದ ವಿವಿಧ ಯೋಜನೆಗಳಲ್ಲಿ ಕೆಲಸ ಮಾಡುವ ಚೀನಾ ಪ್ರಜೆಗಳಿಗೆ ಈ ಮದ್ಯದ ಉತ್ಪನ್ನವನ್ನು ಒದಗಿಸಲಾಗುವದು ತಿಳಿಸಿದ್ದಾರೆ.

## ಸ್ವಂತ ಕ್ಷಿಪಣಿ ಅಭಿವೃದ್ಧಿಯತ್ತ ಸಾಗಿದ ಆಸ್ಟ್ರೇಲಿಯಾ



* ಆಸ್ಟ್ರೇಲಿಯಾ ರಾಷ್ಟ್ರವು ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅಮೆರಿಕದ ರಾಷ್ಟ್ರದ ಸಹಯೋಗದೊಂದಿಗೆ ಸ್ವಂತ ಕ್ಷಿಪಣಿ ಅಭಿವೃದ್ಧಿ ಪಡಿಸಿಕೊಳ್ಳಲು ಮುಂದಾಗಿದೆ.

* ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್'ರವರು ನೀಡಿರುವ ಮಾಹಿತಿ ಪ್ರಕಾರಈಗಿನ ಜಾಗತಿಕ ಪರಿಸರದಲ್ಲಿ ಶಸ್ತ್ರಾಸ್ತ್ರ ನಿರ್ಮಾಣದ ಪಾಲುದಾರಿಕೆ ನಡೆಸಿ ಕ್ಷಿಪಣಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಹೊಂದಿದೆ, ಜೊತೆಗೆ ಇದರಿಂದ ಆಸ್ಟ್ರೇಲಿಯಾದಲ್ಲಿ ಸಾವಿರಾರು ಉದ್ಯೋಗ ಸೃಷ್ಟಿ ಮತ್ತ ಕ್ಷಿಪಣಿ ರಫ್ತು ಅವಕಾಶವೂ ಸಿಗಲಿದೆ ಎಂದು ತಿಳಿಸಿದ್ದಾರೆ.

* ಆಸ್ಟ್ರೇಲಿಯಾ ದೇಶವು ಸರಿ ಸುಮಾರು ಮುಂದಿನ 20 ವರ್ಷಗಳಲ್ಲಿ ಕ್ಷಿಪಣಿ ವ್ಯವಸ್ಥೆಗಾಗಿಯೇ ಆಸ್ಟ್ರೇಲಿಯಾ 100 ಶತಕೋಟಿ ಆಸ್ಟ್ರೇಲಿಯನ್ ಡಾಲರ್ ಬರಿಸುವ ಸಾಧ್ಯತೆ ಇದೆ ಎಂದು ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್'ರವರು ಮಾಹಿತಿ ನೀಡಿದ್ದಾರೆ.

## ಬ್ರಿಟಿಷ್ ಸೈನ್ಯದ ಮಿಲಿಟರಿ ಫಾರ್ಮ್'ಗಳನ್ನು ಮುಚ್ಚುತ್ತಿರುವಭಾರತೀಯ ಸೇನೆ




* ಭಾರತೀಯ ಸೇನೆಯು 132 ವರ್ಷಗಳ ಸೇವೆಯ ಬ್ರಿಟಿಷ್ ಸೈನ್ಯದ ಮಿಲಿಟರಿ ಫಾರ್ಮ್'ಗಳನ್ನು ಸ್ಥಗಿತಗೊಳಿಸಲಾಗುವದು ಎಂದು ಭಾರತೀಯ ಸೇನೆ ತಿಳಿಸಿದೆ.

* ದೇಶಾದ್ಯಂತ 20,000 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಅಂದರೆ ಅಂಬಾಲಾ, ಕೋಲ್ಕತಾ, ಶ್ರೀನಗರ, ಆಗ್ರಾ, ಪಠಾಣ್‌ಕೋಟ್, ಲಖನೌ, ಮೀರತ್, ಅಲಹಾಬಾದ್ ಮತ್ತು ಗುವಾಹಟಿಯಲ್ಲಿರುವ ಮಿಲಿಟರಿ ಫಾರ್ಮ್'ಗಳನ್ನೂ ಇದೀಗ ಮುಚ್ಚಲಾಗುತ್ತಿದೆ ಎಂದು ಭಾರತೀಯ ಸೇನೆ ತಿಳಿಸಿದೆ.

* ಬ್ರಿಟಿಷ್ ಸೈನ್ಯ ಈ ಮಿಲಿಟರಿ ಫಾರ್ಮ್'ಗಳನ್ನು ಪ್ರಾಂಭಿಸಿದ್ದವು, ಇದರಿಂದ ಭಾರತದಾದ್ಯಂತ ಇರುವ ರಕ್ಷಣಾ ಪಡೆಗಳಲ್ಲಿರುವ ಸೈನಿಕರಿಗೆ ಶುದ್ಧ, ಆರೋಗ್ಯಕರ ಮತ್ತು ತಾಜಾ ಹಸುವಿನ ಹಾಲಿನ ಉತ್ಪಾದನೆ ಮತ್ತು ಪೂರೈಕೆಗಾಗಿ ಬಳಸಲಾಗುತಿತ್ತು.

* 1889ರ ಫೆಬ್ರವರಿ 1 ರಂದು ಅಲಹಾಬಾದ್‌ನಲ್ಲಿ ಈ ಮಿಲಿಟರಿ ಫಾರ್ಮ್'ಗಳನ್ನೂ ಆರಂಭಿಸಲಾಗಿತ್ತು.

# 02-04-2021

## ಲವ್ ಜಿಹಾದ್ ಮಸೂದೆಯನ್ನು ಅಂಗೀಕರಿಸಿದ ಗುಜರಾತ್ ವಿಧಾನಸಭೆ




* ಲವ್ ಜಿಹಾದ್ ಮಸೂದೆಯನ್ನು ಅಂಗೀಕರಿಸಿದ ಗುಜರಾತ್ ವಿಧಾನಸಭೆ.

* ಲವ್ ಜಿಹಾದ್ ಮಸೂದೆಯಿಂದ ಮದುವೆಯಲ್ಲಿ ಮೋಸ ಅಥವಾ ಬಲವಂತದಿಂದ ಮತಾಂತರ ಮಾಡಿದ ಪ್ರಕರಣದಲ್ಲಿ ಹತ್ತು ವರ್ಷ ಜೈಲು ಶಿಕ್ಷೆ ಮತ್ತು ಗರಿಷ್ಠ 5 ಲಕ್ಷ ರೂಪಾಯಿ ದಂಡ ವಿಧಿಸುವ ತಿದ್ದುಪಡಿ ವಿಧೇಯಕವನ್ನು ಗುಜರಾತ್ ವಿಧಾನಸಭೆ ಅಂಗೀಕರಿಸಿದೆ.

* ಧಾರ್ಮಿಕ ಮತಾಂತರಕ್ಕೆ ಒತ್ತಾಯ ಮಾಡಿದರೆ ದಂಡ ವಿಧಿಸುವ ಕಾನೂನು ತಿದ್ದುಪಡಿಯನ್ನು 2003ರಲ್ಲಿ ಜಾರಿಗೆ ಮಾಡಲಾಗಿದೆ.

* ಗುಜರಾತ್ ಸರ್ಕಾರವು ಧಾರ್ಮಿಕ ಸ್ವಾತಂತ್ರ್ಯ 2003ರಲ್ಲಿ ತಿದ್ದುಪಡಿ ಮಾಡಲಾಗಿದೆ, ಈ ತಿದ್ದುಪಡಿಯ ಮೂಲಕ ಬಲವಂತದ ವಿವಾಹದಿಂದ ಮತಾಂತರ ವ್ಯಕ್ತಿಗೆ 3 ರಿಂದ 5 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 2 ಲಕ್ಷ ರೂಪಾಯಿವರೆಗೆ ದಂಡ ವಿಧಿಸಲು ಗುಜರಾತ್ ಸರ್ಕಾರ ನಿರ್ಧರಿಸಿದೆ.

* ದಲಿತ ಅಥವಾ ಬುಡಕಟ್ಟು ಜನಾಂಗದ ಸಂತ್ರಸ್ತೆ ಅಪ್ರಾಪ್ತ, ಮಹಿಳೆ ಮೇಲೆ ಕೃತ್ಯ ಎಸಗಿದ ಅಪರಾಧಿಗೆ 4 ರಿಂದ 7 ವರ್ಷಗಳ ಜೈಲು ಶಿಕ್ಷೆ ಮತ್ತು 3 ಲಕ್ಷ ರೂ.ದಂಡ ವಿಧಿಸಬಹುದು ಎಂದು ಗುಜರಾತ್ ಸರ್ಕಾರ ತಿಳಿಸಿದೆ.

## ಭಾರತದಿಂದ ಸಕ್ಕರೆ, ಹತ್ತಿ ಆಮದು ರದ್ದು ಮಾಡಿದ ಪಾಕಿಸ್ತಾನ



* ಭಾರತ ಸರ್ಕಾರವು ಜಮ್ಮು ಕಾಶ್ಮೀರದಲ್ಲಿ ಆರ್ಟಿಕಲ್ 370 ರದ್ದುಗೊಳಿಸಿದ ಹಿನ್ನಲೆಯಿಂದಾಗಿ ಪ್ರಸ್ತುತ ಪಾಕಿಸ್ತಾನ ಸರ್ಕಾರವು ಆರ್ಟಿಕಲ್ 370ಯನ್ನು ಮರು ಸ್ಥಾಪಿಸಿದರೆ ಮಾತ್ರ ಪಾಕಿಸ್ತಾನವು ಭಾರತದಿಂದ ಸಕ್ಕರೆ, ಹತ್ತಿ ಆಮದು ಮಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದೆ.

* ಈ ಹಿಂದೆ ಪಾಕಿಸ್ತಾನ ಸಚಿವ ಸಂಪುಟ ಆರ್ಥಿಕ ಕಾರಿಡಾರ್ ಸಮಿತಿ ಜೂನ್. 30ರವರೆಗೆ ಭಾರತದಿಂದ 500,000 ಮೆಟ್ರಿಕ್ ಟನ್ ಗಳಷ್ಟು ಸಕ್ಕರೆ ಮತ್ತು ಹತ್ತಿಯನ್ನು ಆಮದು ಮಾಡಿಕೊಳ್ಳುವುದಕ್ಕೆ ಅನುಮತಿ ನೀಡಿತ್ತು, ಇದೀಗ ಆ ಅನುಮತಿಯನ್ನು ಪಾಕಿಸ್ತಾನ ರದ್ದುಗೊಳಿಸಿದೆ.

## ಭಾರತೀಯ ಸೇನೆಗೆ ಲೈಟ್ ವೇಟ್ ಬುಲೆಟ್ ಪ್ರೂಫ್ ಜಾಕೆಟ್




* ಭಾರತೀಯ ಸೇನೆಯ ಯೋಧರಿಗಾಗಿ ಹಗುರವಾದ (ಲೈಟ್ ವೇಟ್) ಬುಲೆಟ್ ಪ್ರೂಫ್ ಜಾಕೆಟ್‌ಗಳನ್ನು (DRDO) ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ಅಭಿವೃದ್ಧಿ ಪಡಿಸಿದೆ.

* ಪ್ರಸ್ತುತ DRDOನ ಕಾನ್ಪುರದಲ್ಲಿರುವ ರಕ್ಷಣಾ ಸಾಮಗ್ರಿಗಳ ಮಳಿಗೆಯ ಪ್ರಯೋಗಾಲಯದಲ್ಲಿ ಈ ಜಾಕೆಟ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

* ಭಾರತೀಯ ಸೇನೆಗೋಸ್ಕರ ತಯಾರಾದ ಲೈಟ್ ವೇಟ್ ಬುಲೆಟ್ ಪ್ರೂಫ್ ಜಾಕೆಟ್ ಉತ್ತಮ ಗುಣಮಟ್ಟವನ್ನು ಮತ್ತು 9 ಕೆಜಿ ತೂಕ ಹೊಂದಿವೆ.

* ಯೋಧರಿಗಾಗಿ ಸಿದ್ಧಪಡಿಸಿದ ಜಾಕೆಟ್'ಗಳನ್ನು ಚಂಡೀಗಡದ ಟರ್ಮಿನಲ್ ಬ್ಯಾಲೆಸ್ಟಿಕ್ ರೀಸರ್ಚ್ ಲ್ಯಾಬೊರೇಟರಿಯಲ್ಲಿ ಪರೀಕ್ಷಿಸಲಾಯಿತು.

## ಪಂಜಾಬ್ ಸರ್ಕಾರದಿಂದ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ



* ಇದೆ ಏಪ್ರಿಲ್ 01 ರಿಂದ ಅಮರೀಂದರ್ ಸಿಂಗ್ ನೇತೃತ್ವದ ಪಂಜಾಬ್ ಸರ್ಕಾರವು ಪಂಜಾಬಿನ ಮಹಿಳೆಯರಿಗೆ ರಾಜ್ಯದ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣವನ್ನು ಘೋಷಣೆ ಮಾಡಿದೆ.

* ಈ ಮೊದಲು ಮಹಿಳೆಯರಿಗೆ ದೆಹಲಿಯ ಅರವಿಂದ ಕೇಜ್ರಿವಾಲ್ ಸರ್ಕಾರವು ಸರ್ಕಾರಿ ಬಸ್ ಮತ್ತು ಮೆಟ್ರೋಗಳಲ್ಲಿ ಉಚಿತ ಪ್ರಯಾಣ ಘೋಷಿಸಿತ್ತು.

* ಮಾರ್ಚ್ 5 ರಂದು ಮಹಿಳೆ ಮತ್ತು ಯುವತಿಯರ ಸಬಲೀಕರಣಗೊಳಿಸುವದು ಸರ್ಕಾರದ ಪ್ರಯತ್ನದ ಭಾಗವಾಗಿದೆ ಎಂದು ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಉಚಿತ ಪ್ರಯಾಣ ಯೋಜನೆಯನ್ನು ಘೋಷಣೆ ಮಾಡಿದ್ದರು.

* 2011ರ ಜನಗಣತಿಯ ಪ್ರಕಾರ ಪಂಜಾಬ್ ರಾಜ್ಯದ 1.31 ಕೋಟಿ ಮಹಿಳೆಯರು ಮತ್ತು ಯುವತಿಯರು ಈ ಯೋಜನೆಯ ಪ್ರಯೋಜನ ಪಡೆಯಲಿದ್ದಾರೆ ಎಂದು ಪಂಜಾಬ್ ಸರ್ಕಾರ ತಿಳಿಸಿದೆ.

* ಪಂಜಾಬ್‌ನ ಸರ್ಕಾರಿ ಸ್ವಾಮ್ಯದ ಬಸ್‌ಗಳಲ್ಲಿ ಮಹಿಳೆಯರು ಉಚಿತ ಬಸ್ ಪ್ರಯಾಣವನ್ನು

ಪಡೆಯಬಹುದಾಗಿದೆ ಎಂದು ತಿಳಿದು ಬಂದಿದೆ.

## ಪ್ರವಾಸೋಧ್ಯಮಕ್ಕೆ ಉತ್ತೇಜನ ನೀಡಲು ಜಮ್ಮು ಕಾಶ್ಮೀರ ಸರ್ಕಾರವು ತಿರುಪತಿ ದೇವಸ್ತಾನಕ್ಕೆ ಭೂಮಿ ನೀಡಲಿದೆ



* ಪ್ರವಾಸೋಧ್ಯಮ ಇಲಾಖೆಗೆ ಉತ್ತೇಜನ ನೀಡುವ ಸಲುವಾಗಿ ಜಮ್ಮು ಮತ್ತು ಕಾಶ್ಮೀರ ಸರ್ಕಾರವು ತಿರುಪತಿ ದೇವಸ್ಥಾನ ನಿರ್ಮಾಣಕ್ಕೆ ಭೂಮಿ ನೀಡಲಿದೆ ಎಂದು ತಿಳಿದು ಬಂದಿದೆ.

* ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರ ಅಧ್ಯಕ್ಷತೆಯಲ್ಲಿ ಜಮ್ಮು ಕಾಶ್ಮೀರದ 490 ಕೆನಾಲ್ ಭೂಮಿಯನ್ನು ತಿರುಪತಿ ದೇವಸ್ಥಾನ ನಿರ್ಮಾಣಕ್ಕಾಗಿ ನೀಡಲು ಸರ್ಕಾರ ಸಿದ್ಧವಾಗಿದೆ.

* ಜಮ್ಮು ಕಾಶ್ಮೀರದ ಭೂಮಿಯನ್ನು 40 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗುತ್ತದೆ ಎಂದು ತಿಳಿದು ಬಂದಿದೆ.

* ಈ ಟಿಟಿಡಿ ದೇವಸ್ಥಾನ ನಿರ್ಮಾಣದಿಂದ ಜಮ್ಮು ಮತ್ತು ಕಾಶ್ಮೀರ ಪ್ರದೇಶಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಲಿದೆ ಮತ್ತು ಪ್ರವಾಸೋದ್ಯಮ ಇಲಾಖೆಗೆ ಉತ್ತೇಜನ ನೀಡಿದಂತಾಗುತ್ತದೆ ಎಂದು ಸರ್ಕಾರ ತಿಳಿಸಿದೆ.

## 2021 ಜಾಗತಿಕ ಲಿಂಗ ಸಮಾನ ಅಂತರ ಸೂಚ್ಯಂಕ



* 2021ರ ವಿಶ್ವ ಆರ್ಥಿಕ ವೇದಿಕೆ ಗ್ಲೋಬಲ್ ಜೆಂಡರ್ (Gender) ಗ್ಯಾಪ್ ರಿಪೋರ್ಟ್‌ಅನ್ನು ಬಿಡುಗಡೆ ಮಾಡಿದೆ, ಭಾರತವು ಸೂಚ್ಯಂಕದ ಶ್ರೇಯಾಂಕದ 28 ಸ್ಥಾನಗಳಿಂದ ಕೆಳಗೆ ಇಳಿಸಿದೆ ಎಂದು ತಿಳಿಸಿದೆ.

* ಪ್ರಸ್ತುತ ಜೆಂಡರ್(Gender) ಸೂಚ್ಯಂಕದ 156 ದೇಶಗಳಲ್ಲಿ ಭಾರತವು 140ನೇ ಸ್ಥಾನ ಪಡೆದಿದೆ.

* ಈ ಹಿಂದೆ 2020ರಲ್ಲಿ ಭಾರತವು 153 ದೇಶಗಳ ಪೈಕಿ 112ನೇ ಸ್ಥಾನ ಪಡೆದುಕೊಂಡಿತ್ತು.

* ಜೆಂಡರ್(Gender) ಸೂಚ್ಯಂಕದ ಪ್ರಕಾರ ಭಾರತವು ತನ್ನ ಲಿಂಗ ಅಂತರದ 62.5% ಅನ್ನು ಇಲ್ಲಿಯವರೆಗೆ ಮುಚ್ಚಿಇಟ್ಟಿತ್ತು ಎನ್ನಲಾಗಿದೆ.

* ಭಾರತದಲ್ಲಿ ಮಹಿಳೆಯರು ಗಳಿಸಿದ ಆದಾಯವು ಪುರುಷರು ಗಳಿಸಿದ 1/5 ರಷ್ಟು ಮಾತ್ರ ಇದೆ, ಮತ್ತು ಈ ಸೂಚ್ಯಂಕದಲ್ಲಿ ಜಾಗತಿಕವಾಗಿ ಭಾರತವು 10ನೇ ಸ್ಥಾನದಲ್ಲಿದೆ.

* ಸತತವಾಗಿ ಐಸ್ಲ್ಯಾಂಡ್ 12 ನೇ ಬಾರಿಗೆ ಸೂಚ್ಯಂಕದಲ್ಲಿ ಅಗ್ರಸ್ಥಾನದಲ್ಲಿದೆ ಮತ್ತು ವಿಶ್ವದ ಅತ್ಯಂತ ಲಿಂಗ ಸಮಾನ ದೇಶವಾಗಿ ಹೊರಹೊಮ್ಮಿದೆ.

## ಒಡಿಶಾ ಉತ್ಕಲ್ ದಿವಾಸ್ 2021




* ಒಡಿಶಾ ರಾಜ್ಯವು ತನ್ನ 85ನೇ ಅಡಿಪಾಯ ದಿನವನ್ನು ಇದೆ ಏಪ್ರಿಲ್ 01 ರಂದು ಆಚರಿಸಿತು, ಹಾಗೂ ಈ ದಿನವನ್ನು ಉತ್ಕಲ್ ದಿವಾಸ್ ಎಂದು ಕರೆಯಲಾಗುತ್ತದೆ.

* ಈ ಉತ್ಕಲ್ ದಿವಸವು 1936 ರಲ್ಲಿ ರಾಜ್ಯವು ಸ್ವತಂತ್ರವಾದ ದಿನವನ್ನು ತಿಳಿಸುತ್ತದೆ.

* ಒಡಿಶಾ ರಾಜ್ಯವು ಪ್ರತಿ ವರ್ಷವು ಏಪ್ರಿಲ್ 01 ರಂದು ಈ ಉತ್ಕಲ್ ದಿವಸವನ್ನು ಅಥವಾ ಒಡಿಶಾ ದಿನವನ್ನು ರಾಜ್ಯಕ್ಕೆ ಪ್ರತ್ಯೇಕ ಗುರುತನ್ನು ಸಾಧಿಸುವ ಹೋರಾಟದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ.

* ಒಡಿಶಾ ಭಾಷೆಯ ಆಧಾರದ ಮೇಲೆ ಭಾರತದ ಮೊದಲ ಸ್ವತಂತ್ರ ರಾಜ್ಯವಾಗಿ ಏಪ್ರಿಲ್ 1, 1936 ರಂದು ಹೊರ ಹೊಮ್ಮಿತು.

# 03-04-2021

## ಭಾರತೀಯ ಕೋಸ್ಟ್ ಗಾರ್ಡ್ 2 ಫಾಸ್ಟ್ ಪೆಟ್ರೋಲ್ ಗಸ್ತು ಹಡಗು ಕರಾವಳಿಯಲ್ಲಿ ನಿಯೋಜನೆ



* ಭಾರತೀಯ ಕೋಸ್ಟ್ ಗಾರ್ಡ್ ಗಸ್ತಿಗಾಗಿ ಎರಡು ಫಾಸ್ಟ್ ಪೆಟ್ರೋಲ್ ಹಡಗುಗಳನ್ನು ಉತ್ತರ ಕನ್ನಡ ಕರಾವಳಿಯಲ್ಲಿನ ನಿಯೋಜನೆ ಮಾಡಿದೆ.

* ಭಾರತೀಯ ಕೋಸ್ಟ್ ಗಾರ್ಡ್ ಸಾವಿತ್ರಿಬಾಯಿ ಫುಲೆ ಮತ್ತು ಕಸ್ತೂರಬಾ ಗಾಂಧಿ ಎಂಬ ಎರಡು ಫಾಸ್ಟ್ ಪೆಟ್ರೋಲ್ ಹಡಗುಗಳನ್ನು ಕಾರವಾರದ ಕರಾವಳಿಯಲ್ಲಿ ನಿಯೋಜಿಸಿದೆ.
* ಕಾರವಾರದ ಕರಾವಳಿಯಲ್ಲಿ ನಿಯೋಜಿಸಿರುವ ಈ ಫಾಸ್ಟ್ ಪೆಟ್ರೋಲ್ ಹಡಗುಗಳನ್ನೂ ಗೋವಾ ಶಿಪ್‌ಯಾರ್ಡ್ ಲಿಮಿಟೆಡ್ ನಿರ್ಮಾಣ ಮಾಡಿದೆ.

* ಈ ಫಾಸ್ಟ್ ಪೆಟ್ರೋಲ್ ಹಡಗುಗಳು ಗಂಟೆಗೆ 35 ನಾಟ್ಸ್ ವೇಗವನ್ನು ಸಾಗುವ ಸಮರ್ಥ್ಯ ಹೊಂದಿವೆ, ಮತ್ತು ಉಪಗ್ರಹ ಸಂವಹನ ಮತ್ತು ಸಂಚರಣೆ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ.

## 2021ರ ಜನಗಣತಿ ವೇಳೆ OBC ಸಂಖ್ಯೆ ದಾಖಲಿಸಲು ಆಯೋಗ ಮನವಿ




* ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗವು ಪ್ರಸ್ತುತ 2021ರ ಜನಗಣತಿಯ ಪ್ರಕಾರ ದೇಶದಲ್ಲಿನ ಇತರೆ ಹಿಂದುಳಿದ ವರ್ಗಗಳ (OBC) ಜನಸಂಖ್ಯೆಯ ದಾಖಲೆಗಳನ್ನು ಸಂಗ್ರಹಿಸುವಂತೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯಕ್ಕೆ ಮನವಿ ಮಾಡಿದೆ.

* ದೇಶದ ಮೊದಲ ಡಿಜಿಟಲ್ ಜನಗಣತಿಗಾಗಿ 3,700 ಕೋಟಿ ರೂ. ಘೋಷಣೆ ಮಾಡಿದೆ ಎಂದು ತಿಳಿದು ಬಂದಿದೆ.

* ಹಿಂದುಳಿದ ವರ್ಗಗಳ ಕಾರ್ಯದರ್ಶಿ ಆನಂದ್ ಕುಮಾರ್ ಅವರು ಸಾಮಾಜಿಕ ನ್ಯಾಯ ಸಚಿವಾಲಯದ ಕಾರ್ಯದರ್ಶಿಗೆ OBC ಜನಸಂಖ್ಯೆಯ ದಾಖಲೆಗಳನ್ನು ಸಂಗ್ರಹಿಸುವಂತೆ ಮನವಿ ಮಾಡಿದ್ದಾರೆ.

## ಏಪ್ರಿಲ್ 2 : ಪೋಲಿಸ್ ಧ್ವಜ ದಿನಾಚರಣೆ



* ರಾಜ್ಯದ ಎಲ್ಲೆಡೆ ಏಪ್ರಿಲ್ 2ರಂದು ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮ ನಡೆಸಲಾಯಿತು.

* ಪೊಲೀಸ್ ಧ್ವಜ ದಿನಾಚರಣೆಯನ್ನ 1975 ಏಪ್ರಿಲ್ 2 ರಿಂದ ಆಚರಣೆ ಮಾಡಲಾಗುತ್ತಿದೆ.

* ಪೊಲೀಸ್ ಧ್ವಜ ದಿನಾಚರಣೆಯ ಅಂಗವಾಗಿ ಪೊಲೀಸ್ ಧ್ವಜಗಳನ್ನೂ ಸಿಬ್ಬಂದಿಗಳಿಗೆ ಮತ್ತು ಸಾರ್ವಜನಿಕರಿಗೆ ನೀಡುವುದು ವಿಶೇಷವಾಗಿದೆ ಇದರಿಂದ ಬಂದ ಹಣದ ಮೂಲಕ ನಿವೃತ್ತ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಅಭಿವೃದ್ದಿ, ಕಲ್ಯಾಣಕ್ಕಾಗಿ ನಿಧಿ ಸಂಗ್ರಹಿಸುವ ಮೂಲಕ ಈ ದಿನಾಚರಣೆಯನ್ನ ಆಚರಿಸಲಾಗುತ್ತದೆ.

## 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ನೀಲಿ ಆಧಾರ್




* ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಸೇವೆಯ ಲಾಭ ಪಡೆಯಲು ಆಧಾರ್ ಕಡ್ಡಾಯವಾಗಿದೆ.

* ಆಧಾರ್ ಕಾರ್ಡ್ ತಯಾರಕ ಸರ್ಕಾರಿ ಸಂಸ್ಥೆಯು ಮಕ್ಕಳಿಗಾಗಿ ಬಾಲ್ ಆಧಾರ್ ತಯಾರಿಸುವಂತೆ ಯುಐಡಿಎಐ ಟ್ವೀಟರ್ ಮೂಲಕ ಮಾಹಿತಿ ನೀಡಿದೆ.

* ಬಾಲ್ ಆಧಾರ್ ಕಾರ್ಡನ್ನು 5 ವರ್ಷದೊಳಗಿನ ಮಕ್ಕಳಿಗಾಗಿ ತಯಾರಿಸಲಾಗುತ್ತದೆ.

* ಈ ಬಾಲ್ ಆಧಾರ್ ಕಾರ್ಡ ನೀಲಿ ಬಣ್ಣದಲ್ಲಿರುತ್ತದೆ, ಮಗುವಿಗೆ 5 ವರ್ಷವಾಗ್ತಿದ್ದಂತೆ ಈ ಆಧಾರ್ ರದ್ದಾಗುತ್ತದೆ

ನಂತರ ಸಮೀಪದ ಆಧಾರ್ ಕೇಂದ್ರಕ್ಕೆ ಹೋಗಿ ಆಧಾರ್ ಸಂಖ್ಯೆ ಮತ್ತು ಬಯೋಮೆಟ್ರಿಕ್ ವಿವರ ನೀಡಿ ಮಕ್ಕಳ ಶಾಶ್ವತ ಆಧಾರ್ ಪಡೆಯಬಹುದಾಗಿದೆ ಎಂದು ಆಧಾರ್ ಕಾರ್ಡ್ ತಯಾರಕ ಸರ್ಕಾರಿ ಸಂಸ್ಥೆ ತಿಳಿಸಿದೆ.

## ಅತಿ ವೇಗದ ರಸ್ತೆ ನಿರ್ಮಾಣ ಭಾರತ ವಿಶ್ವ ದಾಖಲೆ ನಿತೀನ್ ಗಡ್ಕರಿ



* ಅತಿ ವೇಗದ ರಸ್ತೆ ನಿರ್ಮಾಣದಲ್ಲಿ ಭಾರತ ವಿಶ್ವ ದಾಖಲೆ ಹೊಂದಿದೆ, ಮತ್ತು ಮಾರ್ಚ್ ತಿಂಗಳಿನಲ್ಲಿ ಮೂರು ವಿಶ್ವದಾಖಲೆಗಳನ್ನು ಮಾಡಲಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿಯವರು ತಿಳಿಸಿದರು.

* 24 ಗಂಟೆಯಲ್ಲಿ 2.5 ಕಿ.ಮೀ 4 ಪಥದ ಕಾಂಕ್ರೀಟ್ ರಸ್ತೆ ನಿರ್ಮಿಸುವ ಮೂಲಕ ಗಿನ್ನಿಸ್ ವಿಶ್ವ ದಾಖಲೆ ನಿರ್ಮಾಣವಾಗಿದೆ.

* 24 ಗಂಟೆಗಳಲ್ಲಿ 25 ಕಿ.ಮೀ ಉದ್ದದ ಸೋಲಾಪುರ ಬಿಜಾಪುರ ರಸ್ತೆಯನ್ನೂ ನಿರ್ಮಿಸಲಾಗಿದೆ ಎಂದು ಕೇಂದ್ರ ಸಚಿವ ನಿತೀನ್ ಗಡ್ಕರಿ ತಿಳಿಸಿದ್ದಾರೆ.

* 24 ಗಂಟೆಗಳಲ್ಲಿ 2,580 ಮೀಟರ್ ಉದ್ದದ ಚತುಷ್ಪಥ ಹೆದ್ದಾರಿಗೆ ಫುಟ್ ಪಾತ್ ಗುಣಮಟ್ಟ ಕಾಂಕ್ರೀಟ್ ಹಾಕುವ ಮೂಲಕ ದಾಖಲೆ ನಿರ್ಮಿಸಿದ್ದಾರೆ.

* ಪ್ರಸ್ತುತ 2020 21ನೇ ಹಣಕಾಸು ವರ್ಷದಲ್ಲಿ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ 13,394 ಕಿ.ಮೀ ಹೆದ್ದಾರಿಗಳನ್ನು ನಿರ್ಮಾಣ ಮಾಡಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿಯವರು ತಿಳಿಸಿದರು. ನಿತಿನ್ ಗಡ್ಕರಿ ರವರ ಬಗ್ಗೆ ಮಾಹಿತಿ :

* ನಿತಿನ್ ಜೈರಾಮ್ ಗಡ್ಕರಿ ಮಹಾರಾಷ್ಟ್ರದ ಭಾರತೀಯ ರಾಜಕಾರಣಿ ಮತ್ತು ಉದ್ಯಮಿಯಾಗಿದ್ದರು

* ಪ್ರಸ್ತುತ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವರು ಮತ್ತು ಭಾರತ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವರಾಗಿದ್ದಾರೆ.

* ನಿತಿನ್ ಗಡ್ಕರಿ ಈ ಹಿಂದೆ 2009 ರಿಂದ 2013 ರವರೆಗೆ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

* ಜನನ : 27 ಮೇ 1957 ನಾಗ್ಪುರ
* ಪಕ್ಷ : ಭಾರತೀಯ ಜನತಾ ಪಕ್ಷ
* ಕಚೇರಿ : 2014 ರಿಂದ ಲೋಕಸಭಾ ಸದಸ್ಯರಾಗಿದ್ದರು

## ಭಾರತದ ಅತಿದೊಡ್ಡ ತೇಲುವ ಸೌರ ವಿದ್ಯುತ್ ಸ್ಥಾವರ ತೆಲಂಗಾಣದಲ್ಲಿ



* ತೆಲಂಗಾಣದ ರಾಜ್ಯದ ರಾಮಗುಂಡಂನಲ್ಲಿ ಭಾರತದ ಅತಿದೊಡ್ಡ ತೇಲುವ ಸೌರ ವಿದ್ಯುತ್ ಸ್ಥಾವರವನ್ನು ಸ್ಥಾಪಣೆ ಮಾಡಲಾಗುವದು ಎಂದು ತಿಳಿದು ಬಂದಿದೆ.

* ಈ ತೆಲಂಗಾಣದ ರಾಜ್ಯದ ಸೌರ ವಿದ್ಯುತ್ ಸ್ಥಾವರವು 100 MW. ಸಾಮರ್ಥ್ಯ ಇರಲಿದೆ, ಹಾಗೂ ಈ ಸೌರ ವಿದ್ಯುತ್ ಸ್ಥಾವರ ಮೇ 2021ರಲ್ಲಿ ಸ್ಥಾಪಿಸಲಾಗುವದು ಎಂದು ತಿಳಿಸಲಾಗಿದೆ.

* ಈ ಸೌರ ವಿದ್ಯುತ್ ಸ್ಥಾವರವು ಜಲಾಶಯದ 450 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗುವುದು.

* ಈ ಯೋಜನೆಯನ್ನು NTPC ನಿಯೋಜಿಸಿದೆ, ಈ ಯೋಜನೆಯಿಂದ ಪರಿಸರದಲ್ಲಿ ಇಂಗಾಲದ ಪರಿಣಾಮ ಕಡಿಮೆ ಮಾಡಲು ಉದ್ದೇಶಿಸಲಾಗಿದೆ.

* ವಿಶ್ವದ ಅತಿದೊಡ್ಡ ಸೌರ ವಿದ್ಯುತ್ ಸ್ಥಾವರವನ್ನು ಭಾರತವು ಮಧ್ಯಪ್ರದೇಶದ ನರ್ಮದಾ ನದಿಯಲ್ಲಿರುವ ಓಂಕರ್ ಈಶ್ವರ್ ಅಣೆಕಟ್ಟಿನಲ್ಲಿ ಸ್ಥಾಪಿಸುತ್ತಿದೆ.

* ವಿಶ್ವದ ಅತಿದೊಡ್ಡ ಸೌರ ವಿದ್ಯುತ್ ಸ್ಥಾವರ ಯೋಜನೆಗೆ ಸರಿ ಸುಮಾರು 3,000 ಕೋಟಿ ರೂ. ವೆಚ್ಚ ಭರಿಸಲಿದೆ, ಹಾಗೂ ಇದನ್ನು 2022 23 ರೊಳಗೆ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಲಿದೆ.

ತೆಲಂಗಾಣದ ರಾಜ್ಯದ ಬಗ್ಗೆ ಮಾಹಿತಿ :
* ತೆಲಂಗಾಣ ದಕ್ಷಿಣ ಭಾರತದ ರಾಜ್ಯವಾಗಿದೆ
* ಹೈದರಾಬಾದ್‌ನ ರಾಜಧಾನಿಯಲ್ಲಿ, ಚಾರ್ಮಿನಾರ್ 16 ನೇ ಶತಮಾನದ ಮಸೀದಿಯಾಗಿದ್ದು, 4 ಕಮಾನುಗಳು 4 ಎತ್ತರದ ಮಿನಾರ್‌ಗಳನ್ನು ಬೆಂಬಲಿಸುತ್ತವೆ.
* ರಾಜಧಾನಿ : ಹೈದರಾಬಾದ್

* ರಾಜ್ಯಪಾಲರು : ತಮಿಳುಸಾಯಿ ಸೌಂಡರಾಜನ್
* ಜನಸಂಖ್ಯೆ: 3.52 ಕೋಟಿ (1 ಮಾರ್ಚ್ 2011)
* ಮುಖ್ಯಮಂತ್ರಿ: ಕೆ.ಚಂದ್ರಶೇಖರ್ ರಾವ್

# 05-04-2021

## ವಾಣಿಜ್ಯ ವಾಹನಗಳ DL ಗೆ ಶೈಕ್ಷಣಿಕ ಅರ್ಹತೆ ಕೈಬಿಟ್ಟ ಕೇಂದ್ರ ಸರ್ಕಾರ



* ವಾಣಿಜ್ಯ ವಾಹನಗಳ ವಾಹನ ಚಾಲನಾ ಪರವಾನಿಗೆ ಪತ್ರ ಪಡೆಯಲು ಇನ್ನು ಯಾವುದೇ ಶೈಕ್ಷಣಿಕ ವಿದ್ಯಾರ್ಹತೆಯು ಕಡ್ಡಾಯವಲ್ಲ ಎಂದು ಕೇಂದ್ರ ಸರ್ಕಾರ ಇತ್ತೀಚಿಗೆ ನಿರ್ಧರಿಸಿದೆ. ಮತ್ತು ಇದನ್ನು 'ಕನಿಷ್ಠ ತರಬೇತಿ ಮತ್ತು ಭಾಷಾ ಗ್ರಹಿಕೆಯ' ಜ್ಞಾನದ ಕಡ್ಡಾಯ ಅವಶ್ಯಕತೆಯೊಂದಿಗೆ ಬದಲಾಯಿಸಲಾಗಿದೆ ಎಂದು ತಿಳಿದು ಬಂದಿದೆ.

* ಇನ್ನು ರಾಜ್ಯ ಸಾರಿಗೆ ಇಲಾಖೆಗಳು ಇನ್ನು ಮುಂದೆ ಕೇಂದ್ರ ಮೋಟಾರು ವಾಹನ ನಿಯಮಗಳ ಪ್ರಕಾರ ಸಂಚಾರ ನಿಯಮ ಉಲ್ಲಂಘಿಸಿದವರ (ವೇಗದ ಚಲನೆ, ರೇಸಿಂಗ್, ಅಪಾಯಕಾರಿ ಚಾಲನೆ ಮತ್ತು ಹೆಲ್ಮೆಟ್ ಧರಿಸದಿರುವುದು) ವಂತಹ ಹೆಸರುಗಳನ್ನು ಪ್ರದರ್ಶನ ಮಾಡಲು ಸೂಚಿಸಿದೆ.

## ಕೆಪಿಎಸ್‌ಸಿ ಅಧ್ಯಕ್ಷರಾಗಿ ಶಿವಶಂಕರಪ್ಪ ಎಸ್. ಸಾಹುಕಾರ್ ನೇಮಕ



ಕರ್ನಾಟಕ ಲೋಕಸೇವಾ ಆಯೋಗಕ್ಕೆ ಇತ್ತೀಚಿಗೆ ನೂತನ ಅಧ್ಯಕ್ಷರನ್ನು ಆಯ್ಕೆ ಮಾಡಿ ರಾಜ್ಯಪಾಲರು ಆದೇಶ ಹೊರಡಿಸಿದ್ದು, ನಿವೃತ್ತ ಐಎಎಸ್ ಅಧಿಕಾರಿ ಷಡಾಕ್ಷರಿ ಸ್ವಾಮಿಯವರು ಈ ಮೊದಲು ಕೆಪಿಎಸ್‌ಸಿ ಅಧ್ಯಕ್ಷರ ಹುದ್ದೆಯಲ್ಲಿದ್ದರು ಇವರ ನಿವೃತ್ತಿ ಬಳಿಕ ಕೆಪಿಎಸ್‌ಸಿ ಸದಸ್ಯರಾಗಿದ್ದ ಶಿವಶಂಕರಪ್ಪ ಎಸ್. ಸಾಹುಕಾರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

* ಶಿವಶಂಕರಪ್ಪ ಎಸ್. ಸಾಹುಕಾರ್ 2019ರ ಸೆಪ್ಟೆಂಬರ್ 3ರಂದು ಅವರು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿ ನೇಮಕಗೊಂಡಿದ್ದರು.

## 50 ದಿನದೊಳಗೆ 4,300 ಕಿ.ಮೀ. ಓಡಿ ಗಿನ್ನೆಸ್ ಬರೆಯಲಿರುವ ಯೋಧ !



ಭಾರತೀಯ ಯೋಧರಾದ ವೇಲು ಪಿ. ಯವರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ 4,300 ಕಿ.ಮೀ ದೂರವನ್ನು 50 ದಿನದೊಳಗಾಗಿ ಓಡಿ ಕ್ರಮಿಸುವ ಮೂಲಕ ಗಿನ್ನೆಸ್ ವಿಶ್ವದಾಖಲೆ ಪುಸ್ತಕದಲ್ಲಿ ತನ್ನ ಹೆಸರನ್ನು ಸೇರಿಸಲು ಪ್ರಯತ್ನ ನಡೆಸಲಿದ್ದಾರೆ. ಈ ಕುರಿತು ಸೇನಾಪಡೆಯ ಅಧಿಕೃತ ಮೂಲಗಳು ಮಾಹಿತಿ ಹೊರಹಾಕಿವೆ.

* ಈ ಮೊದಲು ಕೇವಲ 17 ದಿನದಲ್ಲಿ 1,600 ಕಿ.ಮೀ ದೂರ ಓಡಿದ ಮೊದಲ ಭಾರತೀಯ ಓಟಗಾರ ಎಂಬ ದಾಖಲೆ ಬರೆದಿದ್ದರು.

## ಭಾರತದ ತೇಜಸ್ ಫೈಟರ್ ಜೆಟ್ ಖರೀದಿಗೆ ಮಲೇಷ್ಯಾ ಆಸಕ್ತಿ



ಭಾರತವು ಸ್ವಳೀಯವಾಗಿ ಅಭಿವೃದ್ಧಿ ಪಡಿಸಿದ ಲಘು ಯುದ್ಧ ವಿಮಾನ ತೇಜಸ್ ಫೈಟರ್ ಜೆಟ್ ಖರೀದಿಗಾಗಿ ಮಲೇಷ್ಯಾ ಆಸಕ್ತಿ ತೋರಿದ್ದು, ಈ ಯುದ್ಧ ವಿಮಾನದ ಪರೀಕ್ಷೆಗಾಗಿ ಮಲೇಷ್ಯಾದ ವಾಯುಪಡೆಯ ತಂಡವು ಶೀಘ್ರದಲ್ಲೇ ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ.

* ಆರಂಭದಲ್ಲಿ ಮಲೇಷ್ಯಾ ಭಾರತದಿಂದ 12 ಫೈಟರ್ ಜೆಟ್‌ಗಳನ್ನು ಖರೀದಿಸುವ ಸಾಧ್ಯತೆಯಿದೆ, ಹಾಗೂ ಮುಂಬರುವ ದಿನಗಳಲ್ಲಿ ಇನ್ನೂ 24 ಫೈಟರ್ ಜೆಟ್‌ಗಳಿಗಾಗಿ ಬೇಡಿಕೆ ಇಡಬಹುದಾದ ನಿರೀಕ್ಷೆ ಇದೆ.

* ಈ ಯುದ್ಧ ವಿಮಾನದ ಬೆಲೆ ಯುನಿಟ್‌ಗೆ ಕೇವಲ 42 ಮಿಲಿಯನ್ ಎನ್ನಲಾಗಿದೆ.

### ಭಾರತದೊಂದಿಗೆ ಯಾವುದೇ ರೀತಿಯ ವ್ಯಾಪಾರವಿಲ್ಲ: ಪಾಕ್ ಪ್ರಧಾನಿ



ಪ್ರಸ್ತುತ ಪಾಕಿಸ್ತಾನವು ಭಾರತದೊಂದಿಗೆ ಯಾವುದೇ ರೀತಿಯ ವ್ಯಾಪಾರ ಮಾಡುವುದು ಸಾಧ್ಯತೆ ಇಲ್ಲ ಎಂದು ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಇತ್ತೀಚಿಗೆ ಮಾಹಿತಿ ನೀಡಿದ್ದಾರೆ.

* ಭಾರತದಿಂದ ಹತ್ತಿ ಮತ್ತು ಸಕ್ಕರೆ ಆಮದು ಮಾಡುವ ವಿಷಯದಲ್ಲಿ ಇತ್ತೀಚಿಗೆ ಆಸಕ್ತಿ ತೋರಿದ್ದ ಪಾಕ್ ಇದೀಗ ತನ್ನ ನಿರ್ಧಾರ ಬದಲಿಸಿದೆ.

### ನಕ್ಸಲರ ಅಟ್ಟಹಾಸಕ್ಕೆ 22 ಯೋಧರು ಹುತಾತ್ಮ



ಛತ್ತೀಸ್ಗಢ ರಾಜ್ಯದ ಬಸ್ತಾರ್ ಪ್ರದೇಶದ ಬಿಜಾಪುರ್ ಅರಣ್ಯ ಪ್ರದೇಶದಲ್ಲಿ ಇತ್ತೀಚಿಗೆ ಭದ್ರತಾ ಪಡೆ ಮತ್ತು ನಕ್ಸಲರ ಮಧ್ಯೆ ನಡೆದ ಪರಸ್ಪರ ಗುಂಡಿನ ದಾಳಿಯಿಂದಾಗಿ ಒಟ್ಟು 22 ಮಂದಿ ಭಾರತೀಯ ಯೋಧರು ಹುತಾತ್ಮರಾಗಿರುವುದಾಗಿ ಹಾಗು 30ಕ್ಕೂ ಹೆಚ್ಚು ಮಂದಿ ಭದ್ರತಾ ಪಡೆಯ ಯೋಧರು ಗಾಯಗೊಂಡಿರುವುದಾಗಿ ವರದಿಯಾಗಿದೆ. ಛತ್ತೀಸ್ಗಢದಲ್ಲಿ ಮಾವೋವಾದಿಗಳ ವಿರುದ್ದ ಹೋರಾಡುತ್ತಿರುವ ಸಂದರ್ಭದಲ್ಲಿ ಭದ್ರತಾ ಪಡೆಗಳ ಯೋಧರು ಹುತಾತ್ಮರಾಗಿದ್ದು, ಈ ಘಟನೆ ಅತ್ಯಂತ ದುಃಖಕರ ವಿಚಾರವಾಗಿದ್ದು, ಘಟನೆಯಲ್ಲಿ ಹುತಾತ್ಮರಾದ ಯೋಧರ ಕುಟುಂಬಸ್ಥರಿಗೆ ಸಂತಾಪ ಸೂಚಿಸಿ ರಾಷ್ಟ್ರಪತಿ ಸೇರಿ ಪ್ರಮುಖ ಗಣ್ಯರು ಸಂತಾಪ ಸೂಚಿಸಿದ್ದಾರೆ.

### ಮಂಗಳನ ಅಂಗಳದಲ್ಲಿ ಇಳಿದ ನಾಸಾದ ಮಿನಿ ಹೆಲಿಕಾಪ್ಟರ್



ಅಮೆರಿಕಾದ ಬಾಹ್ಯಾಕಾಶ ಸಂಸ್ಥೆ NASA ಉಡಾಯಿಸಿದ ರೋವರ್ ಇದೆ ಫೆಬ್ರವರಿ 18 ರಂದು ಮಂಗಳ ಗ್ರಹ ತಲುಪಿದ್ದು, ಈ ಪರ್ಸವೆರೆನ್ಸ್ ರೋವರ್‌ನ ಕೆಳಭಾಗದಲ್ಲಿ ಅಳವಡಿಸಲಾಗಿದ್ದ, ಮಿನಿ ಹೆಲಿಕಾಪ್ಟರ್ ಇತ್ತೀಚಿಗೆ ಮಂಗಳನ ನೆಲದಮೇಲೆ ಇಳಿದಿದೆ.

* 47 ಕೋಟಿ ಕಿಲೋಮೀಟರ್ ದೂರವನ್ನು ನಾಸಾದ ಪರ್ಸವೆರೆನ್ಸ್ ರೋವರ್ ಪ್ರಯಾಣಿಸಿದೆ.

* ಪರ್ಸವೆರೆನ್ಸ್ ರೋವರನೊಳಗಿದ್ದ ಈ ಮಿನಿ ಹೆಲಿಕಾಪ್ಟರ್ ಇನ್ನು ತನ್ನದೇ ಸ್ವಂತ ಬ್ಯಾಟರಿ ನೆರವಿನಿಂದ ಕಾರ್ಯನಿರ್ವಹಿಸಬೇಕಿದ್ದು, ಮಂಗಳ ಗ್ರಹದ ತಾಪಮಾನ ರಾತ್ರಿ ಸಮಯದಲ್ಲಿ ಮೈನಸ್ 90 ಡಿಗ್ರಿ ಸೆಲ್ಸಿಯಸ್ನಷ್ಟು ಕುಸಿಯುವ ಕಾರಣ ಇದರಲ್ಲಿರುವ ಹೀಟರ್ ಹೆಲಿಕಾಪ್ಟರ್‌ಗೆ 7 ಡಿಗ್ರಿಗಳಷ್ಟು ತಾಪಮಾನವನ್ನು ಒದಗಿಸುತ್ತದೆ.

* ಈ ಹೆಲಿಕಾಪ್ಟರ್ ಈ ತಿಂಗಳ 11 ರಂದು ತನ್ನ ಮೊದಲ ಹಾರಾಟ ನಡೆಸುವ ಮೂಲಕ ಅಧ್ಯಯನ ಆರಂಭಿಸಲಿದೆ.

## 06-04-2021

### ಪ್ರಧಾನಿ ಮೋದಿ ಮೇ 08 ರಿಂದ ಪೋರ್ಚುಗಲ್, ಫ್ರಾನ್ಸ್ ಪ್ರವಾಸ



* ಇದೆ ಮೇ 08 ರಿಂದ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಪೋರ್ಚುಗಲ್ ಹಾಗು ಫ್ರಾನ್ಸ್ ಪ್ರವಾಸ ಕೈಗೊಳ್ಳಲಿದ್ದಾರೆ.

* ಈ ಭೇಟಿ ಹಿನ್ನಲೆ ಭಾರತ ಮತ್ತು ಐರೋಪ್ಯ ಒಕ್ಕೂಟಗಳ ನಡುವೆ ಹೂಡಿಕೆ ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆಯಿದೆ.

* ಪ್ರಧಾನಿ ನರೇಂದ್ರ ಮೋದಿಯವರು ಪೋರ್ಚುಗಲ್ ಪ್ರವಾಸವದಲ್ಲಿ ಲಿಸ್ಬನ್‌ನಲ್ಲಿ ಸಮ್ಮೇಳನದಲ್ಲಿ ಪ್ರಧಾನಿ ಭಾಗವಹಿಸಲಿದ್ದಾರೆ ಜೊತೆಗೆ ಒಪ್ಪಂದಕ್ಕೆ ಸಹಿ ಹಾಕಲಿದ್ದಾರೆ.

* ಲಿಸ್ಬೇನ್‌ನಿಂದ 2ನೇ ಹಂತದಲ್ಲಿ ಪ್ರದಾನಿ ಮೋದಿಯವರು ಫ್ರಾನ್ಸಗೆ ಭೇಟಿ ನೀಡಲಿದ್ದು, ಅಲ್ಲಿನ ಅಧ್ಯಕ್ಷ ಇಮ್ಯಾನ್ಯುವಲ್ ಮ್ಯಾಕ್ರಾನ್ ಜತೆಗೆ ಕಡಲು ಭದ್ರತೆ ಕುರಿತ ಮಾತುಕತೆ ನಡೆಸಲಿದ್ದಾರೆ.

## ಹತ್ತು ವರ್ಷಗಳಲ್ಲಿ ದೇಶ ಕಂಡ ನಕ್ಸಲ್ ದಾಳಿಗಳು



2010 ಫೆಬ್ರುವರಿ 15, ಸಿಲ್ದಾ (ಪ. ಬಂಗಾಲ) ನಕ್ಸಲರ ನಿರ್ಮೂಲನೆಗಾಗಿ ಪ. ಬಂಗಾಲ ಸರಕಾರ "ಆಪರೇಷನ್ ಪೀಸ್ ಹಂಟ್' ಕಾರ್ಯಾಪಡೆ ರಚಿಸಿದ ಹಿನ್ನಲೆ ರೊಚ್ಚಿಗೆದ್ದ ಮಾವೋವಾದಿಗಳು ಸಿಲ್ದಾ ಕ್ಯಾಂಪ್ ಮೇಲೆ ದಾಳಿ ನಡೆಸಿ 24 ಅರೆಸೇನಾ ಸಿಬ್ಬಂದಿಯನ್ನು ಹತ್ಯೆಮಾಡಿದ್ದರು. 2010 ಏಪ್ರಿಲ್ 06, ದಾಂತೇವಾಡ (ಚತ್ತೀಸ್‌ಗಢ) ದಾಂತೇವಾಡ ಜಿಲ್ಲೆಯಲ್ಲಿ 300ಕ್ಕೂ ಅಧಿಕ ನಕ್ಸಲರು ತರಬೇತಿಯಲ್ಲಿರುವಾಗ ಸಿಆರ್‌ಪಿಎಫ್ ಯೋಧರ ಮೇಲೆ ದಾಳಿ ಮಾಡಿ 76 ಯೋಧರನ್ನು ಬಲಿ ಪಡೆದಿದ್ದರು. ಜೊತೆಗೆ 8 ಮಾವೋವಾದಿಗಳು ಹತರಾಗಿದ್ದರು. 2010 ಮೇ 28, ಮಿಡ್ನಾಪುರ (ಪ. ಬಂಗಾಲ) ಕೋಲ್ಕತಾ ಮುಂಬಯಿ ನಡುವಿನ "ಜ್ಞಾನೇಶ್ವರಿ ಎಕ್ಸ್‌ಪ್ರಸ್" ರೈಲಿನ ಹಳಿ ತಪ್ಪಿಸಿದ ಪರಿಣಾಮ, ಟ್ರೈನ್ ಎದುರು ಬರುತ್ತಿದ್ದ ಗೂಡ್ಸ್ ರೈಲಿಗೆ ಢಿಕ್ಕಿ ಹೊಡೆದ ಪರಿಣಾಮ 148 ಮಂದಿ ಅಸುನೀಗಿದ್ದರು. 2012 ಮಾರ್ಚ್ 27, ಗಡಚಿರೋಲಿ(ಮಹಾರಾಷ್ಟ್ರ) 40 ಸಿಆರ್‌ಪಿಎಫ್ ಯೋಧರು ಪ್ರಯಾಣಿಸುತ್ತಿದ್ದ ಬಸ್ ಗೆ ನೆಲಬಾಂಬ್ ಸ್ಫೋಟಿಸಿಡಾ ಕಾರಣ 12 ಯೋಧರು ಸಾವನ್ನಪ್ಪಿದ್ದರು, ಇತರ 28 ಜನ ಗಾಯಗೊಂಡಿದ್ದರು. 2014 ಮಾರ್ಚ್ 11, ತೊಂಗಾ3ಲ್ (ಚತ್ತೀಸ್‌ಗಢ) ಸುಕ್ಮಾ ಜಿಲ್ಲೆಯ ದಾಳಿ ನಡೆಸಿ, 15 ಸಿಆರ್‌ಪಿಎಫ್ ಯೋಧರು, ಒಬ್ಬ ನಾಗರಿಕ ಹತ್ಯೆಗಯ್ಯಲಾಗಿತ್ತು. 2017ರಲ್ಲೂ ಸುಕ್ಮಾ ಜಿಲ್ಲೆಯಲ್ಲೇ ಸಿಆರ್‌ಪಿಎಫ್ ಕ್ಯಾಂಪ್ ಮೇಲೆ ನಡೆದ ನಕ್ಸಲರ ದಾಳಿಗೆ 25 ಯೋಧರು ವೀರ ಮರಣವನ್ನಪ್ಪಿದ್ದರು. 2019 ಮೇ 1, ಗಡಚಿರೋಲಿ (ಮಹಾರಾಷ್ಟ್ರ) ನಕ್ಸಲರು ಐಇಡಿ ಸ್ಫೋಟಿಸಿದ ಪರಿಣಾಮ 15 ಪೊಲೀಸರು ಸಾವಿಗೀಡಾದರು. 2020, ಮಾರ್ಚ್ 21, ಸುಕ್ಮಾ (ಚತ್ತೀಸಗಡ) ಸುಕ್ಮಾ ಜಿಲ್ಲೆಯ ಅರಣ್ಯದಲ್ಲಿ 23 ನಕ್ಸಲರನ್ನು ಹತ್ಯೆಗಯ್ಯಲಾಗಿತ್ತು, ಇದೆ ವೇಳೆ 17 ವೀರಯೋಧರು ಹುತಾತ್ಮರಾಗಿದ್ದರು. ನಕ್ಸಲ್ ನಿಗ್ರಹಕ್ಕೆ ಸರ್ಕಾರಗಳು ಕೈಗೊಂಡ ಕ್ರಮಗಳು : ಪೊಲೀಸ್ ಪಡೆಗೆ ಆಧುನಿಕ ಸ್ಪರ್ಶ, ಕೋಬ್ರಾ ಪಡೆ ರಚನೆ, ಗುಪ್ತಚರ ಜಾಲ ಹೆಚ್ಚಳ ರಾಜ್ಯದ ಭದ್ರತ ಸಂಬಂಧಿ ಮೂಲ ಸೌಕರ್ಯ ಹೆಚ್ಚಳ, ನಕ್ಸಲ್ ವಲಯಗಳಲ್ಲಿ ವಿಶೇಷ ಮೂಲ ಸೌಕರ್ಯ ಯೋಜನೆ ಭದ್ರತ ಪಡೆಯ ಬಲವರ್ಧನೆಗೆ "ಸಮಾಧಾನ್' ಯೋಜನೆ, ಸಿಪಿಐ (ಮಾವೋವಾದಿ) ಸಂಘಟನೆಗೆ ನಿಷೇಧ.

## ಏಪ್ರಿಲ್ 05 : ರಾಷ್ಟ್ರೀಯ ಕಡಲ ದಿನ



ವಿವಿಧ ದೇಶಗಳ ಮಾರುಕಟ್ಟೆಗೆ ಸರಕುಗಳನ್ನು ರಫ್ತು ಮಾಡಲು ಹಾಗು ಆಮದು ಮಾಡಿಕೊಳ್ಳಲು ಸಾಗರಗಳ ಪಾತ್ರ ಪ್ರಮುಖವಾದುದು, ಈ ಮೂಲಕ ದೇಶದ ಆರ್ಥಿಕತೆಗೆ ಪ್ರಮುಖ ಆಧಾರವಾಗಿವೆ.

* ಭಾರತೀಯ ಹಡಗು 1919ರ ಎಪ್ರಿಲ್ 5ರಂದು ತನ್ನ ಮೊದಲ ಸಮುದ್ರಯಾನವನ್ನು ಪ್ರಾರಂಭಿಸಿದ ಹಿನ್ನಲೆ ಪ್ರತಿ ವರ್ಷ ಎಪ್ರಿಲ್ 05 ರಂದು ಭಾರತದಲ್ಲಿ ರಾಷ್ಟ್ರೀಯ ಕಡಲ ದಿನವನ್ನು ಆಚರಿಸಲಾಗುತ್ತದೆ.

* ಮೊದಲ ಅತೀ ದೊಡ್ಡ ಹಡಗು ಕಂಪೆನಿಯಾದ ದಿ ಸಿಂಧಿಯಾ ಸ್ಟೀಮ್ ನ್ಯಾವಿಗೇಶನ್ ಲಿ.ನ ಮೊದಲ ಹಡಗು ಎಸ್‌ಎಸ್ ಲಾಯಲ್ಟಿ ಬಾಂಬೆಯಿಂದ (ಮುಂಬಯಿ) ಯುನೈಟೆಡ್ ಕಿಂಗ್‌ಡಮ್ (ಲಂಡನ್)ಗೆ ಪ್ರಯಾಣ ಬೆಳೆಸಿದ ದಿನ.

* 1964 ರಿಂದ ರಾಷ್ಟ್ರೀಯ ಕಡಲ ದಿನ ಆಚರಣೆಗೆ ಬಂದಿದೆ.

* ಮೊದಲ ಪ್ರಯಾಣದಲ್ಲಿ ಭಾರತೀಯ ಮಸಾಲೆಗಳು, ಧೂಪದ್ರವ್ಯ ಮತ್ತು ಜವಳಿಗಳನ್ನೂ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ರಫ್ತು ಮಾಡಲಾಗಿತ್ತು.

## ಸಕ್ಕರೆ ಉತ್ಪಾದನೆಯಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನ, ಕರ್ನಾಟಕಕ್ಕೆ 3ನೇ ಸ್ಥಾನ



ಭಾರತದಲ್ಲಿ 2020 21 ಸಾಲಿನ ಸಕ್ಕರೆ ಉತ್ಪಾದನೆಯಲ್ಲಿ ಒಟ್ಟು 258.68 ಲಕ್ಷ ಟನ್ ಸಕ್ಕರೆ ಉತ್ಪಾದನೆ ಮಾಡಲಾಗಿದ್ದು, ಒಟ್ಟು 502 ಕಾರ್ಖಾನೆಗಳು ಸಕ್ಕರೆ ಉತ್ಪಾದನೆಯಲ್ಲಿ ಪಾಲ್ಗೊಂಡಿದ್ದವು.

* ಮಹಾರಾಷ್ಟ್ರ ರಾಜ್ಯವು ಒಟ್ಟು 95.05 ಲಕ್ಷಟನ್ ಸಕ್ಕರೆ ಉತ್ಪಾದಿಸುವ ಮೂಲಕ ದೇಶಕ್ಕೆ ನಂ.1

ಸ್ಥಾನದಲ್ಲಿದೆ.(ಉತ್ಪಾದನೆ ಇನ್ನು ಮುಂದುವರೆದಿದೆ)

* ಉತ್ತರ ಪ್ರದೇಶದಲ್ಲಿ ಈ ವರ್ಷ 84.25 ಲಕ್ಷ ಟನ್ ಸಕ್ಕರೆ ಉತ್ಪಾದನೆ ಮಾಡಿ ದೇಶದಲ್ಲಿ 2ನೇ ಸ್ಥಾನ ಪಡೆದಿದೆ.

* ಮೂರನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಒಟ್ಟು 66 ಸಕ್ಕರೆ ಕಾರ್ಖಾನೆಗಳು 41.84 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆ.

* ರಾಜ್ಯದಲ್ಲಿಯೇ ಸಕ್ಕರೆ ಉತ್ಪಾದನೆಯಲ್ಲಿ ಬೆಳಗಾವಿ ಜಿಲ್ಲೆ ರಾಜ್ಯಕ್ಕೆ ನಂ.1 ಸ್ಥಾನದಲ್ಲಿದೆ. ಬಾಗಲಕೋಟೆ ಜಿಲ್ಲೆ ಸಕ್ಕರೆ ಉತ್ಪಾದನೆಯಲ್ಲಿ ದ್ವಿತಿಯ ಸ್ಥಾನದಲ್ಲಿದೆ.

* ಬಾಗಲಕೋಟೆಯ ಮುಧೋಳ ತಾಲೂಕು ಉತ್ತುರ ಗ್ರಾಮದಲ್ಲಿರುವ ಇಂಡಿಯನ್ ಕೇನ್ ಪಾವರ್ ಲಿ. ಕಾರ್ಖಾನೆ 2.21ಲಕ್ಷ ಟನ್ ಸಕ್ಕರೆ ಉತ್ಪಾದಿಸುವ ಮೂಲಕ ರಾಜ್ಯಕ್ಕೆ ಮೊದಲ ಸ್ಥಾನದಲ್ಲಿದೆ.

## ಪೂರ್ವಹಿಂದೂ ಮಹಾಸಾಗರದಲ್ಲಿ ಐದು ರಾಷ್ಟ್ರಗಳ ನೌಕಾಪಡೆಯ ಶಕ್ತಿ ಪ್ರದರ್ಶನ



* ಪೂರ್ವಹಿಂದೂ ಮಹಾಸಾಗರದಲ್ಲಿ ಮೂರು ದಿನಗಳ ಅವಧಿಯ ಪಂಚ ರಾಷ್ಟ್ರಗಳ ನೌಕಾದಳದ ಶಕ್ತಿ ಪ್ರದರ್ಶನ, ಕಸರತ್ತು ಕಾರ್ಯಕ್ರಮವಾದ 'ಲಾ ಪೆರೌಸ್' ಗೆ ಚಾಲನೆ ದೊರೆತಿದೆ. ಈ ಶಕ್ತಿ ಪ್ರದರ್ಶನದಲ್ಲಿ ಭಾರತ ಹಾಗೂ ಉಳಿದ ಮೂರು ಕ್ವಾಡ್ ಸದಸ್ಯ ರಾಷ್ಟ್ರಗಳು (ಆಸ್ಟ್ರೇಲಿಯಾ, ಜಪಾನ್ ಮತ್ತು ಅಮೆರಿಕ) ಜೊತೆಗೆ ಫ್ರಾನ್ಸ್ ರಾಷ್ಟ್ರಗಳು ಪಾಲ್ಗೊಂಡಿವೆ.

* ಈ ಕಾರ್ಯಕ್ರಮದಲ್ಲಿ ಭಾರತದ ನೌಕಾಪಡೆಯ ಹಡಗುಗಳಾದ ಐಎನ್ಎಸ್ ಸಾತ್ಪುರ ಮತ್ತು ಐಎನ್ಎಸ್ ಕಿಲ್ತಾನ್ ಹಾಗೂ ಪಿ 8ಐ ದೂರಗಾಮಿ ಕ್ಷಿಪಣಿ ಉಡಾವಣಾ ವಾಹಕಗಳು ಭಾಗವಹಿಸುತ್ತಿವೆ.

* ಭಾರತದ ಜೊತೆಗೆ ಫ್ರಾನ್ಸ್, ಆಸ್ಟ್ರೇಲಿಯಾ, ಜಪಾನ್ ಮತ್ತು ಅಮೆರಿಕದ ನೌಕಾಪಡೆಯ ಹಡಗು, ವಿಮಾನಗಳು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲಿವೆ.

## ರಷ್ಯಾ ವಿದೇಶಾಂಗ ಸಚಿವರ ಭಾರತ ಭೇಟಿ



* ರಷ್ಯಾದ ವಿದೇಶಾಂಗ ಸಚಿವ ಸರ್ಜೈ ಲಾವ್ರೊವ್ ಅವರು ಇತ್ತೀಚಿಗೆ ಭಾರತಕ್ಕೆ ಎರಡು ದಿನಗಳ ಮಟ್ಟಿಗೆ ಭಾರತಕ್ಕೆ ಭೇಟಿ ನೀಡಿದ್ದಾರೆ.

* ಈ ಭೇಟಿಯಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರೊಂದಿಗೆ ದ್ವಿಪಕ್ಷೀಯ ಸಹಕಾರಗಳ ಸಂಬಂಧ ಚರ್ಚೆ ನಡೆಸಲಿದ್ದಾರೆ.

* ಪ್ರತಿ ವರ್ಷ ಭಾರತ ರಷ್ಯಾ ವಾರ್ಷಿಕ ಸಮ್ಮೇಳನ ನಡೆಯುತ್ತಿತ್ತು, ಆದರೆ ಕಳೆದ ವರ್ಷ ಈ ಸಮ್ಮೇಳನವನ್ನು ಕೋವಿಡ್ 19 ಸೋಂಕಿನ ಕಾರಣ ರದ್ದುಪಡಿಸಲಾಗಿತ್ತು, ಇದೀಗ ಈ ಸಮ್ಮೇಳನ ನಡೆಯುವ ಲಕ್ಷಣಗಳು ಘೋಚರಿಸಿವೆ.

* ಭಾರತವು ಅಮೆರಿಕ, ಆಸ್ಟ್ರೇಲಿಯಾ ಮತ್ತು ಜಪಾನ್ ರಾಷ್ಟ್ರಗಳೊಂದಿಗಿನ 'ಕ್ವಾಡ್' ಒಕ್ಕೂಟದ ಕಾರಣದಿಂದ ರಷ್ಯಾ ಮುನಿಸಿಕೊಂಡಿರುವುದಾಗಿ ಭಾವಿಸಲಾಗಿದೆ.

# 07-04-2021

## ಜಮ್ಮು ಕಾಶ್ಮೀರದಲ್ಲಿನ ಜಗತ್ತಿನ ಅತಿ ಎತ್ತರದ ಸೇತುವೆಯ ಕಮಾನು ನಿರ್ಮಾಣ ಪೂರ್ಣ



ಭಾರತದ ಜಮ್ಮು ಹಾಗೂ ಕಾಶ್ಮೀರದ ಚೇನಬ್ ನದಿ ತೀರದಲ್ಲಿ ನಿರ್ಮಿಸಲಾಗುತ್ತಿರುವ ಜಗತ್ತಿನ ಅತಿ ಎತ್ತರದ ರೈಲ್ವೆ ಸೇತುವೆಯ ಕಮಾನು ನಿರ್ಮಾಣ ಕಾರ್ಯವು ಇತ್ತೀಚಿಗೆ ಪೂರ್ಣಗೊಂಡಿದೆ.

* ಈ ಸೇತುವೆಯು ಒಟ್ಟು 1.3 ಕಿ.ಮೀ. ಉದ್ದವಾಗಿದ್ದು, ಉಧಮ್‌ಪುರ ಶ್ರೀನಗರ ಬಾರಮುಲ್ಲಾ ಸಂಪರ್ಕಿಸುತ್ತದೆ.

* ಈ ಸೇತುವೆಯು ಚೇನಬ್ ನದಿಯಿಂದ ಒಟ್ಟು 359 ಮೀಟರ್ ಎತ್ತರದಲ್ಲಿರಲಿದ್ದು, ಇದು ಪ್ಯಾರಿಸ್‌ನ ಐಫೆಲ್ ಗೋಪುರಕ್ಕಿಂತ 35 ಮೀಟರ್ ಎತ್ತರದಲ್ಲಿದೆ.

## ಪ್ರಾಣಿಗಳಿಗಾಗಿ ವಿಶ್ವದ ಮೊಟ್ಟಮೊದಲ ಕೋರೋಣ ಲಸಿಕೆ ತಯಾರಿಸಿದ ರಷ್ಯಾ



ಜಗತ್ತಿನ ಅನೇಕ ರಾಷ್ಟ್ರಗಳು ಈಗಾಗಲೇ ಮನುಷ್ಯರಿಗಾಗಿ ಕೋರೋಣ ಲಸಿಕೆ ತಯಾರಿಸಿ ಪೂರೈಸುತ್ತಿರುವ ಬೆನ್ನಲ್ಲೇ ರಷ್ಯಾ ದೇಶದಲ್ಲಿ ಪ್ರಾಣಿಗಳಿಗಾಗಿ ಕೋವಿಡ್ 19 ವಿಶ್ವದ ಮೊದಲ ಲಸಿಕೆಯನ್ನು ಕಂಡುಹಿಡಿದಿದೆ ಮಾಹಿತಿ ಲಭಿಸಿದೆ.

* ನಾಯಿಗಳು, ಬೆಕ್ಕುಗಳು, ನರಿಗಳು ಮತ್ತು ಮಿಂಕ್ ಗಳಲ್ಲಿ ವೈರಸ್ ವಿರುದ್ಧ ಪ್ರತಿಕಾಯಗಳನ್ನು ಹೆಚ್ಚಿಸಲು ಈ ಲಸಿಕೆ ತಯಾರಿಸಲಾಗಿದೆ.

* ಈ ಲಸಿಕೆಗೆ 'ಕಾರ್ನಿವಾಕ್ ಕೋವ್' ಎಂದು ಹೆಸರಿಸಲಾಗಿದೆ.

## ಭಾರತದ ಮುಖ್ಯ ನ್ಯಾಯಮೂರ್ತಿಯಾಗಿ ಎನ್ ವಿ ರಮಣ ನೇಮಕ



* ಭಾರತದ ಸುಪ್ರೀಂ ಕೋರ್ಟ್ ನ 48 ನೇ ಮುಖ್ಯ ನ್ಯಾಯಮೂರ್ತಿಯಾಗಿ ಸುಪ್ರೀಂ ಕೋರ್ಟ್ ನ ಹಿರಿಯ ನ್ಯಾಯಾದೀಶರಾದ ಎನ್ ವಿ ರಮಣ ಅವರನ್ನು ನೇಮಕ ಮಾಡಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಇತ್ತೀಚಿಗೆ ಅಂಕಿತ ಹಾಕಿದ್ದಾರೆ.

* ಎನ್ ವಿ ರಮಣ ಅವರು ಇದೆ ಏಪ್ರಿಲ್ 24ರಂದು ಪ್ರಮಾಣವಚನ ಸ್ವೀಕರಿಸುವರು.

* ಪ್ರಸ್ತುತ ಈ ಹುದ್ದೆಯಲ್ಲಿರುವ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರು ಏಪ್ರಿಲ್ 23ರಂದು ನಿವೃತ್ತಿಯಾಗುತ್ತಿರುವ ಹಿನ್ನಲೆ, ರಮಣ ರವರು ಹುದ್ದೆಗೆ ಆಯ್ಕೆಯಾಗಿದ್ದಾರೆ.

* ಎನ್ ವಿ ರಮಣ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ 2022 ರ ಆಗಸ್ಟ 26 ರವರೆಗೆ ಅಧಿಕಾರದಲ್ಲಿರುವರು.

* ಆಂಧ್ರ ಪ್ರದೇಶದ ಕೃಷ್ಣಾ ಜಿಲ್ಲೆಯ ಪೊನ್ನಾವರಂ ಗ್ರಾಮದಲ್ಲಿ ದಿನಾಂಕ 1957ರ ಆಗಸ್ಟ 27ರಂದು ಜನಿಸಿದರು. ಹಾಗು 1983ರ ಫೆಬ್ರುವರಿ 10 ರಿಂದ ತಮ್ಮ ವಕೀಲರಾಗಿ ವೃತ್ತಿ ಆರಂಭಿಸಿದ್ದರು.

## 2036 ರವರೆಗೂ ರಶಿಯಾ ಅಧ್ಯಕ್ಷಗಿರಿ ಹೊಂದಲಿರುವ ಪುಟಿನ್!



* ಪ್ರಸ್ತುತ ರಷ್ಯಾ ಅಧ್ಯಕ್ಷರಾಗಿರುವ ವ್ಲಾಡಿಮಿರ್ ಪುಟಿನ್ ಅವರು ಇನ್ನು 15 ವರ್ಷಗಳ ಕಾಲ ತಾವು ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ನೀಡುವಂತಹ ಕಾನೂನಿಗೆ ಇತ್ತೀಚಿಗೆ ಸಹಿ ಹಾಕಿರುವುದಾಗಿ ವರದಿಯಾಗಿದೆ.

* ಈ ಮೂಲಕ ಪುಟಿನ್ ಅವರು 6 ವರ್ಷ ಆಡಳಿತ ಅವಧಿಯನ್ನು ಎರಡು ಬಾರಿ ಪಡೆದುಕೊಳ್ಳಲಿದ್ದಾರೆ. ಅಂದರೆ ಇವರು 2036 ವರೆಗೂ ರಷ್ಯಾ ಅಧ್ಯಕ್ಷರಾಗಿ ಮುಂದುವರೆಯುವ ಸಾಧ್ಯತೆ ಇದೆ.

* ಪ್ರಸ್ತುತ 68 ವರ್ಷದ ಪುಟಿನ್ ರವರು 20ಕ್ಕೂ ಹೆಚ್ಚು ಸಮಯದಿಂದ ರಷ್ಯಾ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯುವ ಸಾಧ್ಯತೆ ಇದೆ.

* ಪುಟಿನ್ ಅವರ ಈ ನೂತನ ಕಾನೂನಿಗೆ ರಷ್ಯಾ ದೇಶದಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಇದು ಸಾಂವಿಧಾನಿಕ ಧಂಗೆ ಎಂದು ಟೀಕಿಸಲಾಗುತ್ತಿದೆ. ರಷ್ಯಾ ದೇಶದ ಬಗ್ಗೆ ಮಾಹಿತಿ :

* ರಷ್ಯಾದ ಒಕ್ಕೂಟವು ಪೂರ್ವ ಯುರೋಪ್ ಮತ್ತು ಉತ್ತರ ಏಷ್ಯಾದಲ್ಲಿ ವ್ಯಾಪಿಸಿರುವ ಖಂಡಾಂತರ ದೇಶವಾಗಿದೆ.

* ಅಧ್ಯಕ್ಷ: ವ್ಲಾಡಿಮಿರ್ ಪುಟಿನ್ ಟ್ರೆಂಡಿಂಗ್
* ರಾಜಧಾನಿ: ಮಾಸ್ಕೋ
* ಜನಸಂಖ್ಯೆ: 14.44 ಕೋಟಿ (2019)
* ಕರೆನ್ಸಿ:ರಷ್ಯನ್ ರೂಬಲ್
* ಖಂಡ:ಯುರೋಪ್, ಏಷ್ಯಾ

### ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಜಿಟಿ ದೇವೇಗೌಡ ಆಯ್ಕೆ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನೂತನ ಅಧ್ಯಕ್ಷರಾಗಿ ಮಾಜಿ ಸಚಿವ ಜಿ.ಟಿ.ದೇವೇಗೌಡ ಅವರು ಅವಿರೋಧವಾಗಿ ಆಯ್ಕೆಯಾದರು. ಹಾಗು ಉಪಾಧ್ಯಕ್ಷರಾಗಿ ಜಗದೀಶ್.ಎಂ ಕವಟಗಿ ಮಠಯವರನ್ನು ಅವಿರೋಧವಾಗಿ ಆಯ್ಕೆಮಾಡಲಾಗಿದೆ.

### ಅಮೆರಿಕ ಅಧ್ಯಕ್ಷರ ವಿಶೇಷ ರಾಯಭಾರಿ ಜೊತೆ ಸಚಿವ ಪ್ರಕಾಶ್ ಜಾವಡೇಕರ್ ಚರ್ಚೆ




* ಅಮೇರಿಕಾ ಅಧ್ಯಕ್ಷರ ವಿಶೇಷ ರಾಯಭಾರಿ ಜಾನ್ ಕೆರ್ರಿ ನೇತೃತ್ವದ ನಿಯೋಗವು ತಾಪಮಾನ ಬದಲಾವಣೆ ಕುರಿತು ಕೇಂದ್ರ ಪರಿಸರ ಸಚಿವ ಪ್ರಕಾಶ್ ಜಾವಡೇಕರ್ ಜೊತೆ ಇತ್ತೀಚಿಗೆ ಚರ್ಚಿಸಿತು.

* ಈ ಭೇಟಿಯಲ್ಲಿ ತಾಪಮಾನ ಪರಿಸ್ಥಿತಿ, ಜಂಟಿ ಸಂಶೋಧನೆ ಮತ್ತು ಸಹಭಾಗಿತ್ವ ಕುರಿತು ಚರ್ಚೆ ನಡೆಸಲಾಯಿತು.

* ಇದೆ ಏಪ್ರಿಲ್ 22 23ರಂದು ತಾಪಮಾನ ಬದಲಾವಣೆ ಕುರಿತು ವಿಶ್ವಮುಖಂಡರು ವರ್ಚುಯಲ್ ಸಭೆ ನಡೆಸಲಿದ್ದಾರೆ.

### ಕೇಂದ್ರ ಕಂದಾಯ ಇಲಾಖೆ ಕಾರ್ಯದರ್ಶಿಯಾಗಿ ತರುಣ್ ಬಜಾಜ್ ನೇಮಕ



* ಕೇಂದ್ರ ಸರ್ಕಾರವು ಇತ್ತೀಚಿಗೆ ಕಂದಾಯ ಇಲಾಖೆಯ ಕಾರ್ಯದರ್ಶಿಯನ್ನಾಗಿ ಹಿರಿಯ ಅಧಿಕಾರಿ ತರುಣ್ ಬಜಾಜ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ.

* 1988ರ ಬ್ಯಾಚಿನ ಹರಿಯಾಣ ಕೇಡರ್ ನ IAS ಅಧಿಕಾರಿಯಾಗಿದ್ದ ಇವರು ಪ್ರಸ್ತುತ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## 08-04-2021

### MEIL ನಿಂದ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ರಿಗ್ ನಿರ್ಮಾಣ



* ಮೆಘಾ ಇಂಜಿನಿಯರಿಂಗ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಸಂಸ್ಥೆಯು ಇಂಧನ ನಿಕ್ಷೇಪವನ್ನು ಹೊರತರಲಿರುವ ಅತ್ಯಾಧುನಿಕ ಮತ್ತು ದೇಶಿಯ ತಂತ್ರಜ್ಞಾನದ ರಿಗ್ ಗಳನ್ನು ನಿರ್ಮಿಸಿದೆ.

* ಎಂಇಐಎಲ್ ಸಂಸ್ಥೆಯು ತಯಾರಿಸಿರುವ ರಿಗ್ ಗಳು ಸುಮಾರು 1500 ಹೆಚ್‌ಪಿ ಸಾಮರ್ಥ್ಯ ಹೊಂದಿದ್ದು, 4 ಕಿ.ಮೀ.ಗಳಷ್ಟು ಆಳದ ಭೂಗರ್ಭ ಹೊಕ್ಕು ಇಂಧನ ಬಾವಿ ನಿರ್ಮಿಸಿ ಇಂಧನ ನಿಕ್ಷೇಪವನ್ನು ಹೊರತರಲಿವೆ.

* ಈ ದೇಶಿಯ ನಿರ್ಮಿತ ರಿಗ್‌ಗಳು ಸುಮಾರು 40 ವರ್ಷಗಳ ಸುದೀರ್ಘ ಅವಧಿಯವರೆಗೆ ತಾಳಿಕೆ ಬರುವುದಾಗಿ ಸಂಸ್ಥೆ ಘೋಷಿಸಿದೆ.

* ಈ ಅತ್ಯಾಧುನಿಕ ರಿಗ್ ಗುಜರಾತ್ ನ ಅಹ್ಮದಾಬಾದ್ ವ್ಯಾಪ್ತಿಯಲ್ಲಿನ ಕಲೂಲ್‌ನಲ್ಲಿ ಕಾರ್ಯಾರಂಭಿಸಿವೆ.

### RBI ನಿಂದ ಪರಿಷ್ಕೃತ ರೆಪೋ ದರ ಪ್ರಕಟ



ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಇತ್ತೀಚಿಗೆ ತನ್ನ ಹಣಕಾಸು ನೀತಿ ಪರಿಶೀಲನೆ ಮಾಡಿ ರೆಪೋ ದರ

ಮತ್ತು ರಿವರ್ಸ್ ರೆಪೋ ದರದಲ್ಲಿ ಯಾವುದೇ ಬದಲಾವಣೆ ಆಗದೆ ಹಾಗೆಯೆ ಉಳಿಸಿದೆ.

* ರೆಪೋ ದರವನ್ನು ಈ ಹಿಂದಿನ ಶೇಕಡಾ 4ರಷ್ಟು ಮತ್ತು ರಿವರ್ಸ್ ರೆಪೋ ದರವನ್ನು ಶೇಕಡಾ 3.35ರಷ್ಟು ಮುಂದುವರೆಯಲಿದೆ.

* ಇನ್ನು ದೇಶದ 2021 22ರ ನೈಜ ಜಿಡಿಪಿ ಬೆಳವಣಿಗೆಯ ದರವನ್ನು ಶೇಕಡಾ 10.5 ರಷ್ಟಕ್ಕೆ ಉಳಿಸಿಕೊಂಡಿರುವುದಾಗಿ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಮಾಹಿತಿ ನೀಡಿದ್ದಾರೆ.

### ಫೋರ್ಬ್ಸ್ ಸಿರಿವಂತರ ಕುರಿತಾದ 35ನೇ ವಾರ್ಷಿಕ ಪಟ್ಟಿ ಪ್ರಕಟ



ಫೋರ್ಬ್ಸ್ ಇತ್ತೀಚಿಗೆ ವಿಶ್ವದ ಸಿರಿವಂತರ ಕುರಿತಾದ 35ನೇ ವಾರ್ಷಿಕ ಪಟ್ಟಿಯನ್ನು ಪ್ರಕಟಿಸಿದ್ದು, ಅಮೆಜಾನ್ ಸಂಸ್ಥೆಯ ಸಿಇಒ ಹಾಗೂ ಸಂಸ್ಥಾಪಕ ಜೆಫ್ ಬೇಜೋಸ್ ಅವರು ಸತತ ನಾಲ್ಕನೇ ಬಾರಿಗೆ ವಿಶ್ವದ ಅಗ್ರಗಣ್ಯ ಶ್ರೀಮಂತರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ಇನ್ನು ಎರಡನೇ ಸ್ಥಾನದಲ್ಲಿ ಟೆಸ್ಲಾ ಮತ್ತು ಸ್ಪೇಸ್ ಎಕ್ಸ್‌ನ ಸಿಇಒ ಎಲೋನ್ ಮಸ್ಕ್ ಸ್ಥಾನ ಪಡೆದಿದ್ದಾರೆ.

* ಭಾರತದ ರಿಲಯನ್ಸ್ ಇಂಡಸ್ಟ್ರೀಸ್‌ನ ಮುಖ್ಯಸ್ಥ ಮುಕೇಶ್ ಅಂಬಾನಿಯವರು ಈ ಪಟ್ಟಿಯಲ್ಲಿ 10 ನೇ ಸ್ಥಾನ ಪಡೆದುಕೊಂಡಿದ್ದಾರೆ. ಹಾಗು ಏಷ್ಯಾದ ಶ್ರೀಮಂತ ವ್ಯಕ್ತಿಯಾಗಿ ಹೊರಹೊಮ್ಮಿದ್ದಾರೆ.

* ಇನ್ನು ಜಗತ್ತಿನಲ್ಲಿ ಅತಿ ಹೆಚ್ಚು ಶತಕೋಟ್ಯಧೀಶರನ್ನು ಹೊಂದಿದ ರಾಷ್ಟ್ರಗಳ ಪೈಕಿ ಅಮೆರಿಕಾ ಮೊದಲ ಸ್ಥಾನ, ಚೀನಾ ಎರಡನೇ ಸ್ಥಾನ ಹಾಗು ಮೂರನೇ ರಾಷ್ಟ್ರ ಭಾರತ ಎಂದು ಫೋರ್ಬ್ಸ್ ವರದಿ ಮಾಡಿದೆ.

### ತಾಳೆ ಎಣ್ಣೆಯ ಆಮದು ನಿಷೇದಿಸಿದ ಶ್ರೀಲಂಕಾ



* ಶ್ರೀಲಂಕಾ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ತಾಳೆ ಎಣ್ಣೆಯ ಆಮದನ್ನು ನಿಷೇಧಿಸಿ ಆದೇಶ ಹೊರಡಿಸಿದೆ.

* ಶ್ರೀಲಂಕಾ ಅಧ್ಯಕ್ಷರಾದ ಗೋಟಾಬಾಯ ರಾಜಪಕ್ಸೆ ಈ ಆದೇಶ ಹೊರಡಿಸಿದ್ದು, ಈ ಮೂಲಕ ಸ್ಥಳೀಯ ತೆಂಗಿನ ಎಣ್ಣೆ ಉದ್ಯಮಕ್ಕೆ ಈ ಆದೇಶ ಉಪಯೋಗವಾಗುವ ಸಾಧ್ಯತೆಯಿದೆ.

* ಇನ್ನು ಶ್ರೀಲಂಕಾದಲ್ಲಿ ತಾಳೆ ಮರಗಳನ್ನು ಕ್ರಮೇಣ ಕಡಿಮೆ ಮಾಡಿ, ರಬ್ಬರ್ ಮರಗಳನ್ನು ಅಥವಾ ಪರಿಸರ ಸ್ನೇಹಿ ಬೆಳೆಗಳನ್ನು ಬೆಳೆಸುವಂತೆ ಕಂಪನಿಗಳಿಗೆ ಸೂಚನೆ ನೀಡಲಾಗಿದೆ.

## 09-04-2021

### ಕಲಬುರಗಿ ಜಿಲ್ಲೆಯಲ್ಲಿ 500 MW ಸೌರ ವಿದ್ಯುತ್ ಉತ್ಪಾದನಾ ಘಟಕ



* 500 MW ಸೌರ ವಿದ್ಯುತ್ ಉತ್ಪಾದನಾ ಘಟಕ ಕರ್ನಾಟಕದ ಕಲಬುರಗಿಯಲ್ಲಿ ಆರಂಭಿಸಲು ಮುಖ್ಯಮಂತ್ರಿ ಯಡಿಯೂರಪ್ಪ ಅನುಮತಿಯನ್ನು ನೀಡಿದ್ದಾರೆ.

* ಕಲಬುರಗಿ ಸಮೀಪದ ಫರಹತಾಬಾದ್ ಪ್ರದೇಶದಲ್ಲಿ ಈ ಸೌರ ವಿದ್ಯುತ್ ಕಚೇರಿ ಪ್ರಾರಂಭಿಸಲು ಸಮ್ಮತಿಯನ್ನು ನೀಡಲಾಗಿದೆ ಜೊತೆಗೆ ಸ್ಥಳ ಪರಿಶೀಲನೆ ನಡೆಸಲಾಗಿದೆ ಎಂದು ತಿಳಿದು ಬಂದಿದೆ.

* ತುಮಕೂರು ಜಿಲ್ಲೆಯ ಪಾವಗಡದ ಸೌರಶಕ್ತಿ ಪಾರ್ಕ್ ಮಾದರಿಯಲ್ಲಿಯೇ ಕಲಬುರಗಿ ಜಿಲ್ಲೆಯ ಫರಹತಾಬಾದ್ ನಲ್ಲಿ ಪಿಡಿಕೆಎಲ್‌ಗೆ ಸೇರಿದ ಸರಿ ಸುಮಾರು 1500 ಎಕರೆ ಜಾಗದಲ್ಲಿ 500 MW ಸಾಮರ್ಥ್ಯ ಸೌರಶಕ್ತಿ ವಿದ್ಯುತ್ ಉತ್ಪಾದನಾ ಘಟಕವನ್ನು ನಿರ್ಮಿಸಲಾಗುವದು ಎಂದು ತಿಳಿಸಲಾಗಿದೆ.

### ಭಾರತ ಚೀನಾ ನಡುವೆ ಕಾರ್ಪ್ ಕಮಾಂಡರ್ ಸಭೆ



* ಭಾರತ ಚೀನಾ ನಡುವೆ 11ನೇ ಸುತ್ತಿನ ಕಾರ್ಪ್ ಕಮಾಂಡರ್ ಸಭೆ ಪಂಗಾಂಗ್ ಸರೋವರದಲ್ಲಿ ನಡೆಯಲಿದೆ.

* ಈ ಕಾರ್ಪ್ ಕಮಾಂಡರ್ ಸಭೆಯಲ್ಲಿ ಪೂರ್ವ ಲಡಾಖ್'ನ ಹಲವು ಘರ್ಷಣೆ ಸ್ಥಳಗಳಲ್ಲಿ ಕಠಿಣ ಪರಿಸ್ಥಿತಿಯನ್ನು ಕಡಿಮೆ ಮಾಡಲಿದೆ ಎನ್ನಲಾಗಿದೆ.

## ಅಮೆರಿಕದಿಂದ ಫೆಲೆಸ್ತೀನ್ ನಿರಾಶ್ರಿತರಿಗಾಗಿ 150 ಮಿಲಿಯನ್ ಡಾಲರ್ ದೇಣಿಗೆ



* ಅಮೇರಿಕ ದೇಶವು ಫೆಲೆಸ್ತೀನ್ ನಿರಾಶ್ರಿತರ ಕಲ್ಯಾಣಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ವಿಶ್ವಸಂಸ್ಥೆಯ ಪರಿಹಾರ ಮತ್ತು ಕೆಲಸ ಸಂಸ್ಥೆಗೆ 150 ಮಿಲಿಯ ಡಾಲರ್ ದೇಣಿಗೆ ನೀಡುವುದಾಗಿ ಅಮೆರಿಕ ಘೋಷಿಸಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಯಂಟನಿ ಬ್ಲಿಂಕನ್ ತಿಳಿಸಿದರು.

* 1949ರಲ್ಲಿ ಈ ಸಂಸ್ಥೆಯು ಸ್ಥಾಪನೆಯಾಗಿದೆ ಹಾಗೂ ಇದು 2018ರವರೆಗೂ ಅಮೆರಿಕದ ದೊಡ್ಡ ದೇಣಿಗೆ ಸಂಸ್ಥೆಯಾಗಿತ್ತು.

* ಪ್ರಸ್ತುತ 1949ರಲ್ಲಿ ಸ್ಥಾಪನೆಯಾದ ಈ ಯುಎನ್‌ಆರ್ ಡಬ್ಲ್ಯುಎ (UNRWA) 5 ಲಕ್ಷಕ್ಕೂ ಅಧಿಕ ಫೆಲೆಸ್ತೀನ್ ಬಾಲಕರು ಮತ್ತು ಬಾಲಕಿಯರಿಗೆ ಶಿಕ್ಷಣವನ್ನು ಒದಗಿಸುತ್ತಿದೆ.

## ದೇಶದಲ್ಲಿ ಏಪ್ರಿಲ್ 11 ರಿಂದ 14ರವರೆಗೆ ವ್ಯಾಕ್ಸಿನ್ ಉತ್ಸವ



* ಪ್ರಧಾನಿ ಮೋದಿಯವರು ಇತ್ತೀಚಿಗೆ ದಿನಾಂಕ ಏಪ್ರಿಲ್ 11 ರಿಂದ 14 ರವರೆಗೆ ದೇಶದಲ್ಲಿ ವ್ಯಾಕ್ಸಿನ್ ಉತ್ಸವ ನಡೆಸಲಾಗುವುದು ಎಂದು ಘೋಷಿಸಿದ್ದಾರೆ, ಈ ಉತ್ಸವದ ಮೂಲಕ 45 ವರ್ಷಕ್ಕಿಂತ ಮೇಲ್ಪಟ್ಟ ಜನಗಳಿಗೆ ಶೇಕಡಾ 100 ರಷ್ಟು ಕೋವಿಡ್ ಲಸಿಕೆಯ ತಲುಪಿಸುವ ಗುರಿ ಹೊಂದಲಾಗಿದೆ ಎಂದು ಪ್ರಧಾನಿ ಮೋದಿ ತಿಳಿಸಿದರು.

## ಬೆಂಗಳೂರು ವಿಮಾನ ನಿಲ್ದಾಣಕ್ಕೆ ಗೋಲ್ಡನ್ ಪೀಕಾಕ್ ರಾಷ್ಟ್ರೀಯ ಗೌರವ



* 2020ನೇ ಸಾಲಿನ ಗೋಲ್ಡನ್ ಪೀಕಾಕ್, ರಾಷ್ಟ್ರೀಯ ಪ್ರಶಸ್ತಿಯನ್ನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪಡೆದುಕೊಂಡಿದೆ.

* ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಮ್ಮಿಕೊಂಡಿರುವ 'ನಮ್ಮ ಶಿಕ್ಷಣ' ಕಾರ್ಯಕ್ರಮಕ್ಕೆ ಪುರಸ್ಕಾರ ಲಭಿಸಿದೆ.

* ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು 'ನಮ್ಮ ಶಿಕ್ಷಣ' ಕಾರ್ಯಕ್ರಮದ ಅಡಿಯಲ್ಲಿ 5 ಸರ್ಕಾರಿ ಶಾಲೆಗಳನ್ನು ಸ್ಥಾಪಿಸಿದೆ ಮತ್ತು 6 ಶಾಲೆಗಳನ್ನು ಉತ್ತಮ ರೀತಿಯಲ್ಲಿ ಸುಧಾರಿಸಿದೆ ಎಂದು ತಿಳಿಸಿದೆ.

* ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ಬಗ್ಗೆ ಮಾಹಿತಿ :

* ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ 4700 ಎಕರೆಗಳ ವಿಸ್ತಾರ ಹೊಂದಿದೆ.

* ಬೆಂಗಳೂರು ಮಧ್ಯ ಭಾಗದಿಂದ ಸುಮಾರು 40 ಕಿ.ಮೀ. ದೂರದಲ್ಲಿ ದೇವನಹಳ್ಳಿಯಲ್ಲಿದೆ.

* ಹೆಚ್.ಎ.ಎಲ್ ವಿಮಾನ ನಿಲ್ದಾಣದ ಕೊರತೆಯಿಂದ ಹೊಸದಾಗಿ ಜುಲೈ 2005 ರಲ್ಲಿ ಇದರ ಕಟ್ಟುವಿಕೆ ಪ್ರಾರಂಭವಾಗಿ, ಮೇ 23 ,2008 ರಂದು ತನ್ನ ಕಾರ್ಯಾರಂಭ ಮಾಡಿತು.

* ಇದು ಪ್ರಯಾಣಿಕರ ಬಳಸುವಿಕೆಯಲ್ಲಿ ಭಾರತದ ಮೂರನೇ ಅತಿ ದೊಡ್ಡ ವಿಮಾನ ನಿಲ್ದಾಣ.

## IAS ಅಧಿಕಾರಿ ಸಂಜೀವ್ ಕುಮಾರ AAI ಅಧ್ಯಕ್ಷ



* IAS ಅಧಿಕಾರಿ ಸಂಜೀವ್ ಕುಮಾರ ಅವರು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (AAI) ಅಧ್ಯಕ್ಷರಾಗಿ ಅಧಿಕಾರವನ್ನು ಸ್ವೀಕರಿಸಿದರು.

* ಈ ಮೊದಲು ಸಂಜೀವ್ ಕುಮಾರ್'ರವರು ಮಹಾರಾಷ್ಟ್ರ ಸರ್ಕಾರದ ಜಲಮಂಡಳಿ ಮತ್ತು ಇಂಧನ ಹಾಗೂ ಕೈಗಾರಿಕೆ ಸೇರಿದಂತೆ ಹಲವು ಸಚಿವಾಲಯಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

* ಈ ಮೊದಲು ಅರವಿಂದ್ ಸಿಂಗ್'ರವರು 2019ರ ನವೆಂಬರ್ 6 ರಿಂದ 2021ರ ಜನವರಿ 24ರ ವರೆಗೂ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (AAI) ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

## 9 ಕೋಟಿಗೂ ಅಧಿಕ ಕೋವಿಡ್ ಲಸಿಕೆ ಡೋಸ್'ಗಳನ್ನು ನೀಡಿದ ಭಾರತ




* ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಭಾರತ ದೇಶದಲ್ಲಿ ಇಲ್ಲಿಯತನಕ 9 ಕೋಟಿಗೂ ಹೆಚ್ಚು ಕೋವಿಡ್ 19 ಲಸಿಕೆ ಡೋಸ್'ಗಳನ್ನು ನೀಡಲಾಗಿದೆ ಎಂದು ತಿಳಿಸಿದೆ.

* ಇಲ್ಲಿಯವರೆಗೆ ಒಟ್ಟು 13,77,304 ಕೇಂದ್ರಗಳ ಮೂಲಕ 9,01,98,673 ಲಸಿಕೆ ಡೋಸ್'ಗಳನ್ನು ನೀಡಲಾಗಿದೆ.

* ಶೇ 9.92 ರಷ್ಟು ಲಸಿಕೆಯನ್ನು ಮಹಾರಾಷ್ಟ್ರ ರಾಜ್ಯದಲ್ಲಿ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

* ಭಾರತದಲ್ಲಿ ದಿನಕ್ಕೆ ಸರಾಸರಿ 34,30,502 ಡೋಸ್ ಲಸಿಕೆ ನೀಡಲಾಗುತ್ತಿದೆ.

* ಭಾರತವು ಪ್ರತಿದಿನ ಲಸಿಕೆ ನೀಡುತ್ತಿರುವ ಸಂಖ್ಯೆಯಲ್ಲಿ ಜಾಗತಿಕವಾಗಿ ಅಗ್ರಸ್ಥಾನದಲ್ಲಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

## ಭಾರತ ಸೀಶೆಲ್ಸ್ ನಡುವೆ ಉನ್ನತ ಮಟ್ಟದ ವರ್ಚುವಲ್ ಸಭೆ




* ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರು ಸೀಶೆಲ್ಸ್ ಅಧ್ಯಕ್ಷರೊಂದಿಗೆ ಉನ್ನತ ಮಟ್ಟದ ವರ್ಚುಯಲ್ ಕಾರ್ಯಕ್ರಮವನ್ನು ನಡೆಸಿದರು.

* ಭಾರತ ಸೀಶೆಲ್ಸ್ ಉನ್ನತ ಮಟ್ಟದ ವರ್ಚುವಲ್ ಸಭೆಯಲ್ಲಿ ಉಭಯ ರಾಷ್ಟ್ರಗಳ ನಾಯಕರು ಜಂಟಿಯಾಗಿ ಸೀಶೆಲ್ಸ್‌ನ ಹೊಸ ಮ್ಯಾಜಿಸ್ಟ್ರೇಟ್ ಕೋರ್ಟ್ ಕಟ್ಟಡವನ್ನು ಉದ್ಘಾಟಿಸಿದರು.


* ಸೀಶೆಲ್ಸ್ ಅಧ್ಯಕ್ಷರು 100 ಕೋಟಿ ಮೌಲ್ಯದ ಫಾಸ್ಟ್ ಪೆಟ್ರೋಲ್ ಹಡಗು ಹಾಗೂ 1MW ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರವನ್ನು ನೀಡಿದರು.

* ಭಾರತ ಸೀಶೆಲ್ಸ್ ರಾಷ್ಟ್ರಗಳ ಪ್ರಧಾನಿಗಳು 10 ಹೈ ಇಂಪ್ಯಾಕ್ಟ್ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು.

* ಭಾರತವು ಇಲ್ಲಿಯವರೆಗೆ 50,000 ಕೋವಿಶೀಲ್ಡ್ ಡೋಸ್ ಲಸಿಕೆಯನ್ನು ಸೀಶೆಲ್ಸ್‌ಗೆ ನೀಡಿದೆ.

# 10-04-2021

## ಪ್ರತಿವರ್ಷ ಭೂಮಿ ಮೇಲೆ ಉಲ್ಕೆಗಳು ಮತ್ತು ಕ್ಷುದ್ರ ಗ್ರಹಗಳಿಂದ 5000 ಟನ್ ಧೂಳು



* ಉಲ್ಕೆಗಳು ಹಾಗೂ ಕ್ಷುದ್ರ ಗ್ರಹಗಳಿಂದ ಪ್ರತಿ ವರ್ಷ ಭೂಮಿ ಮೇಲೆ 5,000 ಟನ್‌ಗಳಷ್ಟು ಧೂಳು ಬೀಳುತ್ತಲಿದೆ

ಎಂದು ವಿಜ್ಞಾನಿಗಳು ಇತ್ತೀಚಿಗೆ ಮಾಹಿತಿಯನ್ನು ನೀಡಿದ್ದಾರೆ.

* ಫ್ರಾನ್ಸ್‌ನ ರಾಷ್ಟ್ರೀಯ ವಿಜ್ಞಾನ ಸಂಶೋಧನಾ ಕೇಂದ್ರ, ಪ್ಯಾರಿಸ್‌ನ ಸಾಕ್ಲೇ ವಿವಿ ಹಾಗೂ ರಾಷ್ಟ್ರೀಯ ಪರಿಸರ ಇತಿಹಾಸ ಸಂಗ್ರಹಾಲಯ ಜಂಟಿಯಾಗಿ 20 ವರ್ಷಗಳ ಕಾಲ ಅಧ್ಯಯನ ನಡೆಸುವ ಮೂಲಕ ಈ ಮಾಹಿತಿಯನ್ನು ತಿಳಿಸಿದ್ದಾರೆ.

* ರಾಷ್ಟ್ರೀಯ ವಿಜ್ಞಾನ ಸಂಶೋಧನಾ ಕೇಂದ್ರದ ಸಂಶೋಧಕ ಜೀನ್ ಡುಪಾರ್ಟ್ ರವರು ಕಳೆದ 2 ದಶಕಗಳ ಅವಧಿಯಲ್ಲಿ ಉಲ್ಕಾಶಿಲೆಗಳ ಧೂಳಿನ ಕಣಗಳನ್ನು ಕಲೆಹಾಕಿ ಅಧ್ಯಯನ ಮಾಡುವ ಸಲುವಾಗಿ ಅಂಟಾರ್ಕ್ಟಿಕಾದಲ್ಲಿರುವ ಫ್ರಾಂಕೋ ಇಟಾಲಿಯಾ ಕಾಂಕಾರ್ಡಿಯಾ ಕೇಂದ್ರಕ್ಕೆ 6 ಬಾರಿ ಭೇಟಿ ನೀಡಿದ್ದಾರೆ. ರಾಷ್ಟ್ರೀಯ ವಿಜ್ಞಾನ ದಿನ :

* ಸಿ ವಿ ರಾಮನ್ ಅವರು ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಏಷ್ಯಾದ ಮೊತ್ತಮೊದಲ ವಿಜ್ಞಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು, ಇವರ ಪೂರ್ಣ ಹೆಸರು ಚಂದ್ರಶೇಖರ ವೆಂಕಟರಾಮನ್, 1888 ರ ನವೆಂಬರ್ 7 ರಂದು ತಮಿಳುನಾಡಿನ ತಿರುಚಿನಾಪಳ್ಳಿಯಲ್ಲಿ ಜನಿಸಿದರು.

* 1928 ರ ಫೆಬ್ರುವರಿ 28 ರಂದು ಭಾರತೀಯ ಭೌತಶಾಸ್ತ್ರಜ್ಞ ಸರ್ ಸಿ. ವಿ. ರಾಮನ್ ಅವರ 'ರಾಮನ್ ಪರಿಣಾಮ'ದ ಆವಿಷ್ಕಾರವನ್ನು ಗುರುತಿಸಲು ಪ್ರತಿ ವರ್ಷ ಫೆಬ್ರುವರಿ 28 ರಂದು ಭಾರತದಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ.

* ಅವರ ಈ ಆವಿಷ್ಕಾರಕ್ಕಾಗಿ 1930 ರಲ್ಲಿ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ ನೀಡಲಾಯಿತು.

## 50 ಕೋಟಿ ಲಿಂಕ್ಡ್ ಇನ್ (LinkedIn) ಬಳಕೆದಾರರ ಡೇಟಾ ಸೋರಿಕೆ




* ಈ ಹಿಂದೆ ವಿವಿಧ ದೇಶಗಳ 53 ಕೋಟಿ ಫೇಸ್ ಬುಕ್ ಬಳಕೆದಾರರ ದತ್ತಾಂಶ ಸೋರಿಕೆಯಾಗಿರುವ ಕುರಿತು ವರದಿಯಾಗಿತ್ತು, ಇದಾದ ಬಳಿಕ ಮತ್ತೆ ಇದೀಗ ಲಿಂಕ್ಡ್ ಇನ್ (LinkedIn) ಬಳಕೆ ಮಾಡುತ್ತಿರುವ ಸುಮಾರು 50 ಕೋಟಿ ಜನಗಳ ಮಾಹಿತಿ (ಡೇಟಾ) ಸೋರಿಕೆ ಆಗಿದೆ ಎಂದು ತಿಳಿದು ಬಂದಿದೆ.

* ಇದೀಗ ಭಾರತ ಸೇರಿ ವಿವಿಧ ದೇಶಗಳ ಜನರು ಬಳಸುವ ಅಂತರ್ಜಾಲತಾಣವಾಗಿರುವ ಲಿಂಕ್ಡ್ ಇನ್ 50 ಕೋಟಿ ಬಳಕೆದಾರರ ಇಮೇಲ್, ಫೋನ್ ನಂಬರ್, ಉದ್ಯೋಗ ಸೇರಿದಂತೆ ಖಾಸಗಿ ಮಾಹಿತಿ ಸೋರಿಕೆಯಾಗಿದೆ ಎಂದು ತಿಳಿಸಲಾಗಿದೆ.

* ಈ ಲಿಂಕ್ಡ್ ಇನ್ ಜಾಲತಾಣವು ಮೈಕ್ರೋಸಾಫ್ಟ್ ಒಡೆತನದಲ್ಲಿದೆ ಈ ಜಾಲತಾಣದ ಮೂರನೇ ಎರಡರಷ್ಟು ಬಳಕೆದಾರರ ಮಾಹಿತಿ ಡಾರ್ಕ್ ವೆಬ್'ನಲ್ಲಿ ಖರೀದಿಗೆ ಸಿಗಲಿದೆ ಎಂದು ತಿಳಿದು ಬಂದಿದೆ.

## ಉತ್ತರಾಖಂಡ ಸರ್ಕಾರವು 51 ದೇವಸ್ಥಾನಗಳ ಮೇಲಿನ ಸರ್ಕಾರದ ನಿಯಂತ್ರಣವನ್ನು ಹಿಂಪಡೆದಿದೆ



* ಉತ್ತರಾಖಂಡ ರಾಜ್ಯ ಸರ್ಕಾರವು ಇದೀಗ 51 ಹಿಂದೂ ಧಾರ್ಮಿಕ ಕೇಂದ್ರಗಳ ಮೇಲೆ ಸರ್ಕಾರಗಳ ನಿಯಂತ್ರಣವನ್ನು ಹಿಂಪಡೆದಿದೆ, ಈ ಮೂಲಕ ಉತ್ತರಾಖಂಡ ರಾಜ್ಯದ ಜನಗಳ ಬಹುದಿನಗಳ ಬೇಡಿಕೆ ಈಡೇರಿದೆ ಎನ್ನಲಾಗಿದೆ.

* ಉತ್ತರಾಖಂಡ ರಾಜ್ಯದ ದೇವಸ್ಥಾನಗಳಾದ ಬದ್ರಿನಾಥ, ಕೇದಾರನಾಥ, ಗಂಗೋತ್ರಿ ಹಾಗೂ ಯಮುನೋತ್ರಿಗಳೂ ಸೇರಿದಂತೆ ಒಟ್ಟಾರೆ 51 ಪುಣ್ಯಕ್ಷೇತ್ರಗಳ ಮೇಲಿನ ನಿಯಂತ್ರಣವನ್ನು ರಾಜ್ಯ ಸರ್ಕಾರವು ಕೈ ಬಿಟ್ಟಿದೆ ಎಂದು ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್ ತಿಳಿಸಿದರು. ಉತ್ತರಾಖಂಡ ರಾಜ್ಯದ ಬಗ್ಗೆ ಮಾಹಿತಿ :

* ಉತ್ತರಾಖಂಡ ಮೊದಲಿನ ಹೆಸರು ಉತ್ತರಾಂಚಲ, ಭಾರತ ಗಣರಾಜ್ಯದ 27 ನೆಯ ರಾಜ್ಯವನ್ನಾಗಿ 2000 ರ ನವೆಂಬರ್ 9 ರಂದು ರಚಿಸಲಾಯಿತು.

* ರಾಜ್ಯದ ಹೆಸರನ್ನು 2007ರ ಜನವರಿಯಲ್ಲಿ ಉತ್ತರಾಂಚಲದಿಂದ ಉತ್ತರಾಖಂಡವೆಂದು ಬದಲಿಸಲಾಯಿತು

* ರಾಜಧಾನಿ : ಡೆಹ್ರಾಡೂನ್
* ಜನಸಂಖ್ಯೆ : 84,79,562 (2001ರ ಪ್ರಕಾರ)
* ರಾಜ್ಯಪಾಲ : ಸುದರ್ಶನ್ ಅಗರ್ವಾಲ್
* ಮುಖ್ಯ ಮಂತ್ರಿ : ಬಿ.ಸಿ.ಖಂಡೂರಿ

## ಬ್ರಿಟನ್ ರಾಣಿ ಎರಡನೇ ಎಲಿಜಬೆತ್ ಪತಿ ಪ್ರಿನ್ಸ್ ಫಿಲಿಪ್ ವಿಧಿವಶ



* ಬ್ರಿಟನ್ ರಾಣಿಯಾಗಿರುವ ಎರಡನೇ ಎಲಿಜಬೆತ್ ಪತಿ ಪ್ರಿನ್ಸ್ ಫಿಲಿಪ್ ಅವರು ತಮ್ಮ 99 ವರ್ಷ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಪ್ರಿನ್ಸ್ ಫಿಲಿಪ್'ರವರು ಡ್ಯೂಕ್ ಆಫ್ ಎಡಿನ್ಬರ್ಗ್ ಎರಡನೇ ಎಲಿಜಬೆತ್'ರ ಪತಿಯಾಗಿ ಬ್ರಿಟಿಷ್ ರಾಜಮನೆತನದ ಸದಸ್ಯರಾಗಿದ್ದರು.

* ಫಿಲಿಪ್ ಗ್ರೀಕ್ ಮತ್ತು ಡ್ಯಾನಿಶ್ ರಾಜ ಕುಟುಂಬಗಳಲ್ಲಿ ಜನಿಸಿದರು.

* ಪ್ರಿನ್ಸ್ ಫಿಲಿಪ್'ರವರ ಕುಟುಂಬವು ಹದಿನೆಂಟು ತಿಂಗಳ ಮಗುವಾಗಿದ್ದಾಗ ಇವರನ್ನು ದೇಶದಿಂದ ಗಡಿಪಾರು ಮಾಡಿದ್ದರು.

## ಪಾಕಿಸ್ತಾನ ಸರ್ಕಾರದಿಂದ ದೇಗುಲ ಮರುನಿರ್ಮಾಣಕ್ಕೆ ರೂ 3.48 ಕೋಟಿ ಬಿಡುಗಡೆ



* ಪಾಕಿಸ್ತಾನದಲ್ಲಿ ಕಳೆದ ವರ್ಷ ಡಿಸೆಂಬರ್‌ನಲ್ಲಿ ಜಮಾಯಿತ್ ಉಲೇಮಾ ಏ ಇಸ್ಲಾಂ ಸಂಘಟನೆಯ ಸದಸ್ಯರು ಹಿಂದೂ ದೇವಾಲಯವನ್ನು ನಾಶಪಡಿಸಿದ್ದರು, ಇದೀಗ ಆ ದೇವಾಲಯ ಮರು ನಿರ್ಮಾಣಕ್ಕಾಗಿ ಪಾಕಿಸ್ತಾನ ಸರ್ಕಾರವು 3.48 ಕೋಟಿ ಪಾಕಿಸ್ತಾನಿ ರೂ. ಬಿಡುಗಡೆ ಮಾಡಿದೆ.

* ಈ ದೇವಾಲಯ ಮರು ನಿರ್ಮಾಣದ ಹಣವನ್ನು ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಸರ್ಕಾರವು ಬಿಡುಗಡೆಗೊಳಿಸಿದೆ.

* ಈ ಹಿಂದೆ ಅಂದರೆ 1997 ರಲ್ಲೊಂದು ಘಟನೆ ನಡೆದಿತ್ತು, ಆ ಸಂಧರ್ಭದಲ್ಲಿ ದೇಶದ ಸಂವಿಧಾನ ಪ್ರಕಾರ ಅಲ್ಪಸಂಖ್ಯಾತರಾಗಿರುವ ಹಿಂದುಗಳಿಗೆ ಪೂರ್ಣ ಪ್ರಮಾಣದ ಭದ್ರತೆಯನ್ನು ನೀಡಲಾಗುತ್ತದೆ ಎಂದು ಸ್ಥಳೀಯ ಮುಸ್ಲಿಂ ಧಾರ್ಮಿಕ ಮುಖಂಡರು ಭರವಸೆ ನೀಡಿದ್ದರು, ಆದರೆ ಆ ಯಾವ ಭರವಸೆ ಕೂಡ ಇಲ್ಲಿಯವರೆಗೂ ಪಾಲನೆಯಾಗಿಲ್ಲ ಎಂದು ತಿಳಿದು ಬಂದಿದೆ.

## ಟೆಸ್ಲಾ ಸಂಸ್ಥೆಯು 3 ಕಾರು ತಯಾರಿಕ ಘಟಕಗಳು ಶೀಘ್ರ ಭಾರತದಲ್ಲಿ ಪ್ರಾರಂಭ




* ಪ್ರಸ್ತುತ ಇಲೆಕ್ಟ್ರಿಕ್ ಕಾರು ತಯಾರಿಕಾ ಸಂಸ್ಥೆಯಾಗಿರುವ ಟೆಸ್ಲಾ ಕಂಪನಿಯು ಭಾರತದಲ್ಲಿ ತನ್ನ 3 ಕಾರು ತಯಾರಿಕಾ ಘಟಕಗಳನ್ನೂ ಸ್ಥಾಪಿಸಲಿದೆ ಎಂದು ತಿಳಿಸಿದೆ.

* ಟೆಸ್ಲಾ ಸಂಸ್ಥೆಯು ನೀಡಿರುವ ಮಾಹಿತಿಯ ಪ್ರಕಾರ ಆ 3 ಕಾರು ತಯಾರಿಕ ಘಟಕಗಳನ್ನು ಬೆಂಗಳೂರು, ನವದೆಹಲಿ ಹಾಗೂ ಮುಂಬೈನಲ್ಲಿ ಪ್ರಾರಂಭ ಮಾಡಲಿದೆ ಎಂದು ತಿಳಿಸಿದೆ.

* ಟೆಸ್ಲಾ ಒಂದು ಅಮೆರಿಕದ ಎಲೆಕ್ಟ್ರಿಕ್ ವಾಹನ ಮತ್ತು ಕ್ಯಾಲಿಫೋರ್ನಿಯಾದ ಪಾಲೊ ಆಲ್ಟೊ ಮೂಲದ ಕ್ಲೀನ್ ಎನರ್ಜಿ ಕಂಪನಿಯಾಗಿದೆ.

* ಟೆಸ್ಲಾದ ಪ್ರಸ್ತುತ ಉತ್ಪನ್ನಗಳಲ್ಲಿ ಎಲೆಕ್ಟ್ರಿಕ್ ಕಾರುಗಳು, ಮನೆಯಿಂದ ಗ್ರಿಡ್ ಪ್ರಮಾಣದ ಬ್ಯಾಟರಿ, ಸೌರ ಫಲಕಗಳು ಈ ಎಲ್ಲ ಸೇವೆಗಳು ಟೆಸ್ಲಾ ಕಂಪನಿಯಲ್ಲಿ ಸೇರಿವೆ.

## ಇಟಲಿಯ ನೌಕಾಪಡೆಯಿಂದ ಹತ್ಯೆಯಾದ ಭಾರತೀಯ ಮೀನುಗಾರರ ಪರಿಹಾರ ಜಮಾ

* ಇಟಾಲಿಯನ್ ನೌಕಾಪಡೆಯ ಇಬ್ಬರು ಭಾರತೀಯ ಮೀನುಗಾರರನ್ನು 2012ರ ಫೆಬ್ರವರಿ ತಿಂಗಳಲಿನಲ್ಲಿ ಕೇರಳದ ಕರಾವಳಿಯಲ್ಲಿ ಕೊಲ್ಲಲಾಗಿತ್ತು, ಇಟಲಿಯು ಇದೀಗ ಹತ್ಯೆಯಾದ ಭಾರತೀಯ ಮೀನುಗಾರರಿಗೆ 10 ಕೋಟಿ ರೂ. ಪರಿಹಾರವನ್ನು ನೀಡಿದೆ, ಸುಪ್ರೀಂ ಕೋರ್ಟ್ ಆ ಹಣವನ್ನು ತನ್ನ ಖಾತೆಗೆ ಜಮಾ ಮಾಡುವಂತೆ ಕೇಂದ್ರಕ್ಕೆ ಸೂಚಿಸಿದೆ.

* ಇಟಲಿ ನೀಡಿದ ಪರಿಹಾರವನ್ನು ಮೀನುಗಾರರ ಸಂಬಂಧಿಗಳಿಗೆ ನೀಡಲಾಗುತ್ತದೆ ಎಂದು ಉನ್ನತ

ನ್ಯಾಯಾಲಯ ಮುಖ್ಯ ನ್ಯಾಯಮೂರ್ತಿ ಎಸ್ ಎ ಬೊಬ್ಡೆ ಮತ್ತು ನ್ಯಾಯಮೂರ್ತಿಗಳಾದ ಎಸ್ ಎಸ್ ಬೋಪಣ್ಣ ಮತ್ತು ವಿ ರಾಮಸುಬ್ರಮಣಿಯನ್ ರವರು ತಿಳಿಸಿದರು. ಇಟಾಲಿಯನ್ ನೌಕಾಪಡೆ ಬಗ್ಗೆ ಮಾಹಿತಿ :

* ಇಟಾಲಿಯನ್ ನೌಕಾಪಡೆಯು ಇಟಾಲಿಯನ್ ಗಣರಾಜ್ಯದ ನೌಕಾಪಡೆಯಾಗಿದೆ.

* ಇದು ಇಟಾಲಿಯನ್ ಸಶಸ್ತ್ರ ಪಡೆಗಳ ನಾಲ್ಕು ಶಾಖೆಗಳಲ್ಲಿ ಒಂದಾಗಿದೆ ಮತ್ತು ಎರಡನೆಯ ಮಹಾಯುದ್ಧದ ನಂತರ 1946 ರಲ್ಲಿ ರೆಜಿಯಾ ಮರೀನಾದಲ್ಲಿ ಉಳಿದುಕೊಂಡಿತು.

* ಗಾತ್ರ : 30,923 ಸಿಬ್ಬಂದಿ ಮತ್ತು 184 ಹಡಗುಗಳು ,70 ವಿಮಾನಗಳು
* ಸ್ಥಾಪನೆ : 1861
* ಪಾತ್ರ : ನೌಕಾ ಯುದ್ಧ
* ಅಂಗಸಂಸ್ಥೆಗಳು : ಪೋರ್ಟ್ ಕ್ಯಾಪ್ಟನ್ಸೀಸ್ ಕಾರ್ಪ್ಸ್ ಕೋಸ್ಟ್ ಗಾರ್ಡ್,

## ಭಾರತವು ಇರಾನ್ ಚಬಹಾರ್ ಬಂದರಿನ ಅಭಿವೃದ್ಧಿ ಕಾರ್ಯ ನಡೆಸಿದೆ



* ಭಾರತವು ಇರಾನ್ ಚಬಹಾರ್ ಬಂದರಿನ ಅಭಿವೃದ್ಧಿ ಕಾರ್ಯ ನಡೆಸಿದೆ, ಈ ಹಿಂದೆ ಕೆಲಕಾಲವರೆಗೆ ಬಂದರಿನ ಅಭಿವೃದ್ಧಿ ಸ್ಥಗಿತಗೊಳಿಸಲಾಗಿತ್ತು.

* ಇದೀಗ ಇರಾನ್‌ನ ಚಬಹಾರ್ ಬಂದರು ಅಭಿವೃದ್ಧಿ ಕಾರ್ಯವು ಭರದಿಂದ ಸಾಗಿದೆ ಮತ್ತು ಇದು ಮುಂಬರುವ ತಿಂಗಳಿನಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಹಾಗೂ ಈ ಬಂದರು ಬಳಕೆಗೆ ಲಭ್ಯವಾಗಲಿದೆ ಎಂದು ಅಮೆರಿಕದ ಸಂಸತ್‌ಗೆ ಸಲ್ಲಿಸಲಾದ ವರದಿಯಲ್ಲಿ ಭಾರತ ತಿಳಿಸಿದೆ.

* ಈ ಇರಾನ್‌ನ ಚಬಹಾರ್ ಬಂದರು ಅಭಿವೃದ್ಧಿಯಿಂದಾಗಿ ಪಾಕಿಸ್ತಾನದಿಂದ ಯಾವುದೇ ಅಡ್ಡ ಪರಿಣಾಮ ಹಾಗೂ ಅಡೆತಡೆಗಳಿಲ್ಲದೆ ಅಫ್ಘಾನಿಸ್ತಾನದೊಂದಿಗೆ ವ್ಯಾಪಾರ ವಹಿವಾಟ ಮಾಡುವ ಅನುಕೂಲವಾಗಲಿದೆ ಎಂದು ಭಾರತ ತಿಳಿಸಿದೆ.

* ಭಾರತವು 2015ರಲ್ಲಿ ಚಬಹಾರ್ ಬಂದರು ಮತ್ತು ರೈಲು ಮಾರ್ಗದ ಅಭಿವೃದ್ಧಿಗೆ ನೆರವು ನೀಡಲು ಒಪ್ಪಿಗೆಯನ್ನು ನೀಡಿತ್ತು.

* ಈ ಹಿಂದೆ ಪ್ರಧಾನಿ ನರೇಂದ್ರ ಮೋದಿಯವರು 2016ರಲ್ಲಿ ಇರಾನ್‌ಗೆ ಭೇಟಿ ನೀಡಿದ ಸಂಧರ್ಭದಲ್ಲಿ 3,473 ಕೋಟಿ ರೂ. ವೆಚ್ಚದಲ್ಲಿ ಬಂದರು ಅಭಿವೃದ್ಧಿ ಯೋಜನೆಯ ಒಪ್ಪಂದಕ್ಕೆ ಸಹಿ ಹಾಕಿದ್ದರು. ಇರಾನ್ ದೇಶದ ಬಗ್ಗೆ ಮಾಹಿತಿ :

* ಪರ್ಷಿಯಾ ಎಂದೂ ಕರೆಯಲ್ಪಡುವ ಇರಾನ್ ಮತ್ತು ಅಧಿಕೃತವಾಗಿ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಪಶ್ಚಿಮ ಏಷ್ಯಾದ ಒಂದು ದೇಶವಾಗಿದೆ.

* ಇದು ವಾಯುವ್ಯಕ್ಕೆ ಅರ್ಮೇನಿಯಾ ಮತ್ತು ಅಜೆರ್ಬೈಜಾನ್, ಉತ್ತರಕ್ಕೆ ಕ್ಯಾಸ್ಪಿಯನ್ ಸಮುದ್ರ ಗಡಿಯಲ್ಲಿದೆ

* ರಾಜಧಾನಿ: ಟೆಹ್ರಾನ್
* ಕರೆನ್ಸಿ: ಇರಾನಿನ ರಿಯಾಲ್
* ಅಧ್ಯಕ್ಷ: ಹಸನ್ ರೂಹಾನಿ
* ಸುಪ್ರೀಂ ನಾಯಕ: ಅಲಿ ಖಮೇನಿ
* ಅಧಿಕೃತ ಭಾಷೆ: ಪರ್ಷಿಯನ್

# 12-04-2021

## ಸುಶೀಲ್‌ಚಂದ್ರ ಮುಂದಿನ ಮುಖ್ಯ ಚುನಾವಣಾ ಆಯುಕ್ತ



* ಸುಶೀಲ್ ಚಂದ್ರ ಅವರು ಮುಂದಿನ ಮುಖ್ಯ ಚುನಾವಣಾ ಆಯುಕ್ತರಾಗಿ ನೇಮಕವಾಗಲಿದ್ದಾರೆ.

* ಪ್ರಸ್ತುತ ಚುನಾವಣಾ ಆಯೋಗವು ಅತ್ಯಂತ ಹಿರಿಯ ಆಯುಕ್ತರನ್ನೇ ಮುಖ್ಯ ಚುನಾವಣಾ ಆಯುಕ್ತ ಹುದ್ದೆಗೆ ನೇಮಕ ಮಾಡುವ ಸಾಧ್ಯತೆ ಇದೆ.

* ಸುಶೀಲ್ ಚಂದ್ರ ಅವರನ್ನು ಮುಖ್ಯ ಚುನಾವಣಾ ಆಯುಕ್ತರಾಗಿ ನೇಮಕ ಮಾಡಲು ಸರ್ಕಾರವು ಒಪ್ಪಿಗೆಯನ್ನು ನೀಡಿದೆ ಎಂದು ತಿಳಿದು ಬಂದಿದೆ.

* ಇದೆ ಏಪ್ರಿಲ್ 13ರಂದು ಮುಖ್ಯ ಚುನಾವಣಾ ಆಯುಕ್ತರಾಗಿರುವ ಸುನೀಲ್ ಅರೋರಾ ಅವರ ಅವಧಿ ಮುಗಿಯಲಿದೆ, ಮುಂದಿನ ದಿನಗಳಲ್ಲಿ ಸುಶೀಲ್ ಚಂದ್ರ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ತಿಳಿದು ಬಂದಿದೆ.

ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಬಗ್ಗೆ ಮಾಹಿತಿ :

* ರಾಜ್ಯ ಚುನಾವಣಾ ಆಯೋಗವು ಒಂದು ಸಾಂವಿಧಾನಿಕ ಸಂಸ್ಥೆಯಾಗಿರುತ್ತದೆ.

* ಭಾರತ ಸಂವಿಧಾನದ 73 ಹಾಗೂ 74ನೇ ತಿದ್ದುಪಡಿಗಳನ್ವಯ ರಾಜ್ಯದಲ್ಲಿನ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವ ಸಲುವಾಗಿ ದಿನಾಂಕ: 26- 05- 1993 ರಂದು ಅಸ್ತಿತ್ವಕ್ಕೆ ಬಂದಿರುತ್ತದೆ.

* ರಾಜ್ಯ ಚುನಾವಣಾ ಆಯೋಗವನ್ನು ಭಾರತ ಸಂವಿಧಾನದ ಅನುಚ್ಛೇದ 243 (ಕೆ) ಹಾಗೂ 243 (ಜೆಡ್ಎ) ರಡಿಯಲ್ಲಿ ರಚಿಸಲಾಗಿದೆ.

* ರಾಜ್ಯ ಚುನಾವಣಾ ಆಯೋಗವು ಸ್ವತಂತ್ರ ಸಂಸ್ಥೆಯಾಗಿದೆ,

* ಗ್ರಾಮೀಣ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ನಡೆಸಲಾಗುತ್ತದೆ.

* ನಾಲ್ಕು ಹಂತದ ನಗರ ಸ್ಥಳೀಯ ಸಂಸ್ಥೆ ಅಂದರೆ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಚುನಾವಣೆಯನ್ನು ನಡೆಸುತ್ತದೆ.

## ಭಾರತ ಚೀನಾ ದೇಶಗಳು ಪೂರ್ವ ಲಡಾಖ್‌ನಲ್ಲಿ ಸ್ಥಿರತೆ ಕಾಪಾಡಲು ಒಪ್ಪಿಗೆ




* ಭಾರತ ಚೀನಾ ದೇಶಗಳು ಗಡಿಭಾಗದಲ್ಲಿ ಉಂಟಾಗಿರುವ ಪರಿಸ್ಥಿತಿ ಬಿಕ್ಕಟ್ಟನ್ನು ಬಗೆಹರಿಸುಲು ಎರಡು ರಾಷ್ಟ್ರಗಳ ನಡುವೆ 11ನೇ ಸುತ್ತಿನ ಮಾತುಕತೆ ಪೂರ್ವ ಲಡಾಖ್‌ನಲ್ಲಿ ನಡೆದಿದೆ, ಈ ಮಾತುಕತೆಯಿಂದ ಇನ್ನು ಮುಂದೆ ಅಹಿತಕರ ಘಟನೆ ನಡೆಯದಂತೆ ಸ್ಥಿರತೆಯನ್ನು ಕಾಪಾಡಲು ಭಾರತ ಚೀನಾ ಒಪ್ಪಿಕೊಂಡಿವೆ ಎಂದು ವಿದೇಶ ವ್ಯವಹಾರ ಸಚಿವಾಲಯ ಮಾಹಿತಿಯನ್ನು ನೀಡಿದೆ.

## ಭಾರತೀಯ ರೈಲ್ವೆಯಿಂದ ಶ್ರಮಿಕ ರೈಲು ಓಡಿಸುವ ಯೋಜನೆ ಇಲ್ಲ



* ಭಾರತೀಯ ರೈಲ್ವೆಯು ವಲಸೆ ಕಾರ್ಮಿಕರನ್ನು ತಮ್ಮ ತಮ್ಮ ರಾಜ್ಯಗಳಿಗೆ ಕರೆದುಕೊಂಡು ಹೋಗಲು ಶ್ರಮಿಕ ವಿಶೇಷ ರೈಲುಗಳನ್ನು ಓಡಿಸುವ ಯೋಜನೆ ಇಲ್ಲ ಎಂದು ತಿಳಿಸಿದೆ.

* ರೈಲ್ವೆ ಇಲಾಖೆಯ ಅಧಿಕಾರಿಗಳು ನೀಡಿರುವ ಮಾಹಿತಿ ಪ್ರಕಾರ ಸದ್ಯ ಇರುವ ರೈಲುಗಳೇ ಸಾಕಾಗುತ್ತವೆ ಎಂದು ತಿಳಿಸಿದ್ದಾರೆ, ಒಂದು ವೇಳೆ ಅಗತ್ಯ ಬಿದ್ದರೆ ಹೆಚ್ಚಿನ ರೈಲುಗಳನ್ನು ಓಡಿಸಲು ರೈಲ್ವೆ ಇಲಾಖೆ ಸಿದ್ಧವಾಗಿದೆ ಎಂದು ತಿಳಿಸಿದರು.

* ಸದ್ಯ ಇರುವ ಪರಿಸ್ಥಿತಿಯಲ್ಲಿ ವಲಸೆ ಕಾರ್ಮಿಕರಿಗಾಗಿ ಶ್ರಮಿಕ ವಿಶೇಷ ರೈಲುಗಳನ್ನು ಓಡಿಸುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

* ಭಾರತೀಯ ರೈಲ್ವೆಯು ಇಲಾಖೆಯು ಪ್ರತಿ ದಿನಕ್ಕೆ ಸರಿ ಸುಮಾರು 1,402 ವಿಶೇಷ ರೈಲು ಸೇವೆಗಳನ್ನು ಒದಗಿಸುತ್ತಿದೆ.

* ಕಳೆದ ವರ್ಷ ಲಾಕ್‌ಡೌನ್ ಸಮಯದಲ್ಲಿ ಮೇ 1ರಿಂದ ಜುಲೈ 9ರವರೆಗೆ ಸರಿ ಸುಮಾರು 63 ಲಕ್ಷ ವಲಸೆ ಕಾರ್ಮಿಕರನ್ನು ತಮ್ಮ ತಮ್ಮ ರಾಜ್ಯಗಳಿಗೆ ತಲುಪಿಸಲು ಭಾರತೀಯ ರೈಲ್ವೆ ಒಟ್ಟು 4,615 ಶ್ರಮಿಕ ವಿಶೇಷ ರೈಲುಗಳನ್ನು ಓಡಿಸಲಾಗಿತ್ತು ಎಂದು ಭಾರತೀಯ ರೈಲ್ವೆ ತಿಳಿಸಿದೆ.
ಭಾರತೀಯ ರೈಲ್ವೆ ಇಲಾಖೆ ಬಗ್ಗೆ ಮಾಹಿತಿ :

* ಭಾರತೀಯ ರೈಲ್ವೆ ಭಾರತದ ರಾಷ್ಟ್ರೀಯ ರೈಲ್ವೆ ವ್ಯವಸ್ಥೆಯನ್ನು ನಿರ್ವಹಿಸುವ ರೈಲ್ವೆ ಸಚಿವಾಲಯದ ಮಾಲೀಕತ್ವದಲ್ಲಿರುವ ಸರ್ಕಾರಿ ಸಂಸ್ಥೆಯಾಗಿದೆ.

* ಇದು ಮಾರ್ಚ್ 31, 2020 ರ ವೇಳೆಗೆ 67,956 ಕಿ.ಮೀ ಉದ್ದವನ್ನು ಹೊಂದಿರುವ ವಿಶ್ವದ ನಾಲ್ಕನೇ ಅತಿದೊಡ್ಡ ರೈಲ್ವೆ ಜಾಲವನ್ನು ಗಾತ್ರದಿಂದ ನಿರ್ವಹಿಸುತ್ತದೆ.

* ಗ್ರಾಹಕ ಸೇವೆ ಸಂಖ್ಯೆ : 139
* ಸ್ಥಾಪನೆ : 16 ಏಪ್ರಿಲ್ 1853, ಭಾರತ
* ಪ್ರಧಾನ ಕಚೇರಿ : ನವದೆಹಲಿ
* ನೌಕರರ ಸಂಖ್ಯೆ: 13,08,000 (2016

2017)
* ಆದಾಯ: 1.97 ಲಕ್ಷ ಕೋಟಿ ರೂ. (ಯುಎಸ್ $ 28 ಬಿಲಿಯನ್, 2018–2019)

## ಜಗತ್ತಿನ 26 ದೇಶಗಳಲ್ಲಿರುವ ಟಿಬೆಟಿಯನ್ ಪ್ರಜೆಗಳಿಂದ ಮತದಾನ



* ತಾತ್ಕಾಲಿಕ ಸಂಸತ್‌ಗೆ ಜಗತ್ತಿನ 26 ದೇಶಗಳಲ್ಲಿರುವ ಟಿಬೆಟಿಯನ್ನರಿಂದ ಚುನಾವಣೆಗೆ ಮತದಾನ ಆರಂಭವಾಗಿದೆ.

* ಧರ್ಮಶಾಲಾ ಮೂಲದ ತಾತ್ಕಾಲಿಕ ಸಂಸತ್‌ಗೆ ನಡೆದ ಅಂತಿಮ ಹಂತದ ಸಾರ್ವತ್ರಿಕ ಚುನಾವಣೆಯಲ್ಲಿ 26 ದೇಶಗಳಲ್ಲಿರುವ ಟಿಬೆಟಿ ಪ್ರತಿನಿಧಿಗಳು ಮತದಾನದ ಹಕ್ಕುನ್ನು ಚಲಾಯಿಸಿದರು.

* ಟಿಬೆಟನ್ ಅಧ್ಯಕ್ಷರನ್ನು ಹಾಗೂ ಸೆಂಟ್ರಲ್ ಟಿಬೆಟನ್ ಅಡ್ಮಿನಿಸ್ಟ್ರೇಷನ್‌ನ 45 ಸದಸ್ಯರನ್ನು ಚುನಾಯಿಸಲು ಈ ಚುನಾವಣೆಯನ್ನು ನಡೆಸಲಾಗಿದೆ.

* ಟಿಬೆಟ್‌ನ ತಾತ್ಕಾಲಿಕ ಸಂಸತ್ ಮೇ 14ರಂದು ತಮ್ಮ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲಿದೆ ಎಂದು ತಿಳಿದು ಬಂದಿದೆ.

* ಭಾರತ ಮತ್ತು ಬೇರೆ ಬೇರೆ ರಾಷ್ಟ್ರಗಳಲ್ಲಿ ಸರಿ ಸುಮಾರು 1.3 ಲಕ್ಷ ಟಿಬೆಟಿಯನ್ ಪ್ರಜೆಗಳಿದ್ದಾರೆ.

## ಕರ್ನಾಟಕ ರಾಜ್ಯದಲ್ಲಿ ಏಪ್ರಿಲ್.30 ರಿಂದ ನೂತನ ಮರಳು ನೀತಿ ಜಾರಿ



* ಕರ್ನಾಟಕ ರಾಜ್ಯದಲ್ಲಿ ಏಪ್ರಿಲ್.30 ರಿಂದ ನೂತನ ಮರಳು ನೀತಿ ಜಾರಿಮಾಡಲಾಗುತ್ತಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ್ ಆರ್.ನಿರಾಣಿ ತಿಳಿಸಿದರು.

* ಇದೇ ಏಪ್ರಿಲ್. 30 ರಿಂದ ಜನ ಸಾಮಾನ್ಯರು ಹಾಗೂ ಕಡುಬಡವರು ಕಡಿಮೆ ದರದಲ್ಲಿ ಮನೆಗಳನ್ನು ಕಟ್ಟಿಸಿಕೊಳ್ಳಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯಾದಲ್ಲಿ ಉಚಿತ ಮರಳು ನೀತಿ ಜಾರಿಗೆ ಬರಲಿದೆ.

* ಈ ಉಚಿತ ಮರಳು ನೀತಿ ಯೋಜನೆಯು 10 ಲಕ್ಷ ರೂ. ಒಳಗಿನ ಮನೆ ನಿರ್ಮಾಣಕ್ಕೆ 100 ರೂ.ಗೆ ಒಂದು ಟನ್ ಮರಳು ನೀಡಲಾಗುತ್ತದೆ ಎಂದು ತಿಳಿಸಲಾಗಿದೆ, ಮತ್ತು ಇದರಿಂದ ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟಬಹುದು ಎನ್ನಲಾಗಿದೆ.

* ಏಪ್ರಿಲ್.30 ರಂದು ಜಾರಿಗೆ ತರಲಿರುವ ಈ ಉಚಿತ ಮರಳು ನೀತಿ ಮತ್ತು ಹೊಸ ಮರಳು ನೀತಿಯನ್ನು ಜಾರಿ ಮಾಡಲಾಗುತ್ತದೆ, ಈ ಮರುಳು ನೀತಿಯು ದೇಶ ಹಾಗೂ ರಾಜ್ಯಗಳಿಗೆ ಮಾದರಿಯಾಗುವ ವಿಶ್ವಾಸ ಇದೇ ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ್ ಆರ್.ನಿರಾಣಿ ಅವರು ತಿಳಿಸಿದರು.

## ಚೀನಾ ದೇಶದ ಕಲ್ಲಿದ್ದಲು ಗಣಿಯಲ್ಲಿ ಪ್ರವಾಹ



* ಚೀನಾ ದೇಶದ ಹುಟುಬಿ ಕೌಂಟಿಯ ಕಲ್ಲಿದ್ದಲು ಗಣಿಯ ಸುರಂಗದಲ್ಲಿ ಪ್ರವಾಹ ಸಂಭವಿಸಿದೆ ಎಂದು ತಿಳಿದು ಬಂದಿದೆ, ಹಾಗೂ ಪ್ರವಾಹದಲ್ಲಿ ಸಿಲುಕಿಕೊಂಡಿರುವ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆಯು ಕೂಡ ನಡೆದಿದೆ ತಿಳಿದು ಬಂದಿದೆ.

## ಫಿಫಾ ಅಂಡರ್ 17 ಮಹಿಳಾ ವಿಶ್ವ ಕಪ್ ಟೂರ್ನಮೆಂಟ್ ನಿರ್ದೇಶಕಿ ರಾಜೀನಾಮೆ




* ಫಿಫಾ ಅಂಡರ್ 17 ಮಹಿಳಾ ವಿಶ್ವಕಪ್ ಮತ್ತು ಎಎಫ್ ಸಿ ಮಹಿಳಾ ಏಶ್ಯನ್ ಟೂರ್ನಮೆಂಟ್‌ನ ನಿರ್ದೇಶಕಿಯಾಗಿದ್ದ ರೋಮಾ ಖನ್ನಾರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

* 2019ರ ಅಂಡರ್ 17 ವಿಶ್ವಕಪ್ ನಂತರ ಭಾರತದ ಸ್ಥಳೀಯ ಆಯೋಜನಾ ಸಮಿತಿಯ ಟೂರ್ನಮೆಂಟ್ ನಿರ್ದೇಶಕರಾಗಿ ನೇಮಕಗೊಂಡಿದ್ದರು. ರೋಮಾ ಖನ್ನಾ

ರವರ ಬಗ್ಗೆ ಮಾಹಿತಿ :

* ರೋಮಾ ಖನ್ನಾ ದೂರದರ್ಶನ ಮತ್ತು ಡಿಜಿಟಲ್ ಮೀಡಿಯಾ ಕಾರ್ಯನಿರ್ವಾಹಕ ಮತ್ತು ಹಿಡನ್ಲೈಟ್ ಪ್ರೊಡಕ್ಷನ್ಸ್‌ನ ಪ್ರಸ್ತುತ ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದಾರೆ.

* ಅವರು ಈ ಹಿಂದೆ ರಿವಾಲ್ವ್ ಟಿವಿಯ ಸಿಇಒ ಆಗಿದ್ದರು ಮತ್ತು ಎನ್‌ಬಿಸಿ ಯುನಿವರ್ಸಲ್‌ನಲ್ಲಿ ಗ್ಲೋಬಲ್ ನೆಟ್‌ವರ್ಕ್‌ಗಳ ಅಧ್ಯಕ್ಷರಾಗಿದ್ದರು.

## 14-04-2021

### ಜಲಿಯನ್ ವಾಲಾ ಬಾಗ್ ಹತ್ಯಾಕಾಂಡಕ್ಕೆ 102 ವರ್ಷ




* ಏಪ್ರಿಲ್ 13 ರಂದು ಪಂಜಾಬ್'ನ ಅಮೃತ್ ಸರದಲ್ಲಿರುವ ಜಲಿಯನ್ ವಾಲಾ ಬಾಗ್'ನ ಉದ್ಯಾನದಲ್ಲಿ ನಡೆದ ಹತ್ಯಾಕಾಂಡದ ಘಟನೆಯು ಇಂದಿಗೆ ಬರೋಬ್ಬರಿ 102 ವರ್ಷಗಳು ಸಂದಿವೆ.

* ಸಿಖ್ಖರ ಯುಗಾದಿ ಬೈಸಾಕಿ ಹಬ್ಬದ ದಿನದಂದೇ ನಡೆದ ಈ ಘಟನೆಯು ದೇಶದ ಇತಿಹಾಸದಲ್ಲಿ ಇದು ಭೀಕರ ಮಾರಣಹೋಮ ಅಥವಾ ಹತ್ಯಾಕಾಂಡವಾದ ದಿನವಾಗಿದೆ.

* ಏಪ್ರಿಲ್ 13ರ 1919ರಂದು ಇಡೀ ದೇಶ ಯುಗಾದಿ ಸಂಭ್ರಮದಲ್ಲಿರುವಾಗ ಪಂಜಾಬ್'ನ ಅಮೃತ್ ಸರದಲ್ಲಿ ನಡೆದ ಹತ್ಯಾಕಾಂಡ ಇದಾಗಿದೆ.

* ಪಂಜಾಬ್'ನ ಸಿಖ್ಖರು ಬೈಸಾಕಿ ಹಬ್ಬದ ಸಂಭ್ರಮ ಆಚರಿಸಲು ಅಮೃತಸರದಲ್ಲಿನ ಜಲಿಯನ್ ವಾಲಾ ಬಾಗ್ ನಲ್ಲಿರುವ ಉದ್ಯಾನವನಕ್ಕೆ ಆಗಮಿಸಿದ ಸಂಧರ್ಭದಲ್ಲಿ ನಡೆದ ಘಟನೆ ಇದಾಗಿದೆ.

* ಆಗಿನ ಬ್ರಿಟಿಷ್ ಸರ್ಕಾರ ನೀಡಿರುವ ಆಜ್ಞೆಯ ಪ್ರಕಾರ ಅಂದು ಅಮೃತಸರದಲ್ಲಿ 5 ಕ್ಕಿಂತ ಹೆಚ್ಚು ಜನ ಗುಂಪು ಸೇರುವಂತಿಲ್ಲ ಎಂದು ತಿಳಿಸಿತ್ತು, ಆದರೂ ಪಂಜಾಬ್'ನ ಸಿಖ್ಖರು ಹೆಚ್ಚಿನ ಜನಸಂಖ್ಯೆಯಲ್ಲಿ ಸೇರಿದ್ದರಿಂದ ಈ ಹತ್ಯಾಕಾಂಡ ನಡೆದಿದೆ ಎನ್ನಲಾಗಿದೆ.

* ಸುಮಾರು ಆರುವರೆ ಎಕರೆ ಪ್ರದೇಶದಲ್ಲಿ ವಿಶಾಲವಾಗಿ ಹರಡಿರುವ ಜಲಿಯನ್ ವಾಲಾ ಬಾಗ್ ಈಗ ಸಾರ್ವಜನಿಕ ಉದ್ಯಾನವನವಾಗಿದ್ದು, ಭಕ್ತಿ ಪರವಶತೆಗೆ ಹೆಸರಾಗಿರುವ ಪಂಜಾಬಿನ ಅಮೃತಸರ ನಗರದಲ್ಲಿದೆ.

* ರಾಷ್ಟ್ರೀಯ ಮಟ್ಟದಲ್ಲಿ ಪ್ರಾಮುಖ್ಯತೆ ಪಡೆದಿರುವ ಈ ಸ್ಮಾರಕ ಸ್ಥಳವನ್ನು ಪಂಜಾಬ್ ರಾಜ್ಯೋತ್ಸವದ ದಿನವಾದ 13 ಎಪ್ರಿಲ್, 1961ರಂದು ಅಂದಿನ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಉದ್ಘಾಟಿಸಿದ್ದರು.

### ಸುಶೀಲ್ ಚಂದ್ರ ಮುಖ್ಯ ಚುನಾವಣಾ ಆಯುಕ್ತರಾಗಿ ಅಧಿಕಾರ ಸ್ವೀಕಾರ



* ಪ್ರಸ್ತುತ ಸುಶೀಲ್ ಚಂದ್ರರವರು ಏಪ್ರಿಲ್ 13ರಂದು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾಗಿ ಅಧಿಕಾರ ಸ್ವೀಕಾರ ಮಾಡಿದರು.

* ಸುಶೀಲ್ ಚಂದ್ರರವರು ಅಧಿಕಾರ ಅವಧಿಯು 2022ರ ಮೇ 14 ರಂದು ಮುಕ್ತಾಯಗೊಳ್ಳಲಿದೆ (ನಿವೃತ್ತರಾಗಲಿದ್ದಾರೆ) ಮತ್ತು ಇವರ ಅಧಿಕಾರ ಅವಧಿಯುಲ್ಲಿ ಗೋವಾ, ಮಣಿಪುರ, ಉತ್ತರಾಖಂಡ್, ಪಂಜಾಬ್ ಹಾಗೂ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗಳು ನಡೆಯಲಿವೆ ಎಂದು ಕೇಂದ್ರ ಚುನಾವಣಾ ಆಯೋಗವು ತಿಳಿಸಿದೆ.

* ಸುಶೀಲ್ ಚಂದ್ರ'ರವರು 1957ರ ಮೇ 15ರಂದು ಜನಿಸಿದರು ಇವರು ಭಾರತೀಯ ಕಂದಾಯ ಸೇವೆಯಲ್ಲಿನ 1980ನೇ ಬ್ಯಾಚಿಗೆ ಸೇರಿದವರಾಗಿದ್ದಾರೆ.

* ಇವರು ಭಾರತೀಯ ಕಂದಾಯ ಸೇವೆಯ ಅಧಿಕಾರಿಯಾಗಿ ಉತ್ತರ ಪ್ರದೇಶ, ರಾಜಸ್ಥಾನ, ದೆಹಲಿ, ಗುಜರಾತ್ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

## ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಜನ್ಮದಿನಾಚರಣೆ



* ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಜನ್ಮದಿನಾಚರಣೆಯನ್ನು ಭಾರತ ದೇಶಾದ್ಯಂತ ಏಪ್ರಿಲ್ 14ರಂದು ಆಚರಿಸಲಾಗುತ್ತಿದೆ.

* ಈ ವರ್ಷ ಏಪ್ರಿಲ್ 14ರಂದು ಸಂವಿಧಾನ ಶಿಲ್ಪಿ ಎಂದೇ ಪ್ರಖ್ಯಾತಿಯಾಗಿರುವ ಡಾ. ಬಿ ಆರ್ ಅಂಬೇಡ್ಕರ್'ಅವರ 130ನೇ ಜಯಂತಿಯನ್ನು ಆಚರಣೆ ಮಾಡಲಾಗುತ್ತಿದೆ.

* ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಹಿಂದುಳಿದ ವರ್ಗದವರನ್ನು ಉತ್ತಮ ಸ್ಥಿತಿಗೆ ತರಲು ಹೋರಾಟ ನಡೆಸಿ ಅದರಲ್ಲಿ ಯಶಸ್ಸು ಕಂಡಿದ್ದಾರೆ ಮತ್ತು ತಮ್ಮ ಜೀವನದ ಕೊನೆಯ ಹಂತದವರೆಗೂ ನ್ಯಾಯಯುತ ಸಮಾಜವನ್ನು ರಚಿಸಲು ಹೋರಾಡಿದ ವ್ಯಕ್ತಿ ಇವರಾಗಿದ್ದಾರೆ.

* ಸಂವಿಧಾನ ಶಿಲ್ಪಿ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ಭಾರತೀಯ ನ್ಯಾಯಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ರಾಜಕಾರಣಿ ಮತ್ತು ಸಾಮಾಜಿಕ ಸುಧಾರಕರಾಗಿದ್ದರು ಮತ್ತು ದಲಿತ ಬೌದ್ಧ ಚಳವಳಿಗೆ ಪ್ರೇರಣೆ ನೀಡಿದರು ಮತ್ತು ಅಸ್ಪೃಶ್ಯರ ಬಗ್ಗೆ ಸಾಮಾಜಿಕ ತಾರತಮ್ಯದ ವಿರುದ್ಧ ಪ್ರಚಾರ ಮಾಡಿದರು. ಡಾ. ಬಿ ಆರ್ ಅಂಬೇಡ್ಕರ್ ರವರ ಬಗ್ಗೆ ಮಾಹಿತಿ :

* ಜನನ: 14 ಏಪ್ರಿಲ್ 1891, ಮಹೌ (Mhow, Indore)
* ನಿಧನ: 6 ಡಿಸೆಂಬರ್ 1956, ದೆಹಲಿ
* ಪೂರ್ಣ ಹೆಸರು: ಭೀಮರಾವ್ ರಾಮ್‌ಜಿ ಅಂಬೇಡ್ಕರ್
* ಶಿಕ್ಷಣ: ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್ (1916 1922)

## ಕೇಂದ್ರ ಸರ್ಕಾರದಿಂದ 100 ದಿನಗಳ ಜಲಶಕ್ತಿ ಅಭಿಯಾನ




* ಪ್ರಸ್ತುತ ಸರ್ಕಾರವು ಗ್ರಾಮೀಣ ಆರ್ಥಿಕತೆಗೆ ಉತ್ತೇಜನ ನೀಡುವ ಉದ್ದೇಶದಿಂದ ಮತ್ತು ಜಲ ಸಂರಕ್ಷಣೆಗಾಗಿ ಜಲಶಕ್ತಿ ಅಭಿಯಾನ ಎಂಬ ಯೋಜನೆಯನ್ನು ದೇಶ್ಯಾದ್ಯಂತ ಜಾರಿಗೆಗೊಳಿಸಿದೆ.

* ಈ ಜಲಶಕ್ತಿ ಅಭಿಯಾನ ಯೋಜನೆಯಿಂದ ರಾಷ್ಟ್ರದ ಗ್ರಾಮೀಣ ಪ್ರದೇಶಗಳ ಜನಗಳು ಎದುರಿಸುತ್ತಿರುವ ನೀರಿನ ಸಮಸ್ಯೆ ಮತ್ತು ಕೃಷಿ ಚಟುವಟಿಕೆಗಳಿಗೆ ಬೇಕಾಗಿರುವ ನೀರು ಮತ್ತು ಕುಡಿಯುವ ನೀರಿನ ಕೊರತೆಯನ್ನು ನಿವಾರಿಸುವ ಗುರಿಯನ್ನು ಈ ಯೋಜನೆ ಹೊಂದಿದೆ.

* ಕೇಂದ್ರ ಸರ್ಕಾರವು ಜಲಶಕ್ತಿ ಅಭಿಯಾನ ಕ್ಯಾಚ್ ದಿ ರೇನ್ ಎಂಬ ಅಭಿಯಾನವನ್ನು ಮಾರ್ಚ್.22 ರಿಂದ ನವೆಂಬರ್.30ರವರೆಗೆ ಹಮ್ಮಿಕೊಳ್ಳಲು ಪ್ರಧಾನಿ ಮೋದಿಯವರು ನಿರ್ದೇಶನ ನೀಡಿದ್ದಾರೆ.

* ಮಳೆ ನೀರು ಸಂರಕ್ಷಣೆಗೆ ಗ್ರಾಮದ ವ್ಯಾಪ್ತಿಯಲ್ಲಿರುವ ಕೆರೆ, ಕಲ್ಯಾಣಿಗಳ ಸಮಗ್ರ ಅಭಿವೃದ್ಧಿ, ನೀರು ಹರಿದು ಹೋಗುವ ಕಾಲುವೆಗಳ ಸ್ವಚ್ಛೀಕರಣಕ್ಕೆ ನರೇಗಾ ಯೋಜನೆ ಅಡಿಯಲ್ಲಿ ಅವಕಾಶ ನೀಡಲಾಗಿದೆ.

* ಈ ಜಲಶಕ್ತಿ ಅಭಿಯಾನದ ಅಡಿಯಲ್ಲಿ ಒಟ್ಟು 141 ಕೆರೆ, 160 ಕಾಲುವೆ ಸ್ವಚ್ಛತೆ, 20 ಕಿಂಡಿ ಆಣೆಕಟ್ಟು ನಿರ್ಮಾಣ, 50 ಬೋರ್‌ವೆಲ್, ಮತ್ತು 1,455 ನೀರಾವರಿ ಬಾವಿ ನಿರ್ಮಾಣದ ಗುರಿ ಹೊಂದಿದೆ ಎಂದು ಸರ್ಕಾರ ತಿಳಿಸಿದೆ.

## ಜೋ ಬೈಡನ್ ಅಫ್ಘಾನಿಸ್ತಾನದಿಂದ ಸೈನ್ಯವನ್ನು ಹಿಂಪಡೆದುಕೊಳ್ಳಲು ನಿರ್ಧಾರ



* ಜೋ ಬೈಡನ್ ಅಫ್ಘಾನಿಸ್ತಾನದಿಂದ ಸೈನ್ಯವನ್ನು ಹಿಂಪಡೆದುಕೊಳ್ಳಲು ನಿರ್ಧರಿಸಿದ್ದಾರೆ.

* ಸೆಪ್ಟೆಂಬರ್ 11ರ ಭಯೋತ್ಪಾದಕ ದಾಳಿಯ 20 ನೇ ವಾರ್ಷಿಕೋತ್ಸವಕ್ಕೂ ಮುಂಚಿತವಾಗಿ ಅಫ್ಘಾನಿಸ್ತಾನದಿಂದ ಅಮೆರಿಕದ ಸೈನ್ಯವನ್ನು ಹಿಂಪಡೆದುಕೊಳ್ಳಲು ಅಮೆರಿಕ ಅಧ್ಯಕ್ಷ ಜೋ ಬೈಡನ್ ನಿರ್ಧರಿಸಿದ್ದಾರೆ ಎಂದು ವಾಷಿಂಗ್ಟನ್'ನ ವರದಿಯಲ್ಲಿ ತಿಳಿದು ಬಂದಿದೆ.

* ಅಮೇರಿಕದಲ್ಲಿ 2001ರ ಸೆಪ್ಟೆಂಬರ್ 11ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 3000ಕ್ಕೂ ಹೆಚ್ಚು ಜನ ಸಾವನ್ನಪಿದ್ದರು.

* 2001ರಲ್ಲಿ ಇಸ್ಲಾಮಿಕ್ ಉಗ್ರಗಾಮಿ ಗುಂಪು ಅಲ್ ಖೈದಾದೊಂದಿಗೆ ಸಂಬಂಧ ಹೊಂದಿರುವ 19 ಉಗ್ರರ ವಿಮಾನಯಾನ ಅಪಹರಣಗಳು ಮತ್ತು ಆತ್ಮಹತ್ಯಾ ದಾಳಿಗಳನ್ನು ಮಾಡಿದ್ದರು.

* US ಇತಿಹಾಸದಲ್ಲಿ ಅಮೆರಿಕಾದ ನೆಲದ ಮೇಲೆ ಮಾಡಿದ ಮಾರಕ ಭಯೋತ್ಪಾದಕ ದಾಳಿ ಇದಾಗಿದೆ. ಜೋ ಬೈಡನ್ ರವರ ಬಗ್ಗೆ ಮಾಹಿತಿ :

* ಜೋ ಬೈಡನ್ ನವೆಂಬರ್ 20, 1942 ರಂದು ಜನಿಸಿದರು

* ಜೋ ಬೈಡನ್ ಒಬ್ಬ ಅಮೇರಿಕನ್ ರಾಜಕಾರಣಿಯಾಗಿದ್ದು, ಪ್ರಸ್ತುತ ಯುನೈಟೆಡ್ ಸ್ಟೇಟ್ಸ್ ನ 46ನೇ ಮತ್ತು ಪ್ರಸ್ತುತ ಅಧ್ಯಕ್ಷರಾಗಿದ್ದಾರೆ.

* ಇವರು ಡೆಮಾಕ್ರಟಿಕ್ ಪಕ್ಷದ ಸದಸ್ಯರಾಗಿದ್ದರು ಅವರು 2009 ರಿಂದ 2017 ರವರೆಗೆ ಬರಾಕ್ ಒಬಾಮರ ಅಡಿಯಲ್ಲಿ 47 ನೇ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

## ICC ತಿಂಗಳ ಪ್ರಶಸ್ತಿ ಪಡೆದ ಭುವನೇಶ್ವರ್ ಕುಮಾರ್



* ಭಾರತೀಯ ಕ್ರಿಕೆಟ್ ತಂಡದ ವೇಗದ ಬೌಲರ್ ಭುವನೇಶ್ವರ್ ಕುಮಾರ್ ಅವರಿಗೆ ಮಾರ್ಚ ತಿಂಗಳಿನ ಐಸಿಸಿ ಆಟಗಾರರ ಪ್ರಶಸ್ತಿ ಲಭಿಸಿದೆ.

* ICC ನೀಡುವ ತಿಂಗಳ ಆಟಗಾರ ಪ್ರಶಸ್ತಿಯನ್ನು ಸತತ ಮೂರನೇ ಬಾರಿಗೆ ಭಾರತೀಯ ಆಟಗಾರರು ಪಡೆದುಕೊಂಡಿದ್ದಾರೆ.

* ಇತ್ತೀಚೆಗೆ ಇಂಗ್ಲೆಂಡ್ ವಿರುದ್ಧದ ಟಿ 20 ಮತ್ತು ಏಕದಿನ ಸರಣಿಯ ಮೂರು ಪಂದ್ಯಗಳಲ್ಲಿ ಆಟವಾಡಿದ 31 ವರ್ಷದ ಭುವನೇಶ್ವರ್ ಕುಮಾರ್'ಗೆ ಈ ಪ್ರಶಸ್ತಿ ಲಭಿಸಿದೆ.

* ಭುವನೇಶ್ವರ್ ಕುಮಾರ್' ಅವರು ಏಕದಿನ ಪಂದ್ಯಗಳಲ್ಲಿ 6 ವಿಕೆಟ್‌ಗಳನ್ನು ಪಡೆದಿದ್ದರೆ, ಮತ್ತು ಟಿ20 ಸರಣಿಯಲ್ಲಿ 4 ವಿಕೆಟ್‌ಗಳನ್ನು ಪಡೆದುಕೊಂಡು ಭಾರತದ ಸರಣಿ ಗೆಲುವಿನಲ್ಲಿ ಪ್ರಮುಖರಾಗಿದ್ದಾರೆ. ಭುವನೇಶ್ವರ್ ಕುಮಾರ್ :

* ಭುವನೇಶ್ವರ್ ಕುಮಾರ್ ಅವರು ಭಾರತೀಯ ಅಂತಾರಾಷ್ಟ್ರೀಯ ಕ್ರಿಕೆಟಿಗರಾಗಿದ್ದಾರೆ.

* ಅವರು ದೇಶೀಯ ಕ್ರಿಕೆಟ್‌ನಲ್ಲಿ ಉತ್ತರ ಪ್ರದೇಶ ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಪರ ಆಡುತ್ತಾರೆ.

* ಜನನ: 5 ಫೆಬ್ರುವರಿ 1990 (ವಯಸ್ಸು 31 ವರ್ಷ), ಮೀರತ್
* ಟೆಸ್ಟ್ ಚೊಚ್ಚಲ: 22 ಫೆಬ್ರುವರಿ 2013 ವಿ ಆಸ್ಟ್ರೇಲಿಯಾ
* ಏಕದಿನ ಚೊಚ್ಚಲ: 30 ಡಿಸೆಂಬರ್ 2012 (ಪಾಕಿಸ್ತಾನ ವಿರುದ್ಧ)
* ಟಿ 20 ಚೊಚ್ಚಲ: 25 ಡಿಸೆಂಬರ್ 2012 (ಪಾಕಿಸ್ತಾನ ವಿರುದ್ಧ)

## ಲಕ್ಷದ್ವೀಪ ಮತ್ತು ಜಮ್ಮು ಕಾಶ್ಮೀರದ ಬಡ್ಗಾಮ್ ಜಿಲ್ಲೆ ಕ್ಷಯರೋಗ ಮುಕ್ತ




* ಕೇಂದ್ರ ಸರ್ಕಾರವು ಲಕ್ಷದ್ವೀಪ ಹಾಗೂ ಜಮ್ಮು ಕಾಶ್ಮೀರದ ಬಡ್ಗಾಮ್ ಜಿಲ್ಲೆಯನ್ನು ಕ್ಷಯರೋಗ ಮುಕ್ತ ಪ್ರದೇಶಗಳು ಎಂದು ಘೋಷಿಸಿದೆ, ಮತ್ತು 2025ರ ಅವಧಿಗೆ ಭಾರತ ಕ್ಷಯರೋಗ (TB) ಮುಕ್ತವಾಗಲು ಇದು ನಾಂದಿಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷ ವರ್ಧನ್ ತಿಳಿಸಿದ್ದಾರೆ.

* ವಿಶ್ವದ ಟಿಬಿ ಪ್ರಕರಣಗಳಲ್ಲಿ ಭಾರತವು ಶೇಕಡಾ 30 ರಷ್ಟಿದೆ.

* ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, 2025ರ ವೇಳೆಗೆ ಕ್ಷಯರೋಗವನ್ನು ಕೊನೆಗೊಳಿಸಲು ಹೆಚ್ಚಿನ ಆದ್ಯತೆಯನ್ನು ನೀಡಿದ್ದೇವೆ ಎಂದು ಕೇಂದ್ರ ಆರೋಗ್ಯ ಸಚಿವರು ತಿಳಿಸಿದ್ದಾರೆ.

# 15-04-2021

## ಮಾಲ್ಡೀವ್ಸ್ ವಿದೇಶಾಂಗ ಸಚಿವ ಅಬ್ದುಲ್ಲಾ ಶಾಹಿದ್ ಭಾರತಕ್ಕೆ ಭೇಟಿ



* ಏಪ್ರಿಲ್ 15 ರಿಂದ ಮಾಲ್ಡೀವ್ಸ್ ವಿದೇಶಾಂಗ ಸಚಿವ ಅಬ್ದುಲ್ಲಾ ಶಾಹಿದ್'ರವರು ಎರಡು ದಿನಗಳ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ.

* ವಿದೇಶಾಂಗ ಸಚಿವ ಅಬ್ದುಲ್ಲಾ ಶಾಹಿದ್'ರವರು ಇದೆ ಏಪ್ರಿಲ್ 16 ರಂದು ಭಾರತದ ವಿದೇಶಾಂಗ ಸಚಿವರಾದ ಡಾ.ಎಸ್.ಜೈಶಂಕರ್ ಅವರನ್ನು ಭೇಟಿ ಮಾಡಲಿದ್ದಾರೆ.

* ಭಾರತ ಮತ್ತು ಮಾಲ್ಡೀವ್ಸ್ ವಿದೇಶಾಂಗ ಸಚಿವರಿಬ್ಬರು ಪರಸ್ಪರ ದ್ವಿಪಕ್ಷೀಯ, ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ವಿಷಯಗಳ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ತಿಳಿದು ಬಂದಿದೆ.

* ಮಾಲ್ಡೀವ್ಸ್ ವಿದೇಶಾಂಗ ಸಚಿವಾಲಯದ ಪ್ರಕಾರ, ಸಚಿವ ಅಬ್ದುಲ್ಲಾ ಶಾಹಿದ್'ಅವರು ಸಾಂಕ್ರಾಮಿಕದ ಬಳಿಕ ಜಾಗತಿಕ ಸಾರ್ವಜನಿಕ ಆರೋಗ್ಯದ ಸೆಷನ್ ಗಳಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾರತದೊಂದಿಗೆ ಸಂವಾದದಲ್ಲಿ ನಡೆಸಲಿದ್ದಾರೆ. ಮಾಲ್ಡೀವ್ಸ್ ದೇಶದ ಬಗ್ಗೆ ಮಾಹಿತಿ :

* ಮಾಲ್ಡೀವ್ಸ್ ಅಥವಾ ಮಾಲ್ಡೀವ್ಸ್ ದ್ವೀಪಗಳು ಅಧಿಕೃತವಾಗಿ ಮಾಲ್ಡೀವ್ಸ್ ಗಣರಾಜ್ಯಕ್ಕೆ ಒಳಪಡುತ್ತವೆ, ಇದು ಹಿಂದೂ ಮಹಾಸಾಗರದಲ್ಲಿರುವ ದ್ವೀಪಗಳ ದೇಶವಾಗಿದೆ.

* ಭಾರತದ ಲಕ್ಷದ್ವೀಪದ ಎರಡು ಭಾಗದಲ್ಲಿ ದಕ್ಷಿಣೋತ್ತರವಾಗಿ ಇರುವ ಮಿನಿಕೊಯ್ ದ್ವೀಪ ಮತ್ತು ಚಾಗೋಸ್ ಆರ್ಚಿಪೆಲಾಗೊಗಳ ಮಧ್ಯ ಇಪ್ಪತ್ತಾರು ಹವಳದ್ವೀಪಗಳು ದ್ವಿಮುಖ ಸರಪಳಿಯ ರೂಪದಲ್ಲಿ ಹರಡಿಕೊಂಡಿವೆ.

* ಇದು ಲಕ್ಯಾಡಿವ್ ಸಮುದ್ರದಲ್ಲಿದೆ, ಶ್ರೀಲಂಕಾದ ನೈಋತ್ಯ ಭಾಗದಲ್ಲಿ ಸುಮಾರು ಏಳು ನೂರು ಕಿ.ಮೀ (435 mi)ದೂರದಲ್ಲಿದೆ.

* ಮಾಲ್ಡೀವ್ಸ್‌ನ ಹವಳದ್ವೀಪ 90,000 ಚದರ ಕಿ.ಮೀ ಭೂಪ್ರದೇಶದಲ್ಲಿ ಹರಡಿಕೊಂಡಿದೆ,

* ಇದು ಮುಖ್ಯವಾಗಿ ಎರಡುನೂರು ವಸಾಹತುಗಳನ್ನು ಹಾಗೂ 1,192 ಕಿರು ದ್ವೀಪಗಳನ್ನು ಒಳಗೊಂಡಿದೆ.

* ಮಾಲ್ಡೀವ್ಸ್ ಗಣರಾಜ್ಯದ ರಾಜಧಾನಿ ಹಾಗೂ ದೊಡ್ಡ ನಗರ(2006) ರ ಗಣತಿ ಪ್ರಕಾರ 1,03,693 ಜನಸಂಖ್ಯೆ ಹೊಂದಿದೆ.

* ಇದು ಕಾಫು ಹವಳದ್ವೀಪದಲ್ಲಿ ಉತ್ತರ ಮಲ್ ಹವಳದ್ವೀಪದ ದಕ್ಷಿಣದ ತುದಿಯಲ್ಲಿದೆ.

* ಇದು ಜಗತ್ತಿನಲ್ಲಿಯೇ ಅತಿ ತಳಮಟ್ಟದ ಎತ್ತರದ ಪ್ರದೇಶವನ್ನು ಹೊಂದಿದ ದೇಶವಾಗಿದೆ.

## ಎವರ್ ಗಿವನ್ ಹಡಗಿಗೆ 900 ಮಿಲಿಯನ್ ಡಾಲರ್ ದಂಡ



* ಈ ಹಿಂದೆ ಸರಿ ಸುಮಾರು ಒಂದು ವಾರಗಳ ಸುಯೆಜ್ ಕಾಲುವೆಯಲ್ಲಿ ಸಿಲುಕಿಕೊಂಡಿರುವ ಎವರ್ ಗಿವನ್ ಹಡಗಿಗೆ ಸುಮಾರು 900 ಮಿಲಿಯನ್ ಡಾಲರ್ ದಂಡವನ್ನು ಸುಯೆಜ್ ಕಾಲುವೆ ಪ್ರಾಧಿಕಾರ ವಿಧಿಸಿದೆ, ಮತ್ತು ವಿಧಿಸಿದ ದಂಡ ಪಾವತಿಸುವವರೆಗೂ ಎವರ್ ಗಿವನ್ ನೌಕೆಯನ್ನು ಬಿಡುಗಡೆ ಮಾಡಲಾಗುವದಿಲ್ಲವೆಂದು ಸುಯೆಜ್ ಕಾಲುವೆ ಪ್ರಾಧಿಕಾರವು ತಿಳಿಸಿದೆ.

* ಈ ಎವರ್ ಗಿವನ್ ನೌಕೆಯ ಸುಯೆಜ್ ಕಾಲುವೆ ಸಿಲುಕಿಕೊಂಡಿರುವದರಿಂದ ಕಾಲುವೆಯಲ್ಲಿ ಭಾರೀ ಟ್ರಾಫಿಕ್ ಜಾಮ್ ಸಮಸ್ಯೆ ಎದುರಾಗಿತ್ತು ಇದರಿಂದ 420ಕ್ಕೂ ಹೆಚ್ಚು ಹಡಗುಗಳು ಸಂಚಾರಕ್ಕೆ ಅಡಚಣೆಯಾಗಿತ್ತು.

* ಎವರ್ ಗಿವನ್ ನೌಕೆಯಿಂದಾಗಿ ಈಜಿಪ್ಟ್'ಗೆ ಪ್ರತೀನಿತ್ಯ 90ರಿಂದ 112 ಕೋಟಿ ರೂ.ಗಳಷ್ಟು ನಷ್ಟವಾಗಿದೆ, ಹಾಗೂ ಈ ಕಾಲುವೆ ನಿರ್ವಹಣ ವೆಚ್ಚವನ್ನು ಎವರ್ ಗಿವನ್ ಕಂಪೆನಿ ಪಾವತಿಸಬೇಕು ಎಂದು ಸುಯೇಜ್ ಕಾಲುವೆ ಪ್ರಾಧಿಕಾರ ಮುಖ್ಯಸ್ಥ ಒಸಾಮಾ ರಾಬೀ ಹೇಳಿದ್ದಾರೆ. ಎವರ್ ಗಿವನ್ ಹಡಗಿನ ಬಗ್ಗೆ ಮಾಹಿತಿ :

* ಎವರ್ ಗಿವನ್ ವಿಶ್ವದ ಅತಿದೊಡ್ಡ ಕಂಟೇನರ್ ಹಡಗುಗಳಲ್ಲಿ ಒಂದಾಗಿದೆ.

* ಈ ಹಡಗು ಶೋಯಿ ಕಿಸೆನ್ ಕೈಶಾ ಅವರ ಒಡೆತನದಲ್ಲಿದೆ, ಮತ್ತು ಸಮಯವನ್ನು ಚಾರ್ಟರ್ಡ್ ಮತ್ತು ಕಂಟೇನರ್ ಟ್ರಾನ್ಸ್‌ಪೋರ್ಟ್ ಮತ್ತು ಶಿಪ್ಪಿಂಗ್ ಕಂಪನಿ ಎವರ್‌ಗ್ರೀನ್ ಮೆರೈನ್ ನಿರ್ವಹಿಸುತ್ತದೆ.

* ಬಿಲ್ಡರ್: ಇಮಾಬರಿ ಶಿಪ್ ಬಿಲ್ಡಿಂಗ್
* ಸಾಮರ್ಥ್ಯ: 20,124 ಟಿಇಯು
* ಮಾಲೀಕ: ಶೋಯಿ ಕಿಸೆನ್ ಕೈಶಾ
* ಸಿಬ್ಬಂದಿ: 25
* ಉದ್ದ: 399.94 ಮೀ (1,312 ಅಡಿ 2 ಇಂಚು)

## ಎಪ್ರಿಲ್ 24 ರಿಂದ ಡಿಜಿಟಲ್ ಟಿವಿ ಕಾಂಗ್ರೆಸ್ ನಿಂದ ಆರಂಭ




* ಕಾಂಗ್ರೆಸ್ ತನ್ನ ಡಿಜಿಟಲ್ ಮೀಡಿಯಾ ಪ್ಲಾಟ್ ಫಾರ್ಮ್ ಇಂಕ್ ಟಿವಿ ದಾಖಲೆಯನ್ನು ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯಂದು ಬಿಡುಗಡೆಗೊಳಿಸಿದೆ.

* ಪಂಚಾಯತಿ ರಾಜ್ ದಿನ'ದಂದು ಡಿಜಿಟಲ್ ಮೀಡಿಯಾ ಪ್ಲಾಟ್‌ಫಾರ್ಮ್ ಇಂಕ್ ಟಿವಿಯನ್ನು ಪ್ರಾರಂಭಿಸಲಾಗುವುದು ಎಂದು ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕರ್ಜುನ್ ಖರ್ಗೆ ಹಾಗೂ ಪಕ್ಷದ ಮುಖ್ಯ ವಕ್ತಾರ ರಣದೀಪ್ ಸುರ್ಜೇವಲಾ ಅವರು ತಿಳಿಸಿದರು.

* ಡಿಜಿಟಲ್ ಪ್ಲಾಟ್‌ಫಾರ್ಮ್ 8ಗಂಟೆಗಳ ಲೈವ್ ಪ್ರೋಗ್ರಾಮಿಂಗ್ ಅನ್ನು ಏಪ್ರಿಲ್ 24 ರಿಂದ ಪ್ರಸಾರ ಮಾಡುತ್ತದೆ, ಪ್ರಾರಂಭದಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆ ಮಾತ್ರ ಬಳಸಲಾಗಿದೆ ಮುಂದಿನ ದಿನಗಳಲ್ಲಿ ಪ್ರಾದೇಶಿಕ ಭಾಷೆಗಳಲ್ಲೂ ಪ್ರಸಾರ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಸ್ಯಾಟಲೈಟ್ ಅಥವಾ OTTಯಲ್ಲಿ ಇರುವುದಿಲ್ಲ ಎಂದು ಸುರ್ಜೆವಾಲಾ ಮಾಹಿತಿ ನೀಡಿದ್ದಾರೆ.

## ಶ್ರೀಲಂಕಾ ಸರ್ಕಾರವು 11 ಉಗ್ರ ಸಂಘಟನೆಗಳನ್ನೂ ನಿಷೇಧಿಸಿದೆ



* ದೇಶದಲ್ಲಿ ಉಗ್ರರರೊಂದಿಗೆ ಸಂಪರ್ಕ ಹೊಂದಿರುವ ಆರೋಪದ ಅಡಿಯಲ್ಲಿ ಇಸ್ಲಾಮಿಕ್ ಸ್ಟೇಟ್ (ISIS) ಮತ್ತು ಅಲ್ ಖೈದಾ ಸೇರಿದಂತೆ 11 ಇಸ್ಲಾಮಿಕ್ ಸಂಘಟನೆಗಳನ್ನು ಶ್ರೀಲಂಕಾ ಸರ್ಕಾರವು ನಿಷೇಧಿಸಿದೆ ಎಂದು ಅಧಿಕೃತ ಮೂಲಗಳಿಂದ ಮಾಹಿತಿ ತಿಳಿದು ಬಂದಿದೆ.

* ಶ್ರೀಲಂಕಾ ಅಧ್ಯಕ್ಷ ಗೋಟಬಯ ರಾಜಪಕ್ಸೆ'ರವರು "ಭಯೋತ್ಪಾದನೆ ತಡೆ ಕಾಯ್ದೆ'ಯಡಿ ಈ 11 ಉಗ್ರಗಾಮಿ ಸಂಘಟನೆಗಳನ್ನು ವಿಶೇಷ ಗೆಜೆಟ್ ಅಧಿಸೂಚನೆಯಲ್ಲಿ ನಿಷೇಧಿಸಿದ್ದಾರೆ.

* ಈ ಕಾಯ್ದೆ ಉಲ್ಲಂಘಿಸಿದ ಸಂಘಟನೆಗಳಿಗೆ 10 ರಿಂದ 20 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದು ಗೆಜೆಟ್ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

* ಶ್ರೀಲಂಕಾ ಸರ್ಕಾರವು ಈ ಹಿಂದೆ 2019ರಲ್ಲಿ ನಡೆದ ಈಸ್ಟರ್ ಸಂಡೆ ಆತ್ಮಾಹುತಿ ಬಾಂಬ್ ದಾಳಿಯ ನಂತರ ಸ್ಥಳೀಯ ಜಿಹಾದಿ ಗುಂಪು ನ್ಯಾಷನಲ್ ಥೌಹೀತ್ ಜಮಾಥ್ ಮತ್ತು ಇತರ ಎರಡು ಉಗ್ರ ಸಂಘಟನೆಗಳ ಸಂಪರ್ಕ ಹೊಂದಿದ ಸಂಘಟನೆಗಳಿಗೆ ನಿಷೇದ ಹೇರಿತ್ತು. ಶ್ರೀಲಂಕಾ ಸರ್ಕಾರದ ಬಗ್ಗೆ ಮಾಹಿತಿ :

* ಶ್ರೀಲಂಕಾ ಪ್ರಜಾತಾಂತ್ರಿಕ ಸಮಾಜವಾದಿ ಗಣರಾಜ್ಯ (1972 ರ ಶ್ರೀಲಂಕಾ ದ ಮೊದಲು ಹೆಸರು ಸಿಲೋನ್) ಭಾರತೀಯ ಉಪಖಂಡದ ಆಗ್ನೇಯದಲ್ಲಿರುವ ದ್ವೀಪ ರಾಷ್ಟ್ರ.

* ಪುರಾತನ ಕಾಲದಿಂದ ಲಂಕಾ, ಲಂಕಾದ್ವೀಪ, ಸಿಂಹಳದ್ವೀಪ, ಸೆರೆಂದಿಬ್ ಮೊದಲಾದ ಹೆಸರುಗಳಿಂದ ಗುರುತಿಸಲ್ಪಟ್ಟಿರುವ ಶ್ರೀಲಂಕಾ 1972 ರಲ್ಲಿ ಬ್ರಿಟಿಷ್ ಆಡಳಿತದ ಕಾಲದಲ್ಲಿ ಸಿಲೋನ್ ಎಂದು ಹೆಸರು ಪಡೆದಿತ್ತು.

* ರಾಜಧಾನಿ : ಶ್ರೀ ಜಯವರ್ಧನಾಪುರ
* ರಾಷ್ಟ್ರಪತಿ : ಮಹಿಂದ ರಾಜಪಕ್ಸ
* ಪ್ರಧಾನ ಮಂತ್ರಿ : ರತ್ನಸಿರಿ ವಿಕ್ರಮನಾಯಕೆ

## ಚುನಾವಣಾ ಸುಧಾರಣಾ ಮಸೂದೆ ಮಂಡನೆ ಮಾಡಿದ ಹಾಂಗ್‌ಕಾಂಗ್



* ಹಾಂಗ್‌ಕಾಂಗ್ ಚೀನಾಗೆ ಹೆಚ್ಚಿನ ನಿಯಂತ್ರಣದ ಅಧಿಕಾರ ನೀಡುವ ಚುನಾವಣಾ ಸುಧಾರಣಾ ಮಸೂದೆಯನ್ನು ಶಾಸನಸಭೆಯಲ್ಲಿ ಮಂಡನೆ ಮಾಡಿದೆ.

* ಸಂವಿಧಾನದ ಕಾರ್ಯದರ್ಶಿ ಎರಿಕ್ ಟ್ಸ್ಯಾಂಗ್ ಹೇಳಿಕೆ ನೀಡಿರುವ ಪ್ರಕಾರ ಹಾಂಗ್‌ಕಾಂಗ್'ನ ಆಡಳಿತವನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಮಸೂದೆ ರೂಪಿಸಿ ಶಾಸನಸಭೆಯಲ್ಲಿ ಮಂಡಿಸಲಾಗಿದೆ, ಹಾಗೂ ಈ ಮಸೂದೆಗೆ ಮೇ ತಿಂಗಳ ಅಂತ್ಯಕ್ಕೆ ಅನುಮೋದನೆ ಸಿಗಲಿದೆ ಎನ್ನಲಾಗಿದೆ.

* ಹಾಂಗ್‌ಕಾಂಗ್‌ನಲ್ಲಿ ರಾಜಕೀಯ ಪ್ರತಿಭಟನೆಯನ್ನು ಹತ್ತಿಕ್ಕುವ ಉದ್ದೇಶವೂ ಈ ಮಸೂದೆ ಹೊಂದಿದೆ.

* ಈ ಹಿಂದೆ ಚೀನಾ ಹಾಂಗ್‌ಕಾಂಗ್‌ನಲ್ಲಿ ರಾಷ್ಟ್ರೀಯಭದ್ರತೆ ಕಾನೂನು ಜಾರಿಗೆ ತಂದಿತ್ತು, ಆದಾಗ್ಯೂ 2019ರಲ್ಲಿಯೂ ಪ್ರಜಾಪ್ರಭುತ್ವದ ಪರ ವ್ಯಾಪಕ ಪ್ರತಿಭಟನೆಗಳಾಗಿದ್ದವು.

* ಹೊಸದಾಗಿ ಮಂಡನೆ ಮಾಡಿರುವ ಮಸೂದೆಯ ಅನ್ವಯ 20 ಮಂದಿಯನ್ನು ಮಾತ್ರ ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ ಎಂದು ತಿಳಿಸಲಾಗಿದೆ, ಮತ್ತು 30 ಪ್ರತಿನಿಧಿಗಳನ್ನು ವಿವಿಧ ವೃತ್ತಿಗಳಲ್ಲಿರುವವರು ಗುಂಪುಗಳಿಂದ ಆಯ್ಕೆ ಮಾಡಲಾಗುತ್ತದೆ ಹಾಗೂ 40 ಮಂದಿಯನ್ನು ಚುನಾವಣೆ ಸಮಿತಿ ಆಯ್ಕೆ ಮಾಡಲಿದೆ ಎಂದು ಈ ಮಸೂದೆ ತಿಳಿಸಿದೆ. ಹಾಂಗ್‌ಕಾಂಗ್ ಬಗ್ಗೆ ಮಾಹಿತಿ :

* ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ ಅಧಿಕೃತವಾಗಿ ಹಾಂಗ್ ಕಾಂಗ್ ವಿಶೇಷ ಆಡಳಿತ ಪ್ರದೇಶವಾದವಾಗಿದೆ.

* ಡಯಲಿಂಗ್ ಕೋಡ್: +852
* ಜನಸಂಖ್ಯೆ: 75.1 ಲಕ್ಷ (2019)
* ಕರೆನ್ಸಿ:ಹಾಂಗ್ ಕಾಂಗ್ ಡಾಲರ್
* ಖಂಡ: ಏಷ್ಯಾ

## ಭಾರತ ರಷ್ಯಾ ರಾಷ್ಟ್ರಗಳು S 400 ಕ್ಷಿಪಣಿ ಒಪ್ಪಂದಕ್ಕೆ ಬದ್ದ




* ಭಾರತ ಹಾಗೂ ರಷ್ಯಾ ರಾಷ್ಟ್ರಗಳು ಎಸ್ 400 ಕ್ಷಿಪಣಿ ಖರೀದಿ ಒಪ್ಪಂದಕ್ಕೆ ಬದ್ದವಾಗಿವೆ ಎಂದು ರಷ್ಯಾ ರಾಯಭಾರಿ ನಿಕೋಲಾಯ್ ಕುದಶೆವ್ ತಿಳಿಸಿದ್ದಾರೆ.

* ರಷ್ಯಾ ಈ ಕ್ಷಿಪಣಿಗಳನ್ನು ಖರೀದಿಸಿದರೆ ಭಾರತದ ಮೇಲೆ ಅಮೇರಿಕ ನಿರ್ಬಂಧ ಹೇರುವ ಸಾಧ್ಯತೆಗಳಿವೆ ಎನ್ನಲಾಗಿತ್ತು.

* ಅಮೇರಿಕ ರಾಷ್ಟ್ರವು ಹೇರುವ ಈ ನಿರ್ಬಂಧಗಳಿಗೆ ಭಾರತ ಮತ್ತು ರಷ್ಯಾ ಮಾನ್ಯತೆ ನೀಡುವುದಿಲ್ಲ ಎಂದು ತಿಳಿಸಿವೆ, ಹಾಗೂ ಇದು ಕಾನೂನು ವಿರುದ್ದವಾಗಿದೆ ಎಂದು ತಿಳಿಸಲಾಗಿದೆ.

* ರಷ್ಯಾ ದೇಶವು ಎಸ್ 400 ಕ್ಷಿಪಣಿಗಳನ್ನು ಈ ವರ್ಷದ ಕೊನೆಗೆ ಭಾರತಕ್ಕೆ ಪೂರೈಸುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

## ICC ಏಕದಿನ ಕ್ರಿಕೆಟ್ ರ್ಯಾಂಕಿಂಗ್'ನಲ್ಲಿ ಮೊದಲ ಸ್ಥಾನ ಪಡೆದ ಪಾಕಿಸ್ತಾನದ ನಾಯಕ ಬಾಬರ್ ಅಜಂ



* ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕ ಬಾಬರ್ ಅಜಂ ಇದೀಗ ಐಸಿಸಿ ಏಕದಿನ ಕ್ರಿಕೆಟ್ ರ್ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ.

* ಇತ್ತೀಚಿಗೆ ICC ಹೊಸದಾಗಿ ಬಿಡುಗಡೆ ಮಾಡಿರುವ ಏಕದಿನ ಕ್ರಿಕೆಟ್ ಬ್ಯಾಟ್ಸ್ ಮನ್ ಪಟ್ಟಿಯಲ್ಲಿ ಬಾಬರ್ ಅಜಂ 865 ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ.

* ಪ್ರಸ್ತುತ ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

* ಭಾರತ ತಂಡದ ಆಟಗಾರ ರೋಹಿತ್ ಶರ್ಮಾ ಮೂರನೇ ಸ್ಥಾನದಲ್ಲಿದ್ದಾರೆ ಎಂದು ICC ತಿಳಿಸಿದೆ.

# 16-04-2021

## ಕೋವಿಡ್ 19 ಮಾಹಿತಿಗೆ BBMP ಮತ್ತು ಬೆಸ್ಕಾಂ ಸಹಯೋಗದಲ್ಲಿ ಸಹಾಯವಾಣಿ 1912



* ನಗರದ ಜನಗಳಿಗೆ ಕೊರೊನಾ ಸೋಂಕಿನ ಮಾಹಿತಿ ಪಡೆಯಲು ಅನುಕೂಲವಾಗುವ ನಿಟ್ಟಿನಲ್ಲಿ ಬಿಬಿಎಂಪಿ ಮತ್ತು ಬೆಸ್ಕಾಂ ಜೊತೆಗೂಡಿ ಹೊಸ ಸಹಾಯವಾಣಿ 1912 ಸಂಖ್ಯೆಯನ್ನು ಪ್ರಾರಂಭಿಸಲಾಗಿದೆ.

* ಈ ಹೊಸ ಕೋವಿಡ್ 19 ಸಹಾಯವಾಣಿ ಸಂಖ್ಯೆಗೆ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್‌ಸಿಂಗ್ ಮತ್ತು ಆಯುಕ್ತ ಗೌರವ್‌ಗುಪ್ತರವರು ಚಾಲನೆ ನೀಡಿದರು.

* ಈ ಕೋವಿಡ್ 19 ಸಹಾಯವಾಣಿ ಸಂಖ್ಯೆಯಿಂದ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೊರೊನಾ ಸೋಂಕಿತರಿಗೆ ಹಾಸಿಗೆ ಹಂಚಿಕೆ, ಆಸ್ಪತ್ರೆಗಳ ಬಿಲ್ಲಿನ ಸಮಸ್ಯೆಗಳನ್ನೂ ಬಗೆ ಹರಿಸಲು ಈ ಸಹಾಯವಾಣಿ ಸಹಕಾರಿಯಾಗಲಿದೆ.

## ಭಾರತ ಫ್ರಾನ್ಸ್ ಬಾಹ್ಯಾಕಾಶ ಸಂಸ್ಥೆಗಳ ಒಪ್ಪಂದ



* ಭಾರತೀಯ ಬಾಹ್ಯಾಕಾಶ ಸಂಸ್ಥೆಯು ಭಾರತದ ಮೊಟ್ಟಮೊದಲ ಮಾನವ ಸಹಿತ ಗಗನಯಾನ ಅನುಷ್ಠಾನಕ್ಕಾಗಿ ಫ್ರಾನ್ಸ್ ದೇಶದ ಬಾಹ್ಯಾಕಾಶ ಸಂಸ್ಥೆಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದೆ.

* ಫ್ರಾನ್ಸ್‌ನ ವಿದೇಶಾಂಗ ಸಚಿವ ಜೀನ್ ಯೆಸ್ ಲಿ ಡ್ರಿಯಾನ್'ರವರು ಭಾರತದ ಇಸ್ರೋ ಕೇಂದ್ರ ಕಚೇರಿಗೆ ಭೇಟಿಯಾದ ಸಂದರ್ಭದಲ್ಲಿ ಈ ಗಗನಯಾನ ಒಪ್ಪಂದಕ್ಕೆ ಎರಡು ರಾಷ್ಟ್ರಗಳು ಸಹಿ ಹಾಕಿವೆ.

* ಭಾರತ ಫ್ರಾನ್ಸ್ ಬಾಹ್ಯಾಕಾಶ ಸಂಸ್ಥೆಗಳ ಮಧ್ಯೆ ಆಗಿರುವ ಒಪ್ಪಂದದ ಪ್ರಕಾರ ಗಗನಯಾನದಲ್ಲಿ ಭಾಗಿಯಾಗುವ ಗಗನಯಾನಿಗಳಿಗೆ ಫ್ರಾನ್ಸ್ ಬಾಹ್ಯಾಕಾಶ ಕೇಂದ್ರದಲ್ಲಿ ಮೈಕ್ರೋ ಗ್ರಾವಿಟಿಯಲ್ಲಿ ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸುವಬೇಕು ಎನ್ನುವದನ್ನು ಹೇಳಿಕೊಡಲಾಗುತ್ತದೆ. ಭಾರತೀಯ ಬಾಹ್ಯಾಕಾಶ ಸಂಸ್ಥೆಯ(ISRO) ಬಗ್ಗೆ ಮಾಹಿತಿ :

* ಭಾರತೀಯ ಬಾಹ್ಯಾಕಾಶ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ, ಮತ್ತು ಇಸ್ರೋ ಅಧ್ಯಕ್ಷರು ಡಾಸ್‌ನ ಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಾರೆ.

* ಪ್ರಧಾನ ಕಚೇರಿ: ಬೆಂಗಳೂರು
* ಸ್ಥಾಪಕ: ವಿಕ್ರಮ್ ಸಾರಾಭಾಯ್
* ಸ್ಥಾಪನೆ: 15 ಆಗಸ್ಟ್ 1969
* ನಿರ್ದೇಶಕ: ಕೈಲಸಾವಾಡಿವ ಶಿವನ್
* ಅಂಗಸಂಸ್ಥೆ: ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರ
* ಪೋಷಕ ಸಂಸ್ಥೆ: ಬಾಹ್ಯಾಕಾಶ ಇಲಾಖೆ

## ಭಾರತೀಯ ಕ್ರಿಕೆಟ್ ಆಟಗಾರರಿಗೆ, ವಿಸ್ಡನ್ ದಶಕದ ಗೌರವ ಪ್ರಶಸ್ತಿ



* ಭಾರತೀಯ ಕ್ರಿಕೆಟ್ ಆಟಗಾರರು ವಿಸ್ಡನ್ ದಶಕದ ಗೌರವ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

* ಭಾರತಕ್ಕೆ ಪ್ರಥಮ ಏಕದಿನ ವಿಶ್ವಕಪ್ ತಂದುಕೊಟ್ಟಿರುವ ನಾಯಕ ಕಪಿಲ್‌ದೇವ್, ಮತ್ತು ಕ್ರಿಕೆಟ ದೇವರು ಎಂದೇ ಪ್ರಖ್ಯಾತಿ ಮಡೆದಿರುವ ಸಚಿನ್ ತೆಂಡುಲ್ಕರ್, ಹಾಗೂ ಪ್ರಸ್ತುತ ಭಾರತ ಕ್ರಿಕೆಟ್ ಟೀಮ್‌ನ ನಾಯಕನಾಗಿರುವ ವಿರಾಟ್ ಕೊಹ್ಲಿ, ಈ ಮೂರು ಭಾರತೀಯ ಕ್ರಿಕೆಟ್ ಆಟಗಾರರು ಲಂಡನ್ನಿನ ಪ್ರತಿಷ್ಠಿತ ವಿಸ್ಡನ್ ಪತ್ರಿಕೆಯ ದಶಕದ ಏಕದಿನ ಕ್ರಿಕೆಟಿಗ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

* ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಆಟಗಾರ ಬೆನ್ ಸ್ಟೋಕ್ಸ್'ರವರಿಗೆ ಸತತವಾಗಿ 2ನೇ ಬಾರಿ ವರ್ಷದ ಕ್ರಿಕೆಟಿಗ ಪ್ರಶಸ್ತಿ ಗೌರವಕ್ಕೆ ಭಾಜನರಾಗಿದ್ದಾರೆ.

* ವಿಸ್ಡನ್ ಪತ್ರಿಕೆಯ ದಶಕದ ಏಕದಿನ ಕ್ರಿಕೆಟಿಗ ಪ್ರಶಸ್ತಿಯನ್ನು 1971 ರಿಂದ 2021ರವರೆಗೆ ನೀಡುತ್ತಾ ಬಂದಿದೆ.

* ಪ್ರತಿ ದಶಕಗಳಿಗೆ ಒಬ್ಬ ಕ್ರಿಕೆಟ್ ಸಾಧಕರನ್ನು ಗುರುತಿಸಿ ಗೌರವ ಪ್ರಶಸ್ತಿಯನ್ನು ನೀಡಲಾಗುತ್ತಿದೆ.1970ರ ದಶಕದಲ್ಲಿ: ವಿವಿಯನ್ ರಿಚರ್ಡ್ಸ್ 1980ರ ದಶಕದಲ್ಲಿ:

ಕಪಿಲ್‌ದೇವ್ 1990ರ ದಶಕದಲ್ಲಿ: ಸಚಿನ್ ತೆಂಡುಲ್ಕರ್ 2000ದ ದಶಕದಲ್ಲಿ: ಮುತ್ತಯ್ಯ ಮುರಳೀಧರನ್ 2010ರ ದಶಕದಲ್ಲಿ: ವಿರಾಟ್ ಕೊಹ್ಲಿ ಅವರಿಗೆ ಲಭಿಸಿದೆ.

* 2021ರ ವಿಸ್ಡನ್ ಗೌರವ ಪ್ರಶಸ್ತಿಗೆ, 5 ಕ್ರಿಕೆಟಿಗರ ಹೆಸರನ್ನೂ ಪ್ರಕಟಿಸಲಾಗಿದೆ. ಡಾಮ್ ಸಿಬ್ಲಿ ಜಾಕ್ ಕ್ರಾಲಿ ಜಾಸನ್ ಹೋಲ್ಡರ್ ಮೊಹಮ್ಮದ್ ರಿಜ್ವಾನ್ ಡ್ಯಾರನ್ ಸ್ಟೀವನ್ಸ್ ಭಾರತೀಯ ಕ್ರಿಕೆಟ್ ಬಗ್ಗೆ ಮಾಹಿತಿ :

* ಟೀಮ್ ಇಂಡಿಯಾ ಮತ್ತು ಮೆನ್ ಇನ್ ಬ್ಲೂ ಎಂದೂ ಕರೆಯಲ್ಪಡುವ ಭಾರತದ ಪುರುಷರ ರಾಷ್ಟ್ರೀಯ ಕ್ರಿಕೆಟ್ ತಂಡವನ್ನು ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿಯು (BCCI) ನಿಯಂತ್ರಿಸುತ್ತದೆ, ಮತ್ತು ಟೆಸ್ಟ್, ಏಕದಿನ ಅಂತರರಾಷ್ಟ್ರೀಯ ಮತ್ತು ಟ್ವೆಂಟಿ 20 ಅಂತಾರಾಷ್ಟ್ರೀಯ ಸ್ಥಾನಮಾನದೊಂದಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಪೂರ್ಣ ಸದಸ್ಯರಾಗಿದ್ದಾರೆ.

* ಪ್ರಸ್ತುತ ತಂಡದ ನಾಯಕ : ವಿರಾಟ್ ಕೊಹ್ಲಿ

* ತರಬೇತುದಾರರು: ರವಿಶಾಸ್ತ್ರಿ, (ಮುಖ್ಯ ಕೋಚ್), ಭಾರತ್ ಅರುಣ್ (ಬೌಲಿಂಗ್ ಕೋಚ್), ರಾಮಕೃಷ್ಣನ್ ಶ್ರೀಧರ್ (ಫೀಲ್ಡಿಂಗ್ ಕೋಚ್)

## ಭಾರತ ಬಿಟ್ಟು ತೆರಳಲು ನಿರ್ಧರಿಸಿದ ಸಿಟಿಬ್ಯಾಂಕ್ !




* ಸಿಟಿಬ್ಯಾಂಕ್ ಇದು ಅಮೇರಿಕದ ಬ್ಯಾಂಕಿಂಗ್ ಕಂಪನಿಯಾಗಿದೆ.

* ಸಿಟಿಬ್ಯಾಂಕ್ ಭಾರತದಲ್ಲಿನ ಗ್ರಾಹಕ ಬ್ಯಾಂಕಿಂಗ್ ಸೇವೆಗಳನ್ನು ಸ್ಥಗಿತಗೊಳಿಸುತ್ತಿದೆ ಎಂದು ಪ್ರಕಟಿಸಿದೆ.

* ಭಾರತದಲ್ಲಿ ಸಿಟಿ ಬ್ಯಾಂಕ್ ಕ್ರೆಡಿಟ್ ಕಾರ್ಡ್, ಗೃಹ ಸಾಲ, ಸಂಪತ್ತು ನಿರ್ವಹಣೆ ಸೇವೆಗಳನ್ನು ನೀಡುತ್ತಿದೆ.

* ಪ್ರಸ್ತುತ ಭಾರತ ದೇಶದಲ್ಲಿ ಸಿಟಿ ಬ್ಯಾಂಕ್ ಒಟ್ಟು 35 ಶಾಖೆಗಳನ್ನು ಹೊಂದಿದೆ.

* 1985ರಿಂದ ಸಿಟಿ ಬ್ಯಾಂಕ್ ಭಾರತದಲ್ಲಿ ಗ್ರಾಹಕ ಬ್ಯಾಂಕಿಂಗ್ ಸೇವೆಗಳನ್ನು ನೀಡುತ್ತಾ ಬಂದಿದೆ.

* ಪ್ರಸ್ತುತ ಸಿಟಿಬ್ಯಾಂಕ್ ಕಂಪನಿಯು 13 ದೇಶಗಳಲ್ಲಿ ತನ್ನ ಗ್ರಾಹಕ ಬ್ಯಾಂಕಿಂಗ್ ಸೇವೆಗಳನ್ನು ಸ್ಥಗಿತಗೊಳಿಸಲು ತೀರ್ಮಾನಿಸಿದೆ ಎಂದು ತಿಳಿದು ಬಂದಿದೆ.

* ಸಿಟಿಬ್ಯಾಂಕ್ 13 ದೇಶಗಳಲ್ಲಿನ ಬೇರೆ ಬೇರೆ ಬ್ಯಾಂಕ್'ಗಳಿಗೆ ಸ್ಪರ್ಧೆ ನೀಡುವಲ್ಲಿ ಬೃಹತ್ ಆಗಿ ಬೆಳೆದಿಲ್ಲ ಎನ್ನುವ ಕಾರಣಕ್ಕೆ ಗ್ರಾಹಕ ಬ್ಯಾಂಕಿಂಗ್ ಸೇವೆಗಳನ್ನು ಸ್ಥಗಿತಗೊಳಿಸಲಾಗುತ್ತಿದೆ ಎಂದು ಸಿಟಿಬ್ಯಾಂಕ್‌ನ ಜಾಗತಿಕ ವಹಿವಾಟುಗಳ CEO ಜೇನ್ ಫ್ರೇಸರ್ ತಿಳಿಸಿದ್ದಾರೆ.

## ಫೇಸ್‌ಬುಕ್‌ನ ಮೊದಲ ನವೀಕರಿಸಬಹುದಾದ ಯೋಜನೆ




* ಕ್ಲೀನ್‌ಮ್ಯಾಕ್ಸ್ ಎಂಬ ಸ್ಥಳೀಯ ಸಂಸ್ಥೆಯಿಂದ ಭಾರತದಲ್ಲಿ ನವೀಕರಿಸಬಹುದಾದ ಇಂಧನವನ್ನು ಖರೀದಿಸುವ ಒಪ್ಪಂದಕ್ಕೆ ಫೇಸ್‌ಬುಕ್ ಸಹಿ ಹಾಕಿದೆ, ಮತ್ತು ಇದು ಫೇಸ್‌ಬುಕ್‌ನ ಮೊದಲ ನವೀಕರಿಸಬಹುದಾದ ಯೋಜನೆಯಾಗಿದೆ ಎಂದು ತಿಳಿದಿದೆ.

* ಫೇಸ್‌ಬುಕ್ ಮತ್ತು ಕ್ಲೀನ್‌ಮ್ಯಾಕ್ಸ್ ಜೊತೆಯಾಗಿ ಭಾರತದ ವಿದ್ಯುತ್ ಗ್ರಿಡ್‌ಗೆ ನವೀಕರಿಸಬಹುದಾದ ಶಕ್ತಿಯನ್ನು ನೀಡುತ್ತವೆ.

* ಫೇಸ್‌ಬುಕ್ ತನ್ನ ಡೇಟಾ ಕೇಂದ್ರಕ್ಕೆ ಶಕ್ತಿ ತುಂಬಲು ಕ್ಲೀನ್‌ಮ್ಯಾಕ್ಸ್‌ನಿಂದ ಖರೀದಿಸಿದ ನವೀಕರಿಸಬಹುದಾದ ಶಕ್ತಿಯನ್ನು ಬಳಸಲಿದೆ, ಮತ್ತು ಡೇಟಾ ಕೇಂದ್ರದ ಕಾರ್ಯಾಚರಣೆಯನ್ನು 2022 ರಲ್ಲಿ ಪ್ರಾರಂಭಿಸಲಿದೆ ಎಂದು ಫೇಸ್‌ಬುಕ್ ತಿಳಿಸಿದೆ.

* ಫೇಸ್‌ಬುಕ್'ನ ಈ ಯೋಜನೆಯಿಂದ 160 MW ಸೌರಶಕ್ತಿ ಉತ್ಪಾದಿಸುವ ಸಾಮರ್ಥ್ಯವಿದೆ ಎಂದು ತಿಳಿದುಬಂದಿದೆ.

## ಭಾರತ ಸರ್ಕಾರದಿಂದ ಮನಸ್ ಅಪ್ಲಿಕೇಶನ್ ಪ್ರಾರಂಭ



* ಭಾರತದ ಜನರ ಮಾನಸಿಕ ಸಾಮರ್ಥ್ಯವನ್ನು ಉತ್ತೇಜಿಸಲು ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ವಿಜಯ್ ರಾಘವನ್ ಈ ಮೊಬೈಲ್ ಅಪ್ಲಿಕೇಶನ್'ನ್ನು ಬಿಡುಗಡೆ ಮಾಡಿದ್ದಾರೆ.

* ಮನಸ್ ಎಂದರೆ ಮಾನಸಿಕ ಆರೋಗ್ಯ ಮತ್ತು ಸಾಮಾನ್ಯ ವರ್ಧನೆ ವ್ಯವಸ್ಥೆ ಎಂದರ್ಥ, ಹಾಗೂ ಇದು ಸಮಗ್ರ ಮತ್ತು ರಾಷ್ಟ್ರೀಯ ಡಿಜಿಟಲ್ ಯೋಗಕ್ಷೇಮ ವೇದಿಕೆಯಾಗಿದೆ.

* ಮನಸ್ ಆ್ಯಪ್ ಅನ್ನು ನಿಮ್ಹಾನ್ಸ್ ಬೆಂಗಳೂರು, ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ ಸಂಸ್ಥೆ ಅಭಿವೃದ್ಧಿಪಡಿಸಿದೆ.

* ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ ಸಂಸ್ಥೆಯ 34ನೇ ಫೌಂಡೇಶನ್ ಆಚರಣೆಯ ಸಂದರ್ಭದಲ್ಲಿ ಈ ಅಪ್ಲಿಕೇಶನ್'ನ್ನು ಪ್ರಾರಂಭ ಮಾಡಲಾಗಿದೆ.

* ಈ ಮನಸ್ ಅಪ್ಲಿಕೇಶನ್ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆಸಂಬಧಿಸಿದಆಪ್ಆಗಿದೆ.

## ಪ್ರತಿ ವರ್ಷ ಏಪ್ರಿಲ್ 15 ರಂದು ಹಿಮಾಚಲ ದಿನ ಆಚರಣೆ




* ಹಿಮಾಚಲ ಪ್ರದೇಶವು ರಚನೆಯ ನೆನಪಿಗಾಗಿ ಪ್ರತಿ ವರ್ಷವು ಏಪ್ರಿಲ್ 15ರಂದು ಹಿಮಾಚಲ ದಿನವನ್ನು ಆಚರಣೆ ಮಾಡಲಾಗುತ್ತದೆ.

* ಹಿಮಾಚಲ ಪ್ರದೇಶವನ್ನು ಪ್ರಾಂತ್ಯವಾಗಿ 1948ರ ಏಪ್ರಿಲ್ 15ರಂದು ರಚನೆ ಮಾಡಲಾಯಿತು, ನಂತರ ದಿನಗಳಲ್ಲಿ ಅಂದರೆ 1950ರ ಜನವರಿ 25ರಂದು 'ಸಿ' ವರ್ಗದ ರಾಜ್ಯವನ್ನಾಗಿ ಮಾಡಲಾಯಿತು.

* 3 ಪ್ರಮುಖ ಪ್ರಕಾರದ ರಾಜ್ಯಗಳನ್ನು1950ರ ಸಂವಿಧಾನವು ರಚಿಸಿದೆ.

* ಭಾಗ 'ಎ' ಬ್ರಿಟಿಷ್ ಭಾರತದ ಹಿಂದಿನ ಪ್ರಾಂತ್ಯಗಳಾಗಿವೆ.

* ಭಾಗ 'ಬಿ' ಹಿಂದಿನ ರಾಜಪ್ರಭುತ್ವ ರಾಜ್ಯಗಳಾಗಿವೆ.

* ಭಾಗ 'ಸಿ' ರಾಜ್ಯಗಳಲ್ಲಿ ಮಾಜಿ ಮುಖ್ಯ ಆಯುಕ್ತರ ಪ್ರಾಂತ್ಯಗಳು ಮತ್ತು ರಾಜ ರಾಜ್ಯಗಳು ಸೇರಿವೆ.

* ಹಿಮಾಚಲ ಪ್ರದೇಶವು 1956ರ ತನಕ 'ಸಿ' ವರ್ಗದ ರಾಜ್ಯವಾಗಿತ್ತು,ಮತ್ತು ಇದನ್ನು1956ರಲ್ಲಿ ಕೇಂದ್ರಾಡಳಿತ ಪ್ರದೇಶವಾಗಿ ಘೋಷಣೆ ಮಾಡಲಾಯಿತು.

* ಹಿಮಾಚಲ ಪ್ರದೇಶವು 1970ರಲ್ಲಿ ಸಂಸತ್ತು ಕಾಯ್ದೆಯನ್ನು ಅಂಗೀಕರಿಸಿತು ಆ ಸಂಧರ್ಭದಲ್ಲಿ ರಾಜ್ಯವಾಗಿ ಅಸ್ತಿತ್ವಕ್ಕೆ ಬಂದಿತು, ನಂತರ 1971ರ ಜನವರಿ. 25ರಂದು ಅಧಿಕೃತವಾಗಿ ರಾಜ್ಯಕ್ಕೆ ಸ್ಥಾನ ನೀಡಲಾಯಿತು.

* ಹಿಮದಿಂದ ಆವೃತವಾದ ಪ್ರದೇಶವನ್ನು ಹಿಮಾಚಲ ಎಂದು ಕರೆಯುತ್ತಾರೆ.

* ಹಿಂದಿ ಮತ್ತು ಸಂಸ್ಕೃತ ಹಿಮಾಚಲ ಪ್ರದೇಶದ ಅಧಿಕೃತ ಭಾಷೆಗಳಾಗಿವೆ. ಹಿಮಾಚಲ ಪ್ರದೇಶದ ಬಗ್ಗೆ ಮಾಹಿತಿ :

* ಹಿಮಾಚಲ ಪ್ರದೇಶ ಹಿಮಾಲಯದ ಉತ್ತರ ಭಾರತದ ರಾಜ್ಯವಾಗಿದೆ.

* ಹಿಮಾಚಲ ಪ್ರದೇಶದ ದಲೈ ಲಾಮಾಕ್ಕೆ ಆತಿಥೇಯ ಟಿಬೆಟಿಯನ್ ಪ್ರಬಲ ಉಪಸ್ಥಿತಿಯನ್ನು ಹೊಂದಿದೆ.

* ಹಣ್ಣು: ಸೇಬುಗಳು
* ರಾಜ್ಯಪಾಲರು: ಬಂಡಾರು ದತ್ತಾತ್ರೇಯ
* ಮುಖ್ಯಮಂತ್ರಿ: ಜೈ ರಾಮ್ ಠಾಕೂರ್
* ರಾಜಧಾನಿಗಳು: ಶಿಮ್ಲಾ , ಧರ್ಮಶಾಲಾ
* ಒಟ್ಟು ವಿಸ್ತೀರ್ಣ : 55673 ಚದರ ಕಿಮಿ
*ಎತ್ತರ : 2319 ಮೀ
*ಜನಸಂಖ್ಯೆ (2011) 68,56,509

# 17-04-2021

## ರೈಲ್ವೆ ಕ್ರಯೋಜೆನಿಕ್ ಟ್ಯಾಂಕರ್'ಗಳ ಮೂಲಕ ಆಮ್ಲಜನಕ ಪೂರೈಕೆ



* ದೇಶದಲ್ಲಿ ಕೊರೊನಾ ವೈರಸ್ ಸಾಂಕ್ರಾಮಿಕ ರೋಗದ 2ನೇ ಅಲೆ ಹೆಚ್ಚುತ್ತಿರುವ ಕಾರಣದಿಂದಾಗಿ ಅನೇಕ ಆಸ್ಪತ್ರೆಗಳಲ್ಲಿ ಆಮ್ಲಜನಕ ಬೇಡಿಕೆ ಹೆಚ್ಚಾಗಿದೆ ಈ ಬೇಡಿಕೆಯನ್ನು ಸರಿದೂಗಿಸಲೂ ಭಾರತೀಯ ರೈಲ್ವೆ ಇಲಾಖೆಯು ಮಹಾರಾಷ್ಟ್ರ ಸರ್ಕಾರದ ಮನವಿಯ ಮೇರೆಗೆ ರೈಲ್ವೆ ಕ್ರಯೋಜೆನಿಕ್ ಟ್ಯಾಂಕರ್'ಗಳಲ್ಲಿ ದ್ರವ ವೈದ್ಯಕೀಯ ಆಮ್ಲಜನಕವನ್ನು ಬೇಡಿಕೆ ಇರುವ ಆಸ್ಪತ್ರೆಗಳಿಗೆ ರವಾನಿಸಲು ರೈಲ್ವೆ ಇಲಾಖೆಯು ಒಪ್ಪಿಗೆಯನ್ನು ನೀಡಿದೆ.

* ರೋಲ್ ಆನ್ ರೋಲ್ (ರೋ ರೋ) ಸೇವೆಯಲ್ಲಿ ಲೋಡ್ ಮಾಡ ಬೇಕಾಗಿರುವ ದ್ರವ ಆಮ್ಲಜನಕ ಟ್ರಕ್‌ಗಳ ಜೊತೆಯಲ್ಲಿರುವ ಸಿಬ್ಬಂದಿಗೆ ಪ್ರಯಾಣಕ್ಕಾಗಿ ಎರಡನೆ ದರ್ಜೆಯ ಟಿಕೆಟ್ ನೀಡಲಾಗುವದು ಮತ್ತು ಟ್ರಕ್‌ನ ಜೊತೆಯಲ್ಲಿ ಇಬ್ಬರು ವ್ಯಕ್ತಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗುವದು ಎಂದು ರೈಲ್ವೆ ಇಲಾಖೆಯು ತಿಳಿಸಿದೆ.

## ಪ್ಯಾಲೆಸ್ಟಿನ್ ಉಗ್ರರಿಂದ ಇಸ್ರೇಲ್‌ನಲ್ಲಿ ದಾಳಿ



* ಪ್ಯಾಲೆಸ್ಟಿನ್ ಉಗ್ರರು ದಕ್ಷಿಣ ಇಸ್ರೇಲ್‌ನ ಮೇಲೆ ರಾಕೆಟ್ ದಾಳಿ ಮಾಡಿದ್ದಾರೆಂದು ಇಸ್ರೇಲ್ ಸೇನೆ ತಿಳಿಸಿದೆ ಹಾಗೂ ಯಾವುದೇ ಸಾವು ನೋವು ಸಂಭವಿಸಿಲ್ಲ ಎಂದು ಸೇನೆ ಮಾಹಿತಿಯನ್ನು ನೀಡಿದೆ.

* ಈ ಪ್ಯಾಲೆಸ್ಟಿನ್ ಉಗ್ರರ ದಾಳಿಗೆ ಪ್ರತಿಯಾಗಿ ಇಸ್ರೇಲ್ ಸೇನೆಯು ಯುದ್ಧ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಬಳಸಿ ಪ್ಯಾಲೆಸ್ಟಿನ್ ಹಮಾಸ್ ಉಗ್ರ ಸಂಘಟನೆಯ ಮೇಲೆ ದಾಳಿ ಮಾಡಿದೆ, ಮತ್ತು ಹಮಾಸ್ ಉಗ್ರ ಸಂಘಟನೆಗೆ ಸೇರಿದ ಶಸ್ತ್ರಾಸ್ತ್ರ ತಯಾರಿಕಾ ಘಟಕ, ತರಬೇತಿ ಕೇಂದ್ರಗಳನ್ನು ಗುರಿಯಾಗಿಸಿಕೊಂಡು ದಾಳಿಯನ್ನು ನಡೆಸಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಇಸ್ರೇಲ್ ದೇಶದ ಬಗ್ಗೆ ಮಾಹಿತಿ :

* ಮೆಡಿಟರೇನಿಯನ್ ಸಮುದ್ರದ ಮಧ್ಯಪ್ರಾಚ್ಯ ದೇಶವಾದ ಇಸ್ರೇಲ್ ಅನ್ನು ಯಹೂದಿಗಳು, ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು ಬೈಬಲ್ನ ಪವಿತ್ರ ಭೂಮಿ ಎಂದು ಪರಿಗಣಿಸಿದ್ದಾರೆ, ಇದರ ಅತ್ಯಂತ ಪವಿತ್ರ ತಾಣಗಳು ಜೆರುಸಲೆಮ್‌ನಲ್ಲಿವೆ.

* ರಾಜಧಾನಿ: ಜೆರುಸಲೆಮ್
* ಡಯಲಿಂಗ್ ಕೋಡ್ : +972
* ಜನಸಂಖ್ಯೆ : 90.5 ಲಕ್ಷ (2019) ವಿಶ್ವ ಬ್ಯಾಂಕ್
* ಅಧ್ಯಕ್ಷ : ರಿಯುವನ್ ರಿವ್ಲಿನ್
* ಕರೆನ್ಸಿ : ಇಸ್ರೇಲಿ ಶೆಕೆಲ್
* ಪ್ರಧಾನಿ: ಬೆಂಜಮಿನ್ ನೆತನ್ಯಾಹು

## ಕಮ್ಯುನಿಸ್ಟ್ ಪಕ್ಷದ ಮುಖ್ಯಸ್ಥ ಸ್ಥಾನಕ್ಕೆ ರೌಲ್ ಕ್ಯಾಸ್ಟ್ರೊ ರಾಜೀನಾಮೆ



* ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರೌಲ್ ಕ್ಯಾಸ್ಟ್ರೊ ಅವರು ರಾಜೀನಾಮೆ ನೀಡುತ್ತೇನೆ ಎಂದು ತಿಳಿಸಿದ್ದಾರೆ.

* ಕಮ್ಯುನಿಸ್ಟ್ ಪಕ್ಷದ 8ನೇ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ರೌಲ್ ಕ್ಯಾಸ್ಟ್ರೊ ಅವರು ಇನ್ನು ಮುಂದೆ ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಸ್ಥಾನವನ್ನು ಯುವ ಸದಸ್ಯರ ಕೈಗೆ ಜವಾಬ್ದಾರಿಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು. ರೌಲ್ ಕ್ಯಾಸ್ಟ್ರೊ ರವರ ಬಗ್ಗೆ ಮಾಹಿತಿ :

* ಇವರು ನಿವೃತ್ತ ಕ್ಯೂಬಾದ ರಾಜಕಾರಣಿಯಾಗಿದ್ದು, ಕ್ಯೂಬಾದ ಕಮ್ಯುನಿಸ್ಟ್ ಪಕ್ಷದ ಮೊದಲ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

* ಇವರು 1959 ರಿಂದ 2008 ರವರೆಗೆ ಸಶಸ್ತ್ರ ಪಡೆಗಳ ಸಚಿವರಾಗಿ ಸೇವೆ ಸಲ್ಲಿಸಿದರು.

* ಜನನ: 3 ಜೂನ್ 1931 (ವಯಸ್ಸು 89 ವರ್ಷ), ಬಿರಾನ್, ಕ್ಯೂಬಾ

* ಹಿಂದಿನ ಕಚೇರಿಗಳು: ಕ್ಯೂಬಾದ ಅಧ್ಯಕ್ಷ (2008–2018)

## ಪಾಕಿಸ್ತಾನದಲ್ಲಿ ಸಾಮಾಜಿಕ ಜಾಲತಾಣ ತಾತ್ಕಾಲಿಕವಾಗಿ ನಿಷೇಧ




* ಪಾಕಿಸ್ತಾನದ ಇಸ್ಲಾಮಾಬಾದ್'ನ ತೆಹ್ರೀಕ್ ಇ ಲಬೈಕ್ (TLB) ಪಕ್ಷವು ಪ್ರತಿಭಟನೆಯನ್ನು ನಡೆಸುತ್ತಿದೆ ಈ ಪ್ರತಿಭಟನೆಯು ತೀವ್ರಗೊಂಡ ಕಾರಣದಿಂದಾಗಿ ಪಾಕಿಸ್ತಾನದ ಇಮ್ರಾನ್ ಖಾನ್ ನೇತೃತ್ವದ ಸರ್ಕಾರ ಸಾಮಾಜಿಕ ಜಾಲತಾಣಗಳಿಗೆ ತಾತ್ಕಾಲಿಕವಾಗಿ ನಿಷೇಧ ಹೇರಿದೆ.

* ಪಾಕಿಸ್ತಾನದ ಆಂತರಿಕಭದ್ರತಾ ಸಚಿವಾಲಯವು ದೂರಸಂಪರ್ಕ ಪ್ರಾಧಿಕಾರಕ್ಕೆ ಸಾಮಾಜಿಕ ಜಾಲತಾಣಗಳಾಗಿರು ಟ್ವಿಟರ್, ಫೇಸ್‌ಬುಕ್, ವಾಟ್ಸ್‌ಆಪ್, ಯೂಟ್ಯೂಬ್, ಟೆಲಿಗ್ರಾಮ್ ತಾಣಗಳನ್ನು ತಾತ್ಕಾಲಿಕವಾಗಿ ನಿಷೇಧಿಸಲು ಸೂಚಿಸಿದೆ.

* ಪ್ರವಾದಿ ಪೈಂಗಬರನ್ ವ್ಯಂಗ್ಯ ಚಿತ್ರವನ್ನು ಫ್ರಾನ್ಸ್‌ನ ನಿಯತಕಾಲಿಕೆಯೊಂದು ಪ್ರಕಟಿಸಿರುವ ಕಾರಣದಿಂದಾಗಿ ಫ್ರಾನ್ಸ್‌ನ ರಾಯಭಾರಿಯನ್ನು ಏಪ್ರಿಲ್ 20ರೊಳಗೆ ಉಚ್ಚಾಟನೆ ಮಾಡುವಂತೆ TLB ಪಕ್ಷವು ಸೀಮಿತ ಗಡುವು ನೀಡಿದೆ.

* ತೆಹ್ರೀಕ್ ಎ ಲ್ಯಾಬ್‌ಬೈಕ್ ಪಾಕಿಸ್ತಾನದ ಬಲಪಂಥೀಯ ಇಸ್ಲಾಮಿಸ್ಟ್ ರಾಜಕೀಯ ಪಕ್ಷವಾಗಿದೆ, ಈ ಪಕ್ಷವನ್ನು ಖಾದಿಮ್ ಹುಸೇನ್ ರಿಜ್ವಿ ಅವರು ಸ್ಥಾಪಿಸಿದ್ದಾರೆ* ತೆಹ್ರೀಕ್ ಇ ಲ್ಯಾಬ್‌ಬೈಕ್ ಪಾಕಿಸ್ತಾನವನ್ನು 1997ರ ಭಯೋತ್ಪಾದನಾ ವಿರೋಧಿ ಕಾಯ್ದೆ ನಿಯಮ 11ರ ಅಡಿಯಲ್ಲಿ ಪಾಕಿಸ್ತಾನ ಸರ್ಕಾರವು 20 ಏಪ್ರಿಲ್ 2021 ರಂದು ನಿಷೇಧಿಸಿತು.

## ಕೇಂದ್ರ ಸರ್ಕಾರದಿಂದ ಭಾರತ್ ಬಯೋಟೆಕ್‌ಗೆ 65 ಕೋಟಿ ರೂ ನೆರವು




* ಭಾರತದಲ್ಲಿ ಕೋರೋಣ ವೈರಸ್'ನ 2ನೇ ಅಲೇ ಹೆಚ್ಚುತ್ತಿರುವ ಹಿನ್ನಲೆಯಿಂದ ಕೋವಿಡ್ 19 ಲಸಿಕೆಗಳಿಗೆ ಬೇಡಿಕೆ ಹೆಚ್ಚಾಗಿದೆ, ಈ ಕೋವಿಡ್ 19 ಲಸಿಕೆಗಳ ಬೇಡಿಕೆಯನ್ನು ಪೂರೈಸಲು ಕೇಂದ್ರ ಸರ್ಕಾರವು ಲಸಿಕೆ ಉತ್ಪಾದನೆಯ ಕೇಂದ್ರಕ್ಕೆ 65 ಕೋಟಿ ರೂ ನೆರವು ಘೋಷಿಸಿದೆ.

* ಕೇಂದ್ರ ಸರ್ಕಾರವು ಕೋವ್ಯಾಕ್ಸಿನ್ ಲಸಿಕೆಯ ಉತ್ಪಾದನೆಯ ಘಟಕಕ್ಕೆ ಉತ್ತೇಜನ ನೀಡಲು ಭಾರತ್ ಬಯೋಟೆಕ್‌ಗೆ 65 ಕೋಟಿ ರೂ. ನೆರವನ್ನು ಘೋಷಿಸಿದೆ ಎಂದು ತಿಳಿದು ಬಂದಿದೆ ಹಾಗೂ ಈ ಹಣದ ಸಹಾಯವನ್ನು ಬೆಂಗಳೂರಿನಲ್ಲಿರುವ ಭಾರತ್ ಬಯೋಟೆಕ್‌ನ ಘಟಕಕ್ಕೆ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

* ಕೋವ್ಯಾಕ್ಸಿನ್ ಲಸಿಕೆಯ ಈಗಿನ ಉತ್ಪಾದನಾ ಸಾಮರ್ಥ್ಯವನ್ನು ಮೇ ಜೂನ್ ವೇಳೆಗೆ ಹೆಚ್ಚಗೆ ಮಾಡಲಾಗುತ್ತದೆ, ಹಾಗೂ ಮುಂದಿನ ದಿನಗಳಲ್ಲಿ ಅಂದರೆ ಜುಲೈ ಆಗಸ್ಟ್ ತಿಂಗಳಿನ ಸಮಯಕ್ಕೆ 6 7 ಕೋಟಿ ಡೋಸ್ ಗಳಿಗೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ ಹಾಗೆಯೇ ಸೆಪ್ಟೆಂಬರ್ ಸಮಯಕ್ಕೆ ಅಂದರೆ ಪ್ರತಿ ತಿಂಗಳಿಗೆ 10 ಕೋಟಿ ಡೋಸ್ ತಯಾರಿಸುವ ನಿರೀಕ್ಷೆಯನ್ನು ಸರ್ಕಾರ ಹೊಂದಿದೆ.

## ಟರ್ಕಿ ಕ್ರಿಪ್ಟೋ ಕರೆನ್ಸಿಗಳ ನಿಷೇಧ



* ಸೆಂಟ್ರಲ್ ಬ್ಯಾಂಕ್ ಆಫ್ ಟರ್ಕಿಯು ಕ್ರಿಪ್ಟೋ ಕರೆನ್ಸಿ ಮತ್ತು ಕ್ರಿಪ್ಟೋ ಸ್ವತ್ತುಗಳನ್ನು ಬಳಸುವುದನ್ನು ನಿಷೇಧಿಸಿದೆ, ಇದರಿಂದ 4 ಶೇಕಡಾ ಕ್ಕಿಂತಲೂ ಹೆಚ್ಚು ಬಿಟ್‌ಕಾಯಿನ್ ಕರೆನ್ಸಿ ಕುಸಿದಿದೆ.

* ಟರ್ಕಿಯ ಅಧ್ಯಕ್ಷ ಎರ್ಡೋಗನ್ ಉನ್ನತ ಕೇಂದ್ರೀಯ ಬ್ಯಾಂಕರ್ ನಾಸಿ ಅಗ್ಬಾಲ್ ಅವರನ್ನು 2021ರ ಮಾರ್ಚ'ನಲ್ಲಿ ವಜಾಗೊಳಿಸಿದರು, ಇದರಿಂದ ಟರ್ಕಿಯಲ್ಲಿನ ಕ್ರಿಪ್ಟೋ ಕರೆನ್ಸಿ ಮಾರುಕಟ್ಟೆಯ ಬೆಳವಣಿಗೆಯನ್ನು ಕಂಡಿತು ಹಾಗೂ ಬಿಟ್ ಕಾಯಿನ್ 111 ಶೇಕಡಾ ಮತ್ತು ಎರಡನೇ ಅತಿದೊಡ್ಡ ಕ್ರಿಪ್ಟೋ ಕರೆನ್ಸಿ ಎಥೆರಿಯಮ್ 225 ಶೇಕಡಾ ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

* ಕ್ರಿಪ್ಟೋ ಕರೆನ್ಸಿ ಮಾರುಕಟ್ಟೆಯಲ್ಲಿನ ಮಾರುಕಟ್ಟೆ ಚಂಚಲತೆ ಮತ್ತು ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸಲು ಟರ್ಕಿ ಸರ್ಕಾರವು ನಿಷೇಧಿಸಿದೆ. ಸೆಂಟ್ರಲ್ ಬ್ಯಾಂಕ್ ಆಫ್ ಟರ್ಕಿ ಬಗ್ಗೆ ಮಾಹಿತಿ :

* ಟರ್ಕಿ ಗಣರಾಜ್ಯದ ಸೆಂಟ್ರಲ್ ಬ್ಯಾಂಕ್, ಸಿಬಿಆರ್‌ಟಿ ಟರ್ಕಿಯ ಕೇಂದ್ರ ಬ್ಯಾಂಕ್ ಆಗಿದೆ.

* ಇದರ ಜವಾಬ್ದಾರಿಗಳಲ್ಲಿ ವಿತ್ತೀಯ ಮತ್ತು ವಿನಿಮಯ ದರ ನೀತಿಯನ್ನು ನಡೆಸುವುದು, ಟರ್ಕಿಯ

ಅಂತರರಾಷ್ಟ್ರೀಯ ಮೀಸಲುಗಳನ್ನು ನಿರ್ವಹಿಸುವುದು, ಹಾಗೆಯೇ ನೋಟುಗಳನ್ನು ಮುದ್ರಿಸುವುದು ಮತ್ತು ವಿತರಿಸುವುದು ಮತ್ತು ದೇಶದಲ್ಲಿ ಪಾವತಿ ವ್ಯವಸ್ಥೆಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ನಿಯಂತ್ರಿಸುವುದು.

# 19-04-2021

## ಕೇಂದ್ರ ಮಾಜಿ ಸಚಿವ ಬಾಚಿ ಸಿಂಗ್ ರಾವತ್ ಇನ್ನಿಲ



* ಮಾಜಿ ಕೇಂದ್ರ ಸಚಿವ ಹಾಗೂ ಬಿಜೆಪಿಯ ಹಿರಿಯ ಮುಖಂಡ ಬಾಚಿ ಸಿಂಗ್ ರಾವತ್'ರವರು ತಮ್ಮ 71ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಬಾಚಿ ಸಿಂಗ್ ರಾವತ್ ಅವರು ಭಾರತೀಯ ಜನತಾ ಪಕ್ಷದ ಭಾರತೀಯ ರಾಜಕಾರಣಿ.

* ಬಾಚಿ ಸಿಂಗ್ ರಾವತ್ ಅವರು ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಬಾಚಿ ಸಿಂಗ್ ರಾವತ್ ರವರ ಬಗ್ಗೆ ಮಾಹಿತಿ :

* ಬಾಚಿ ಸಿಂಗ್ ರಾವತ್, ಭಾರತೀಯ ಜನತಾ ಪಕ್ಷದ ಭಾರತೀಯ ರಾಜಕಾರಣಿ.

* ಅವರು ಭಾರತದ 14 ನೇ ಲೋಕಸಭೆಯ ಸದಸ್ಯರಾಗಿದ್ದರು ಮತ್ತು 4 ಬಾರಿ ಸಂಸದರಾಗಿದ್ದರು.

* ಅವರು ಉತ್ತರಾಖಂಡದ ಅಲ್ಮೋರಾ ಕ್ಷೇತ್ರವನ್ನು ಪ್ರತಿನಿಧಿಸಿದರು.

* ಜನನ : 1 ಆಗಸ್ಟ್ 1949, ಅಲ್ಮೋರಾ
* ನಿಧನ : 18 ಏಪ್ರಿಲ್ 2021
* ಪಕ್ಷ : ಭಾರತೀಯ ಜನತಾ ಪಕ್ಷ

## ಡೆಮ್'ಡೆಸಿವಿರ್ ಲಸಿಕೆ ಆಮದಿಗೆ ಕೇಂದ್ರದ ಅನುಮತಿ ಕೇಳಿದ ಜಾರ್ಖಂಡ್




* ಜಾರ್ಖಂಡ್ ರಾಜ್ಯವು ಬಾಂಗ್ಲಾದೇಶದಿಂದ ರೆಮ್ ಡೆಸಿವಿರ್ ಕೊರೊನಾ ಲಸಿಕೆ ಆಮದುಮಾಡಿಕೊಳ್ಳಲು ಕೇಂದ್ರ ಸರ್ಕಾರದ ಅನುಮತಿಯನ್ನು ಕೇಳಿದೆ.

* ಮುಖ್ಯಮಂತ್ರಿ ಹೇಮಂತ್ ಸೋರೆನ್'ರವರು ಕೊರೊನಾ ಸಾಂಕ್ರಾಮಿಕ ರೋಗದಿಂದ ಬಳಲುತ್ತಿರುವ ರೋಗಿಗಳಿಗೆ ರೆಮ್'ಡೆಸಿವಿರ್ ಲಸಿಕೆ ನೀಡಲಾಗುತ್ತಿದೆ ಎಂದು ಟ್ವೀಟ್ ಮೂಲಕ ಹೇಳಿದ್ದಾರೆ, ಹಾಗೂ ಈ ಲಸಿಕೆಯನ್ನು ಬಾಂಗ್ಲಾದೇಶದಿಂದ ತರಿಸಿಕೊಳ್ಳಲಾಗುವದು ಎಂದು ತಿಳಿಸಿದ್ದಾರೆ.

* ಜಾರ್ಖಂಡ್ ರಾಜ್ಯದಲ್ಲಿನ ಕ್ರಿಟಿಕಲ್ ಪರಿಸ್ಥಿತಿಯಲ್ಲಿನ ಕೊರೋನ ರೋಗಿಗಳಿಗೆ ನೀಡಲಾಗುತ್ತಿದ್ದು, ಮತ್ತು ತುರ್ತು ಸಂದರ್ಭಗಳಲ್ಲಿ ಲಸಿಕೆಗಳನ್ನು ಬಳಸಲು 50 ಸಾವಿರ ಲಸಿಕೆಗಳನ್ನು ಆಮದುಮಾಡಿಕೊಳ್ಳಲಾಗುವದು ಎಂದು ಮುಖ್ಯಮಂತ್ರಿ ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ 7 ಭಾರತೀಯ ಕಂಪನಿಗಳು ರೆಮ್'ಡೆಸಿವಿರ್ ಲಸಿಕೆಯನ್ನು ಉತ್ಪಾದಣೆ ಮಾಡುತ್ತಿವೆ ಮತ್ತು 38.80 ಲಕ್ಷ ಯುನಿಟ್'ನಷ್ಟು ಲಸಿಕೆಗಳನ್ನು ಉತ್ಪಾದಿಸಲಾಗುತ್ತಿದೆ ಎಂದು ತಿಳಿದು ಬಂದಿದೆ. ಜಾರ್ಖಂಡ್ ರಾಜ್ಯದ ಬಗ್ಗೆ ಮಾಹಿತಿ:

* ಜಾರ್ಖಂಡ್ ಪೂರ್ವ ಭಾರತದ ರಾಜ್ಯ. ಇದು ಜಲಪಾತಗಳು, ಪರಸ್ನಾಥ್ ಬೆಟ್ಟದ ಸೊಗಸಾದ ಜೈನ ದೇವಾಲಯಗಳು ಮತ್ತು ಬೆಟ್ಲಾ ರಾಷ್ಟ್ರೀಯ ಉದ್ಯಾನದ ಆನೆಗಳು ಮತ್ತುಹುಲಿಗಳಿಗೆ ಹೆಸರುವಾಸಿಯಾಗಿದೆ.

* ಜಾರ್ಖಂಡ್ ರಾಂಚಿಯ ರಾಜ್ಯ ರಾಜಧಾನಿ ಉದ್ಯಾನವನಕ್ಕೆ ಒಂದು ಗೇಟ್'ವೇ ಆಗಿದೆ.

* ಇದು 17 ನೇ ಶತಮಾನದ ಜಗನ್ನಾಥ ದೇವಾಲಯ, ಹಿಂದೂ ದೇಗುಲ ಮತ್ತು ಜಾರ್ಖಂಡ್ ಯುದ್ಧ ಸ್ಮಾರಕವನ್ನು ಒಳಗೊಂಡಿದೆ. ಟ್ಯಾಗೋರ್ ಹಿಲ್ ನೊಬೆಲ್ ಪ್ರಶಸ್ತಿ ಪುರಸ್ಕೃತ ಲೇಖಕ ರವೀಂದ್ರನಾಥ ಟ್ಯಾಗೋರ್ ಅವರನ್ನು ಗೌರವಿಸುವ ಸ್ಮಾರಕವಾಗಿದೆ

* ರಾಜಧಾನಿ : ರಾಂಚಿ
* ಜನಸಂಖ್ಯೆ : 3.19 ಕೋಟಿ (2012)
* ಮುಖ್ಯಮಂತ್ರಿ : ಹೇಮಂತ್ ಸೊರೆನ್

## ಕೋವಿಡ್ ಕಾರಣದಿಂದಾಗಿ ಕೈಗಾರಿಕೆಗಳಿಗೆ ಆಮ್ಲಜನಕ ಪೂರೈಕೆ ನಿಷೇಧ



* ಕೊರೋನ ವೈರಸ್'ನಿಂದಾಗಿ ತೀವ್ರವಾಗಿ ಬಳಲುತ್ತಿರುವ ರೋಗಿಗಳಿಗೆ ಚಿಕಿತ್ಸೆಗೆ ನೀಡಲು ಹೆಚ್ಚಿನ ಸಂಖ್ಯೆಯಲ್ಲಿ ಆಮ್ಲಜನಕ ಬೇಕಾಗುವ ಉದ್ದೇಶದಿಂದ, 9 ಉದ್ದಿಮೆಗಳನ್ನು ಬಿಟ್ಟು ಉಳಿದೆಲ್ಲಾ ಕೈಗಾರಿಕೆಗಳಿಗೆ ಆಮ್ಲಜನಕ ಒದಗಿಸುವದನ್ನು ಕೇಂದ್ರ ಸರ್ಕಾರವು ನಿಷೇಧಿಸಿದೆ.

* ಪ್ರಸ್ತುತ ಕೈಗಾರಿಕೆಗಳಿಗೆ ನೀಡುತ್ತಿರುವ ಆಮ್ಲಜನಕವನ್ನು ಆಸ್ಪತ್ರೆಗಳಿಗೆ ಪೂರೈಸುವಂತೆ ಕೇಂದ್ರ ಸರ್ಕಾರವು ಆದೇಶವನ್ನು ನೀಡಿದೆ.

* ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿಯಾಗಿರುವ ಅಜಯ್ ಭಲ್ಲಾ ಅವರು ಲಿಖಿತ ರೂಪದಲ್ಲಿ ಪತ್ರ ನೀಡಿದ್ದಾರೆ, ಹಾಗೂ ಈ ಆದೇಶವು ಏಪ್ರಿಲ್. 22ರಿಂದ ಜಾರಿಯಾಗಲಿದೆ ಎಂದು ತಿಳಿಸಿದ್ದಾರೆ.

## ಅಸ್ಸಾಂ ಮಾಜಿ ಮುಖ್ಯಮಂತ್ರಿ ಭೂಮಿಧರ್ ಬರ್ಮನ್ ವಿಧಿವಶ



* ಅಸ್ಸಾಂನ ಮಾಜಿ ಮುಖ್ಯಮಂತ್ರಿ ಡಾ. ಭೂಮಿಧರ್ ಬರ್ಮನ್'ರವರು ತಮ್ಮ 90ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಭೂಮಿಧರ್ ಬರ್ಮನ್ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದ ಭಾರತೀಯ ರಾಜಕಾರಣಿಯಾಗಿದ್ದರು.

* ಮುಖ್ಯಮಂತ್ರಿ ಹಿತೇಶ್ವರ್ ಸೈಕೈರವರ ಅಕಾಲಿಕ ಮರಣದಿಂದಾಗಿ ಇವರು 1996ರ ಏಪ್ರಿಲ್ 22 ರಿಂದ 1996ರ ಮೇ 14 ರವರೆಗೆ ಅಸ್ಸಾಂನ ಮುಖ್ಯಮಂತ್ರಿಯಾಗಿದ್ದರು, ಮತ್ತು ಇವರು ಒಟ್ಟಾರೆ 7 ಬಾರಿ ಅಸ್ಸಾಂ ವಿಧಾನಸಭೆಯ ಸದಸ್ಯರಾಗಿದ್ದರು.

* ಭೂಮಿಧರ್ ಬರ್ಮನ್ ಅವರು 1967ರಲ್ಲಿ ಮೊದಲು ಬಾರಿ ಆಯ್ಕೆಯಾದರು, ನಂತರ 2015 ರಲ್ಲಿ ಅಸ್ಸಾಂನ ಕ್ಯಾಬಿನೆಟ್ ಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದರು. ಅಸ್ಸಾಂ ರಾಜ್ಯದ ಬಗ್ಗೆ ಮಾಹಿತಿ :

* ಅಸ್ಸಾಂ ರಾಜ್ಯವು ಈಶಾನ್ಯ ಭಾರತದ ವನ್ಯಜೀವಿಗಳು, ಪುರಾತತ್ವ ಸ್ಥಳಗಳು ಮತ್ತು ಚಹಾ ತೋಟಗಳಿಗೆ ಹೆಸರುವಾಸಿಯಾಗಿದೆ.

* ಪಶ್ಚಿಮದಲ್ಲಿ, ಅಸ್ಸಾಂನ ಅತಿದೊಡ್ಡ ನಗರವಾದ ಗುವಾಹಟಿಯಲ್ಲಿ ರೇಷ್ಮೆ ಬಜಾರ್‌ಗಳು ಮತ್ತು ಬೆಟ್ಟದ ಕಾಮಾಕ್ಯ ದೇವಾಲಯವಿದೆ.

* ಉಮಾನಂದ ದೇವಸ್ಥಾನವು ಬ್ರಹ್ಮಪುತ್ರ ನದಿಯ ನವಿಲು ದ್ವೀಪದಲ್ಲಿದೆ.

* ರಾಜ್ಯ ರಾಜಧಾನಿ ಡಿಸ್ಪುರ್ ಗುವಾಹಟಿಯ ಉಪನಗರವಾಗಿದೆ.

* ದೇವಾಲಯದ ಸಂಕೀರ್ಣದ ಅವಶೇಷಗಳಾದ ಹಜೋ ಮತ್ತು ಮದನ್ ಕಾಮದೇವ್ ಅವರ ಪ್ರಾಚೀನ ಯಾತ್ರಾ ಸ್ಥಳವು ಹತ್ತಿರದಲ್ಲಿದೆ.

* ರಾಜಧಾನಿ: ಡಿಸ್ಪೂರ್
* ಮುಖ್ಯಮಂತ್ರಿ: ಸರ್ಬಾನಂದ ಸೋನೊವಾಲ್
* ಜನಸಂಖ್ಯೆ: 3.09 ಕೋಟಿ (2012)

## ಖ್ಯಾತ ನಿಘಂಟು ತಜ್ಞ ಪ್ರೊ ಜಿ.ವೆಂಕಟಸುಬ್ಬಯ್ಯ ನಿಧನ



* ಕನ್ನಡದ ಖ್ಯಾತ ನಿಘಂಟು ತಜ್ಞ, ಪದ್ಮಶ್ರೀ ಪುರಸ್ಕೃತ, ಪ್ರೊ.ಜಿ. ವೆಂಕಟಸುಬ್ಬಯ್ಯ ಅವರು ತಮ್ಮ 108 ನೇ ವರ್ಷ ವಯಸ್ಸಿನಲ್ಲಿ ಅನಾರೋಗ್ಯ ಕಾರಣದಿಂದಾಗಿ ಸಾವನ್ನಪಿದ್ದಾರೆ.

* ಪ್ರೊ.ಜಿ. ವೆಂಕಟಸುಬ್ಬಯ್ಯ, ನಿಘಂಟು ಶಾಸ್ತ್ರ, ಪ್ರಾಚೀನ ಸಾಹಿತ್ಯ ಅಧ್ಯಯನ, ಅನುವಾದ ಕ್ಷೇತ್ರಗಳಲ್ಲಿ ಬಹಳ ಸಾಧನೆ ಮಾಡಿದ್ದಾರೆ.

* ಪ್ರೊ.ಜಿ. ವೆಂಕಟಸುಬ್ಬಯ್ಯ ಅವರು ಇಗೋ ಕನ್ನಡ ಎಂಬ ಅಂಕಣದ ಮೂಲಕ ಕನ್ನಡಿಗರ ಮನಸ್ಸು ಬಹಳ

ಹತ್ತಿರವಾದವರು.

* 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಪ್ರೊ. ಜಿ. ವೆಂಕಟಸುಬ್ಬಯ್ಯ ವಹಿಸಿಕೊಂಡಿದ್ದರು.

* ಪ್ರೊ.ಜಿ. ವೆಂಕಟಸುಬ್ಬಯ್ಯ ಅವರು ಪಡೆದ ಪ್ರಶಸ್ತಿಗಳು ಇಂತಿವೆ, ಪದ್ಮಶ್ರೀ, ಪಂಪ, ನಾಡೋಜ, ಭಾಷಾಸಮ್ಮಾನ್ ಹೀಗೆ ಹಲವು ಪ್ರಶಸ್ತಿಗಳನ್ನ ಪಡೆದು ಅಪಾರವಾದ ಸಾಧನೆಯನ್ನು ಮಾಡಿದ್ದಾರೆ. ಪ್ರೊ.ಜಿ. ವೆಂಕಟಸುಬ್ಬಯ್ಯ ರವರ ಬಗ್ಗೆ ಮಾಹಿತಿ :

* ಜಿ.ವೆಂಕಟಸುಬ್ಬಯ್ಯ ಅಥವಾ ಜಿ. ವಿ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಗಂಜಾಂ ವೆಂಕಟಸುಬ್ಬಯ್ಯ ಅವರು ಕನ್ನಡ ಬರಹಗಾರ, ವ್ಯಾಕರಣಕಾರ, ಸಂಪಾದಕ, ನಿಘಂಟು, ಮತ್ತು ವಿಮರ್ಶಕರಾಗಿದ್ದರು.

* ಅವರು ಎಂಟು ನಿಘಂಟುಗಳನ್ನು ಸಂಗ್ರಹಿಸಿದ್ದಾರೆ, ಕನ್ನಡದಲ್ಲಿ ನಿಘಂಟು ವಿಜ್ಞಾನದ ಬಗ್ಗೆ ನಾಲ್ಕು ಮೂಲ ಕೃತಿಗಳನ್ನು ಬರೆದಿದ್ದಾರೆ, ಅರವತ್ತು ಪುಸ್ತಕಗಳನ್ನು ಸಂಪಾದಿಸಿದ್ದಾರೆ ಮತ್ತು ಹಲವಾರು ಪತ್ರಿಕೆಗಳನ್ನು ಪ್ರಕಟಿಸಿದರು.

* ಜನನ: 23 ಆಗಸ್ಟ್ 1913, ಮೈಸೂರು
* ನಿಧನ: 19 ಏಪ್ರಿಲ್ 2021
* ಶಿಕ್ಷಣ: ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾಲಯ
* ಪ್ರಶಸ್ತಿಗಳು: ಪದ್ಮಶ್ರೀ, ಪಂಪಾ ಪ್ರಶಸ್ತಿ ಹಾಗು ಇತರೆ

## ಆಮ್ಲಜನಕವನ್ನು ಹೆಚ್ಚಿಸಲು ಪ್ರೆಶರ್ ಸ್ವಿಂಗ್ ಆಡ್ಸರ್ಪ್ಶನ್ ಸಸ್ಯಗಳಿಗೆ ಅನುಮತಿ




* ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಭಾರತ ದೇಶದಲ್ಲಿನ ಆಮ್ಲಜನಕದ ಸಾಮರ್ಥ್ಯವನ್ನು ಹೆಚ್ಚಿಸಲು 162 ಪ್ರೆಶರ್ ಸ್ವಿಂಗ್ ಆಡ್ಸರ್ಪ್ಶನ್ ಸಸ್ಯಗಳಿಗೆ ಅನುಮತಿಯನ್ನು ನೀಡಿದೆ.

* ವೈದ್ಯಕೀಯ ಆಮ್ಲಜನಕದ ಪೂರೈಕೆ ಮತ್ತು ರಾಷ್ಟ್ರೀಯ ಗ್ರಿಡ್ ಮೇಲಿರುವ ಹೊರೆ ಕಡಿಮೆ ಮಾಡಲು ಈ ಪ್ರೆಶರ್ ಸ್ವಿಂಗ್ ಆಡ್ಸರ್ಪ್ಶನ್ ಸಸ್ಯಗಳು ಸಹಾಯಮಾಡುತ್ತವೆ.

* ಆಮ್ಲಜನಕವನ್ನು ಹೆಚ್ಚಿಸುವ ಈ 162 ಪ್ರೆಶರ್ ಸ್ವಿಂಗ್ ಆಡ್ಸರ್ಪ್ಶನ್ ಸಸ್ಯಗಳನ್ನು ಹಲವು ರಾಜ್ಯಗಳಲ್ಲಿ ಸ್ಥಾಪಿಸಲಾಗಿದೆ.

* ಮಧ್ಯಪ್ರದೇಶ, ಚಂಡೀಗಢ, ಹಿಮಾಚಲ ಪ್ರದೇಶದಲ್ಲಿ, ಉತ್ತರಾಖಂಡ ಮತ್ತು ಗುಜರಾತ್, ಮೂರು, ಛತ್ತೀಸಘರ್, ಆಂಧ್ರಪ್ರದೇಶ, ಹರಿಯಾಣ, ದೆಹಲಿ, ಮಹಾರಾಷ್ಟ್ರ, ಪಂಜಾಬ್, ಕೇರಳ, ಉತ್ತರ ಪ್ರದೇಶ, ಪುದುಚೇರಿಯಲ್ಲಿ ಪ್ರೆಶರ್ ಸ್ವಿಂಗ್ ಆಡ್ಸರ್ಪ್ಶನ್ ಸಸ್ಯಗಳನ್ನು ಸ್ಥಾಪಿಸಲಾಗಿದೆ.

* ಏಪ್ರಿಲ್ ಮತ್ತು ಮೇ ತಿಂಗಳ ಅಂತ್ಯದೊಳಗೆ ಇನ್ನು ಹೆಚ್ಚಿನ ಆಮ್ಲಜನಕವನ್ನು ಹೆಚ್ಚಿಸುವ ಸಸ್ಯಗಳನ್ನು ಪಿಎಂ ಕೇರ್ಸ್ ನಿಧಿಯಡಿ ಸ್ಥಾಪಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಅನುಮತಿ ನೀಡಲಿದೆ.

## ರಷ್ಯಾದಿಂದ ಶೀಘ್ರ ಚಂದ್ರ ಮಿಷನ್ ಲೂನಾ 25 ಆರಂಭ



* 2021ರ ಅಕ್ಟೋಬರ್ ವೇಳೆಗೆ ರೋಸ್ಕೋಸ್ಮೋಸ್ ಲೂನಾ 25 ಅನ್ನು ಆರಂಭಿಸಲಿದೆ.

* ರೋಸ್ಕೋಸ್ಮೋಸ್ ಒಂದು ರಷ್ಯಾದ ಬಾಹ್ಯಾಕಾಶ ನಿಗಮವಾಗಿದೆ.

* 1970ರಲ್ಲಿ ಮೊದಲ ಲೂನಾ ಮಿಷನ್ ಪ್ರಾರಂಭ ಮಾಡಲಾಯಿತು.

* ಲೂನಾ 25 ಇದು ಮಿಷನ್ ಲ್ಯಾಂಡರ್ ಹೊತ್ತು ಒಯ್ಯುತ್ತದೆ, ಲ್ಯಾಂಡಿಂಗ್ ತಂತ್ರಜ್ಞಾನವನ್ನು ಸಾಬೀತುಪಡಿಸುತ್ತದೆ, ಮತ್ತು ಮಣ್ಣಿನ ಮಾದರಿಗಳನ್ನು ಸಂಗ್ರಹಿಸಲು ರೊಬೊಟಿಕ್ ತೋಳು ಹಾಗೂ 30ಕಿಲೋ.ಗ್ರಾಂ ವೈಜ್ಞಾನಿಕ ಸಾಧನಗಳನ್ನು ಸಾಗಿಸುವ ಸಾಮರ್ಥ್ಯವನ್ನು ಹೊಂದಿದೆ.

* ಇದೆ ಮೊದಲನೇಯ ಬಾಹ್ಯಾಕಾಶ ನೌಕೆ ಚಂದ್ರನ ಈ ಪ್ರದೇಶಕ್ಕೆ ತೆರಳಿರುವದು ಇದು ಚಂದ್ರನ ದಕ್ಷಿಣ ಧ್ರುವದ ಸುತ್ತಲಿನ ಭೂಗೋಳವನ್ನು ಅಧ್ಯಯನ ಮಾಡುತ್ತದೆ.

* ಲೂನಾ 24 ಲೂನಾ ಸರಣಿಯ ಕೊನೆಯದಾಗಿದ್ದು ಇದನ್ನು

1976ರಲ್ಲಿ ಪ್ರಾರಂಭವಾಗಿದೆ, ಇದು ಚಂದ್ರನ ಮೇಲ್ಮೈ ಮಾದರಿಗಳನ್ನು ಹಿಂಪಡೆಯುವ ಮೂರನೇ ಸೋವಿಯತ್ ಒಕ್ಕೂಟದ ಕಾರ್ಯಾಚರಣೆಯಾಗಿದೆ.

* ರೋಸ್ಕೋಸ್ಮೋಸ್ ಮತ್ತು ಜಪಾನೀಸ್ ಬಾಹ್ಯಾಕಾಶ ಸಂಸ್ಥೆ ಜಾಕ್ಸಾ ವಿಲೀನದ ಮೂಲಕ ಲೂನಾರ್ 25A ಲೂನಾ 25 ಅಭಿವೃದ್ಧಿಪಡಿಸಬೇಕಾಗಿತ್ತು, ಆದರೆ ವಿಲೀನವನ್ನು ಸ್ಥಗಿತಗೊಳಿಸಲಾಗಿದೆ ಎಂದು ತಿಳಿದು ಬಂದಿದೆ.

# 20-04-2021

## ಮಂಗಳ ಗ್ರಹದ ಮೇಲೆ ಹಾರಿದ ನಾಸಾ ಇಂಗೆನ್ಯೂಟಿ ಹೆಲಿಕಾಪ್ಟರ್



* ಮಂಗಳ ಗ್ರಹದ ಭೂ ಮೇಲ್ಮೈನಿಂದ ಇಂಗೆನ್ಯೂಟಿ ಎಂಬ ರೊಬೊಟಿಕ್ ಹೆಲಿಕಾಪ್ಟರನ್ನು ಕೆಲ ಕ್ಷಣಗಳವರೆಗೆ ನಾಸಾ ಹಾರಿಸಿತು.

* ಇಂಗೆನ್ಯೂಟಿ ಹೆಲಿಕಾಪ್ಟರ್ 10 ಅಡಿಗಳವರೆಗೆ ಮಂಗಳ ಗ್ರಹದ ಮೇಲೆ ಹಾರಾಡಿತು, ನಾಸಾದ ವಿಜ್ಞಾನಿಗಳು ಇಂಗೆನ್ಯೂಟಿ ಹೆಲಿಕಾಪ್ಟರ್ 40 ಸೆಕೆಂಡುಗಳ ಹಾರಾಡುತ್ತದೆ ಎನ್ನುವ ಗುರಿಯನ್ನು ಹೊಂದಿದ್ದರು ಆದರೆ ಕೇವಲ 30 ಸೆಕೆಂಡುಗಳು ಮಾತ್ರ ಹಾರಾಡಿತು ಹಾಗೂ ಇದೊಂದು ಬಾಹ್ಯಾಕಾಶದ ಇತಿಹಾಸದಲ್ಲಿ ದಾಖಲೆಯಾಗಿದೆ.

* ಮಂಗಳನ ಭೂಮೇಲ್ಮೈನ ಮೇಲೆ ಇಂಗೆನ್ಯೂಟಿ ಹೆಲಿಕಾಪ್ಟರ್ ಹಾರಾಡಿದ ತನ್ನ ಚಿತ್ರಗಳನ್ನು ಭೂಮಿಗೆ ರವಾನಿಸಿದೆ ಹಾಗೂ ಮಂಗಳವನ್ನು ತಲುಪಿರುವ ಪರ್ಸಿವೆರನ್ಸ್ ನೌಕೆಯ ಹಾರಾಟದ ದೃಶ್ಯಾವಳಿಗಳನ್ನು ಕೂಡ ಭೂಮಿಗೆ ಕಳುಹಿಸಿದೆ.

* ನಾಸಾದ ವಿಜ್ಞಾನಿಗಳು ಈ ಕಾರ್ಯಾಚರಣೆಯನ್ನು ಜೆಟ್ ಪ್ರಾಪ್ಯುಲನ್ ಲ್ಯಾಬೊರೇಟರಿನಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

## ಅಡೋಬ್ ಸಹ ಸಂಸ್ಥಾಪಕ ಚಾರ್ಲ್ಸ್ ಚಕ್ ಗೆಶ್ಕೆ ವಿಧಿವಶ



* ಅಡೋಬ್‌ನ ಸಹ ಸಂಸ್ಥಾಪಕ ಹಾಗೂ ಪಿಡಿಎಫ್ ತಂತ್ರಜ್ಞಾನದ ಡೆವಲಪರ್ ಆಗಿದ್ದ ಚಾರ್ಲ್ಸ್ ಚಕ್ ಗೆಶ್ಕೆ ಅವರು ತಮ್ಮ 81ನೇ ವರ್ಷ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

* ಪ್ರಸ್ತುತ ವಿಶ್ವದ ಪ್ರಮುಖ ಸಾಫ್ಟ್‌ವೇರ್ ಕಂಪನಿಗಳಲ್ಲಿ ಅಡೋಬ್ ಕಂಪನಿ ಕೂಡ ಒಂದಾಗಿದೆ.

* 2009ರಲ್ಲಿ ಅಮೆರಿಕಾ ಅಧ್ಯಕ್ಷ ಬರಾಕ್ ಒಬಾಮ ಅವರು ಚಾರ್ಲ್ಸ್ ಚಕ್ ಗೆಶ್ಕೆ ಅವರು ಸಾಫ್ಟ್‌ವೇರ್ ಕಂಪನಿಗಳಲ್ಲಿ ಮಾಡಿರುವ ಸಾಧನೆಗಳನ್ನೂ ಪರಿಗಣಿಸಿ ಇವರಿಗೆ ನ್ಯಾಷನಲ್ ಮೆಡಲ್ ಆಫ್ ಟೆಕ್ನಾಲಜಿ ಪ್ರಶಸ್ತಿಯನ್ನು ನೀಡಿದ್ದರು.

* 1982ರಲ್ಲಿ ಅಡೋಬ್ ಸಾಫ್ಟ್‌ವೇರ್ ಕಂಪನಿಯನ್ನು ಚಾರ್ಲ್ಸ್ ಚುಕ್‌ಗೆಶ್ಕೆ ಆರಂಭಿಸಿದರು, ಮತ್ತು 1990ರಲ್ಲಿ ಪಿಡಿಎಫ್ ಫಾರ್ಮೆಟ್ ಅಭಿವೃದ್ಧಿ ಪಡಿಸುವದರ ಜೊತೆಗೆ ತಂತ್ರಜ್ಞಾನ ಅಭಿವೃದ್ಧಿಗೆ ಪಾತ್ರರಾಗಿದ್ದರು.

* ಅಡೋಬ್ ಸಾಫ್ಟ್‌ವೇರ್ ಕಂಪನಿಯನ್ನು ಚಾರ್ಲ್ಸ್ ಮತ್ತು ಜಾನ್ ವಾರ್ನಕ್ ಅಭಿವೃದ್ಧಿ ಪಡಿಸಿ ಪ್ರಾರಂಭಿಸಿದರು.

## ಅಶೋಕ್ ಲೇಲ್ಯಾಂಡ್ ನಿರ್ಮಿತ ಸ್ವದೇಶಿ ಲೈಟ್ ಬುಲೆಟ್ ಪ್ರೂಫ್ ವಾಹನ ವಾಯುಪಡೆಗೆ




* ಅಶೋಕ್ ಲೇಲ್ಯಾಂಡ್ ಲಿಮಿಟೆಡ್ ಕಂಪನಿಯು ಮೊದಲ ಲೈಟ್ ಬುಲೆಟ್ ಪ್ರೂಫ್ ವಾಹನಗಳನ್ನು ಭಾರತೀಯ ವಾಯು ಸೇನೆಗೆ ನೀಡಲಾಗುವದು ಎಂದು ತಿಳಿಸಿದೆ.

* ಪ್ರಸ್ತುತ ಅಶೋಕ್ ಲೇಲ್ಯಾಂಡ್ ಕಂಪನಿಯು ತನ್ನ ಶಸ್ತ್ರಸಜ್ಜಿತ ವಾಹನಗಳನ್ನು ಭಾರತೀಯ ಸೇನೆಯನ್ನು ಸೇರಲಿವೆ ಇದರಿಂದ ಭಾರತೀಯ ಸೇನೆಯ ಶಕ್ತಿ

ಇನ್ನಷ್ಟು ಬಲವಾಗಲಿದೆ ಎಂದು ತಿಳಿಸಿದೆ.

* ಈ ಬುಲೆಟ್ ಪ್ರೂಫ್ ವಾಹನವನ್ನು ಲಾಕ್‌ಹೀಡ್ ಮಾರ್ಟಿನ್'ನಿಂದ ಅಶೋಕ್ ಲೇಲ್ಯಾಂಡ್‌ಗೆ ತಂತ್ರಜ್ಞಾನ ವರ್ಗಾವಣೆಯ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ.

* ಈ ಸ್ವದೇಶಿ ನಿರ್ಮಿತ ಬುಲೆಟ್ ಪ್ರೂಫ್ ವಾಹನಗಳನ್ನು ಅಶೋಕ್ ಲೇಲ್ಯಾಂಡ್ ಕಂಪನಿ ಸಂಪೂರ್ಣವಾಗಿ ಭಾರತದಲ್ಲಿಯೇ ತಯಾರಿಸಿದೆ.

* ಈ ಬುಲೆಟ್ ಪ್ರೂಫ್ ವಾಹನಗಳು ಉತ್ತಮ ಯುದ್ಧ ಸಾಮರ್ಥ್ಯದ ಹಾಗೂ ಸಿಬ್ಬಂದಿಯ ಬ್ಯಾಲಿಸ್ಟಿಕ್ ಮತ್ತು ಬ್ಲಾಸ್ಟ್'ಗಳಿಂದ ರಕ್ಷಿಸುತ್ತವೆ ಎಂದು ತಿಳಿಸಿದ್ದಾರೆ.

* ಲೇಲ್ಯಾಂಡ್ ವಾಹನವು 4 X 4 ಮತ್ತು 12 X 12 ಶಸ್ತ್ರಸಜ್ಜಿತ ವಾಹನಗಳು ಯುದ್ಧಭೂಮಿಯಲ್ಲಿ ಕಾರ್ಯತಂತ್ರದ ರೂಪವನ್ನು ಪಡೆದುಕೊಂಡಿವೆ ಹಾಗೂ ಅಶೋಕ ಲೇಲ್ಯಾಂಡ್ ಕಂಪನಿ 2014 ರಿಂದ ಮತ್ತು ತಂತ್ರಜ್ಞಾನ ವರ್ಗಾವಣೆ ಕಾರ್ಯಕ್ರಮದ ಅಡಿಯಲ್ಲಿ ಭಾರತೀಯ ಸಶಸ್ತ್ರ ಪಡೆಗಳಿಗೆ ಇನ್ನು ಹೆಚ್ಚಿನ ರಕ್ಷಣಾ ಸಾಧನಗಳನ್ನು ಒದಗಿಸುವ ಯೋಜನೆ ಇದೆ ಎಂದು ತಿಳಿಸಿದೆ.

## ಕ್ಲೀಯರ್ ಟ್ರಿಪ್ ಮತ್ತು ಫ್ಲಿಪ್ ಕಾರ್ಟ್ ಒಪ್ಪಂದ




* ಭಾರತದ ಪ್ರಮುಖ ಇ ಕಾಮರ್ಸ್ ಮಾರುಕಟ್ಟೆಯಾಗಿರುವ ಫ್ಲಿಪ್ ಕಾರ್ಟ್ (Flipkart) ಇದೀಗ 40 ಮಿಲಿಯನ್ ಡಾಲರ್ ಮೌಲ್ಯದ ಕ್ಲೀಯರ್ ಟ್ರಿಪ್'ನ್ನು ತನ್ನ ಬ್ಯುಸಿನೆಸ್ ಸೇರ್ಪಡೆಮಾಡಿಕೊಳ್ಳಲು ಸಿದ್ಧವಾಗಿದೆ ಹಾಗೂ ಈ ವ್ಯವಹಾರವು ನಗದು ಕಮ್ ಇಕ್ವಿಟಿ ಒಪ್ಪಂದವಾಗಿದೆ ಎಂದು ತಿಳಿದು ಬಂದಿದೆ.

* ಸ್ಟುವರ್ಟ್ ಕ್ರೈಟನ್'ರವರ ಈ ಕ್ಲಿಯರ್ ಟ್ರಿಪ್ ಕಂಪನಿಯನ್ನು 2006 ರಲ್ಲಿ ಮುಂಬೈನಲ್ಲಿ ಪ್ರಾರಂಭಿಸಿದರು ಇದು ಈಗ ತನ್ನ15 ವರ್ಷದ ಬಿಸಿನೆಸ್ ಪಯಣದಲ್ಲಿ ಯಶಸ್ಸನ್ನು ಕಂಡೀತು ಇದೀಗ ಈ ಕಂಪನಿಯು 40ಮಿಲಿಯನ್ ಡಾಲರ್ ಮೌಲ್ಯದ ಕ್ಲೀಯರ್ ಟ್ರಿಪ್'ನ್ನು ಫ್ಲಿಪ್ ಕಾರ್ಟ್ ತನ್ನ ಬ್ಯುಸಿನೆಸ್ ಸೇರ್ಪಡೆಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದೆ.

* ಕ್ಲೀಯರ್ ಟ್ರಿಪ್ ಕಂಪನಿಯು ಇದೀಗ ಫ್ಲಿಪ್ ಕಾರ್ಟ್'ನ ಮೂಲಕ ತನ್ನ ಟ್ರಾವೆಲ್ಲಿಂಗ್ ಸೇವೆಯನ್ನು ಮುಂದುವರೆಸಲು ಒಪ್ಪಂದ ಮಾಡಿಕೊಳ್ಳಲಿವೆ ಎಂದು ತಿಳಿಸಿವೆ.

* ಈ ಕ್ಲಿಯರ್ ಟ್ರಿಪ್ ಕಾಮಾಪನಯು ಭಾರತದ ಹಾಗೂ ಯುಎಇ, ಸೌದಿ ಅರೇಬಿಯಾ ಮತ್ತು ಈಜಿಪ್ಟ್‌ನಲ್ಲಿ ತನ್ನ ಕಾರ್ಯನಿರ್ವಹಿಸುತ್ತದೆ, ಸರಿ ಸುಮಾರು 70 ಮಿಲಿಯನ್ ಹೂಡಿಕೆದಾರರ ಬಂಡವಾಳವನ್ನು ಕ್ಲಿಯರ್ ಟ್ರಿಪ್ ಸಂಗ್ರಹಿಸಿದೆ.

## ಜೆಕ್ ರಾಷ್ಟ್ರದಿಂದ ರಷ್ಯಾದ ರಾಜತಾಂತ್ರಿಕ ಅಧಿಕಾರಿಗಳಿಗೆ ದೇಶ ತೊರೆಯಲು ಸೂಚನೆ



* ಜೆಕ್ ಸರ್ಕಾರವು ರಷ್ಯಾದ 18 ರಾಜತಾಂತ್ರಿಕ ಅಧಿಕಾರಿಗಳನ್ನು ಗೂಢಚರ್ಯ ಆರೋಪದ ಅಡಿಯಲ್ಲಿ ಉಚ್ಚಾಟನೆ ಮಾಡಿದೆ, ಇದಕ್ಕೆ ಪ್ರತ್ಯುತ್ತರವಾಗಿ ರಷ್ಯಾ ವಿದೇಶಾಂಗ ಸಚಿವಾಲಯವು ಜೆಕ್ ರಾಷ್ಟ್ರದ 20 ರಾಜತಾಂತ್ರಿಕ ಅಧಿಕಾರಿಗಳು ದೇಶ ಬಿಡಬೇಕು ಎಂದು ಜೆಕ್‌ನ ರಾಯಭಾರಿ ವಿಟೆಜ್ಸ್ಲಾವ್ ಪಿವೊಂಕಾ ಅವರಿಗೆ ಸಮನ್ಸ್ ನೀಡಿದೆ.

* ಪ್ರಸ್ತುತ ಅಮೆರಿಕ ರಾಷ್ಟ್ರವು ರಷ್ಯಾ ರಾಷ್ಟ್ರದ ಮೇಲೆ ನಿರ್ಬಂಧ ಹೇರಿದೆ ಇದಕ್ಕಾಗಿ ಜೆಕ್ ಸರ್ಕಾರವು ಅಮೇರಿಕದ ಮೆಚ್ಚುಗೆಗೆ ಪಾತ್ರವಾಗಲು ಈ ಕ್ರಮವನ್ನು ಜರುಗಿಸಿದೆ ಎಂದು ರಷ್ಯಾ ಸಚಿವಾಲಯ ವರದಿ ಮಾಡಿದೆ.

* ರಷ್ಯಾದ ಸೇನೆಯ 18 ರಾಜತಾಂತ್ರಿಕ ಅಧಿಕಾರಿಗಳು 2014ರ ಮದ್ದುಗುಂಡು ಡಿಪೋ ಸ್ಫೋಟದಲ್ಲಿ ಏಜೆಂಟ್ಸ್'ಗಳಾಗಿ ಸೇರಿಕೊಂಡಿದ್ದಾರೆ ಎಂದು ಜೆಕ್ ಸೇನೆಯು ಸಾಕ್ಷಿಗಳನ್ನೂ ನೀಡಿದೆ ಈ ಆಧಾರದ ಮೇಲೆ ಜೆಕ್ ಸರ್ಕಾರವು ಈ ಅಧಿಕಾರಿಗಳನ್ನು ಉಚ್ಚಾಟನೆ ಮಾಡಿದೆ ಎಂದು ಜೆಕ್ ಪ್ರಧಾನಿ ಆಂಡ್ರೆಜ್ ಬಾಬಿಸ್'ರವರು ಮಾಹಿತಿಯನ್ನು ನೀಡಿದ್ದಾರೆ.

## ಇಸ್ರೇಲ್ ಇಂಧನ ಸಚಿವಾಲಯದಿಂದ ರಾಷ್ಟ್ರೀಯ ಯೋಜನೆ ಪ್ರಕಟ



* ಇಸ್ರೇಲ್'ನ ಇಂಧನ ಸಚಿವಾಲಯವು 2015 ವರ್ಷಕ್ಕೆ ಹೋಲಿಸಿದಂತೆ 2050ರ ವೇಳೆಗೆ 80% ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ರಾಷ್ಟ್ರೀಯ ಯೋಜನೆಯನ್ನು ಪ್ರಕಟಿಸಿದೆ.

* ಇಸ್ರೇಲ್ ರಾಷ್ಟ್ರವು ಕಲ್ಲಿದ್ದಲಿನಿಂದ ಉತ್ಪಾದಣೆ ಮಾಡುವ ವಿದ್ಯುತ್ ಸ್ಥಾವರಗಳನ್ನು 2025ರ ವೇಳೆಗೆ ಮುಚ್ಚುವ ಯೋಜನೆ ಹೊಂದಿದೆ, ಹಾಗೂ 2050ರ ವೇಳೆಗೆ ವಿದ್ಯುತ್ ಕ್ಷೇತ್ರದಲ್ಲಿ ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು 75% ರಷ್ಟು 85% ಕ್ಕೆ ಇಳಿಸುವ ಗುರಿಯನ್ನು ಕೂಡ ಇಸ್ರೇಲ್ ಹೊಂದಿದೆ.

* ದೇಶದಲ್ಲಿ ನವೀಕರಿಸಬಹುದಾದ ಶಕ್ತಿಯ ಉತ್ಪಾದನೆಯನ್ನು ಹೆಚ್ಚಿಸುತ್ತದೆ ಮತ್ತು ಪವರ್ ಗ್ರಿಡ್ ಸುಧಾರಣೆಗಳ ಮೂಲಕ ಯೋಜನೆಯನ್ನು ಕಾರ್ಯ ರೂಪಕ್ಕೆತರಲಾಗುವದು ಎಂದು ತಿಳಿಸಿದೆ.

* ಇಸ್ರೇಲ್ ರಾಷ್ಟ್ರವು ತನ್ನ ಗುರಿಗಳನ್ನು ತಲುಪಲು ಸೌರ ಮತ್ತು ಹೈಡ್ರೋಜನ್ ಶಕ್ತಿಯ ಕಡೆಗೆ ಸಾಗುವುದು ಉತ್ತಮ ಎಂದು ತಿಳಿಸಿದೆ.

### ಆನ್‌ಲೈನ್ ರಾಮಾಯಣದ ಪ್ರದರ್ಶನವನ್ನು ಉದ್ಘಾಟಿಸಿದ ಪ್ರವಾಸೋದ್ಯಮ ಸಚಿವಾಲಯ




* ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಶ್ರೀ ಪ್ರಹ್ಲಾದ್ ಸಿಂಗ್ ಪಟೇಲ್ ಅವರು ಆನ್‌ಲೈನ್ ರಾಮಾಯಣದ ಪ್ರದರ್ಶನವನ್ನು ಉದ್ಘಾಟಣೆ ಮಾಡಿದರು.

* ಈ ಆನ್ಲೈನ್ ರಾಮಾಯಣದ ಪ್ರದರ್ಶನವು 17ನೇ ಶತಮಾನ ಮತ್ತು 19ನೇ ಶತಮಾನದ ನಡುವೆ ನಡೆದಿರುವ 49 ವರ್ಣಚಿತ್ರಗಳನ್ನು ತೋರಿಸಲಿದೆ ಈ ವರ್ಣಚಿತ್ರಗಳನ್ನು ನವದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದಿಂದ ಸಂಗ್ರಹಿಸಲಾಗಿದೆ ಎಂದು ತಿಳಿಸಿದೆ.

* ಮಹರ್ಷಿ ವಾಲ್ಮೀಕಿಯವರು ಈ ರಾಮಾಯಣವನ್ನು ಸಂಸ್ಕೃತದಲ್ಲಿ ಬರೆದಿದ್ದಾರೆ ಹಾಗೂ ಇದು ಭಾರತೀಯ ಇತಿಹಾಸದ ಪ್ರಮುಖ ಮಹಾಕಾವ್ಯವಾಗಿದೆ.

* ರಾಮಲೀಲಾ ಉತ್ಸವಗಳು ವಿಶೇಷವಾಗಿ ವಾರಣಾಸಿ, ಅಯೋಧ್ಯೆ, ಉತ್ತರಾಖಂಡ, ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಬಿಹಾರದ ಪ್ರಮುಖ ನಗರಗಳಲ್ಲಿ ಜನಪ್ರಿಯವಾಗಿವೆ

* ಯುನೆಸ್ಕೋ ರಾಮ್ಲೀಲಾ ಅವರನ್ನು ಮಾನವೀಯತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆ ಎಂದು 2008ರಲ್ಲಿ ಘೋಷಣೆ ಮಾಡಿತು ಹಾಗೂ 13 ಭಾರತೀಯ ಸಾಂಸ್ಕೃತಿಕ ಪರಂಪರೆಗಳನ್ನು ಅಮೂರ್ತ ಸಾಂಸ್ಕೃತಿಕ ಪಟ್ಟಿಯಲ್ಲಿ ಯುನೆಸ್ಕೋ ಸೇರಿಸಿದೆ ಎಂದು ತಿಳಿಸಲಾಗಿದೆ.

## 21-04-2021

### ಪ್ರಿಯಾಂಕ ಮೊಹಿತೆ ಮೌಂಟ್ ಅನ್ನಪೂರ್ಣ ಪರ್ವತ ಏರಿ ದಾಖಲೆ



* ಭಾರತದ ಮೊದಲ ಮಹಿಳೆಯಾಗಿರುವ ಪಶ್ಚಿಮ ಮಹಾರಾಷ್ಟ್ರದ ಪ್ರಿಯಾಂಕ ಮೊಹಿತೆ ಅವರು ವಿಶ್ವದ 10ನೇ ಅತಿ ಎತ್ತರದ ಪರ್ವತ ಶಿಖರವಾದ ಮೌಂಟ್ ಅನ್ನಪೂರ್ಣವನ್ನು ಏರಿ ದಾಖಲೆ ನಿರ್ಮಿಸಿದ್ದಾರೆ.

*2021 ಏಪ್ರಿಲ್ 16ರಂದು ಪ್ರಿಯಾಂಕ ಮೊಹಿತೆ ಅವರು ವಿಶ್ವದ 10ನೇ ಎತ್ತರದ ಶಿಖರ ಮೌಂಟ್ ಅನ್ನಪೂರ್ಣ ಪರ್ವತವನ್ನು ಏರಿದ್ದಾರೆ ಈ ಪರ್ವತವು 8091ಮೀ ಎತ್ತರದ ಮಧ್ಯಾಹ್ನ1.30ರ ವೇಳೆಗೆ ಶಿಖರದ ತುದಿ ತಲುಪಿದ್ದಾರೆ, ಎಂದು ಕಿರಣ್ ಮಜುಮ್‌ದಾರ್ ಶಾ ರವರು ಟ್ವೀಟ್ ಮಾಡುವ ಮೂಲಕ ಮಾಹಿತಿಯನ್ನು ನೀಡಿದ್ದಾರೆ.

* ಮೌಂಟ್ ಅನ್ನಪೂರ್ಣ ಶಿಖರವು ನೇಪಾಳದಲ್ಲಿ ಇರುವ ಹಿಮಾಲಯಾ ಶ್ರೇಣಿಯ ಶಿಖರವಾಗಿದೆ.

* ಈ ಹಿಂದೆ 2013ರಲ್ಲಿ ಪ್ರಿಯಾಂಕ ಮೊಹಿತೆ ಅವರು 8,849 ಮೀಟರ್ ಎತ್ತರದ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ್ದರು ಮತ್ತೇ 2016ರಲ್ಲಿ 5,895 ಮೀಟರ್ ಎತ್ತರದ ಮೌಂಟ್ ಕಿಲಿಮಂಜಾರೋ ಪರ್ವತವನ್ನು ಏರಿದ್ದರು, 2018ರಲ್ಲಿ 8,516 ಮೀಟರ್ ಎತ್ತರದ ಮೌಂಟ್ ಲೋಟ್ಸೆ ಶಿಖರ ಹಾಗೂ 8,485 ಮೀಟರ್ ಎತ್ತರದ ಮೌಂಟ್

ಮಕಲು ಶಿಖರವನ್ನು ಏರಿ ಸಾಧನೆ ಮಾಡಿದ್ದರು.

* ಪ್ರಿಯಾಂಕ ಮೊಹಿತೆ ಅವರು 2012ರಲ್ಲಿ ಅಧಿಕೃತವಾಗಿ ಪರ್ವತ ಶ್ರೇಣಿ ಏರಲು ಪ್ರಾರಂಭಿಸಿದ್ದರು ಇವರಿಗೆ 2017 18 ಸಾಲಿನ ಶಿವ ಛತ್ರಪತಿ ಪ್ರಶಸ್ತಿಯನ್ನು ಮಹಾರಾಷ್ಟ್ರ ಸರ್ಕಾರವು ನೀಡಿದೆ.

## 10ಕೋಟಿ ಲಸಿಕೆಗಳಲ್ಲಿ 44 ಲಕ್ಷ ಕೋವಿಡ್ 19 ಲಸಿಕೆ ಡೋಸ್ ವ್ಯರ್ಥ




* ದೆಹಲಿ ಹೈಕೋರ್ಟ್ ಕೋವಿಡ್ 19 ಲಸಿಕೆಗಳ ವ್ಯರ್ಥ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ ಮತ್ತು ವ್ಯರ್ಥವಾಗದಂತೆ ನೋಡಿಕೊಳ್ಳಲು ಸೂಚನೆಯನ್ನು ನೀಡಿದೆ.

* ಹೈಕೋರ್ಟ್ ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ರೇಖಾ ಅವರು ನೀಡಿರುವ ಮಾಹಿತಿ ಪ್ರಕಾರ ಪ್ರತಿ ದಿನಕ್ಕೆ 6 ಶೇಕಡಾ ಲಸಿಕೆಗಳನ್ನು ವ್ಯರ್ಥ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

* ಒಟ್ಟಾರೆ ಇಲ್ಲಿಯತನಕ ಸರಿ ಸುಮಾರು 10ಕೋಟಿ ಲಸಿಕೆಗಳಲ್ಲಿ 44 ಲಕ್ಷ ಲಸಿಕೆಗಳನ್ನು ವ್ಯರ್ಥ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

* ಅತಿಹೆಚ್ಚು ಲಸಿಕೆ ವ್ಯರ್ಥ ಮಾಡುವದರಲ್ಲಿ ತಮಿಳುನಾಡು ರಾಜ್ಯ ಮುಂದಿದೆ ಎನ್ನಲಾಗಿದೆ.

## ಮೇ.1 ರಿಂದ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಕೋವಿಡ್ ಲಸಿಕೆ ಉಚಿತ



* ಪ್ರಸ್ತುತ ಮೇ.1 ರಿಂದ ಮೂರನೇ ಹಂತದ ಲಸಿಕಾ ಅಭಿಯಾನದಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲ ಜನರಿಗೆ ಕೋವಿಡ್ 19 ಲಸಿಕೆ ಉಚಿತವಾಗಿ ನೀಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

* ಈ ಹಿಂದೆ ಕೋವಿಡ್ 19 ಲಸಿಕೆಯನ್ನು ಮೊದಲು ವೈದ್ಯರಿಗೆ, ಪೊಲೀಸ್, ಸೈನಿಕರಿಗೆ, ಹಾಗೂ ಎಲ್ಲ ಸರ್ಕಾರಿ ಸ್ವಾಮ್ಯದ ಅಧಿಕಾರಿಗಳಿಗೆ ನೀಡಲಾಗಿತ್ತು.

* ಈ ಕೋವಿಡ್ 19 ಲಸಿಕೆ ವಿತರಣಾ ಕಾರ್ಯಕ್ರಮವನ್ನು 60 ವರ್ಷ ಮೇಲ್ಪಟ್ಟ ಎಲ್ಲ ಜನರಿಗೆ ವಿಸ್ತರಿಸಲಾಯಿತು ಮತ್ತೇ 45 ವರ್ಷ ಮೇಲ್ಪಟ್ಟ ಎಲ್ಲ ಜನರಿಗೆ ನೀಡಲಾಯಿತು, ಇದೀಗ 18 ವರ್ಷ ಮೇಲ್ಪಟ್ಟ ಎಲ್ಲ ಜನರಿಗೆ ಈ ಕೋವಿಡ್ ವ್ಯಾಕ್ಸೀನ್ ನೀಡಲಾಗುತ್ತದೆ ಎಂದು ಕೇಂದ್ರ ಸರ್ಕಾರವು ಮಾಹಿತಿಯನ್ನು ನೀಡಿದೆ.

## ಪ್ರಧಾನಿ ನರೇದ್ರ ಮೋದಿ ಪೋರ್ಚುಗಲ್ ಪ್ರವಾಸ ರದ್ದು




* ಕೋರೋಣ ವೈರಸ್ಸ ಹೆಚ್ಚುತ್ತಿರುವ ಕಾರಣದಿಂದಾಗಿ ಪ್ರಧಾನಿ ನರೇಂದ್ರ ಮೋದಿ ಪೋರ್ಚುಗಲ್ ಪ್ರವಾಸ ರದ್ದು ಮಾಡಿದ್ದಾರೆ, ವಿಡಿಯೋ ಕಾನ್ಫರೆನ್ಸ್ ಮೂಲಕ ಭಾರತ ಮತ್ತು ಐರೋಪ್ಯ ಒಕ್ಕೂಟಗಳ ಶೃಂಗಸಭೆಯಲ್ಲಿ ಪ್ರಧಾನಿ ನರೇದ್ರ ಮೋದಿ ಭಾಗಿಯಾಗಲಿದ್ದಾರೆ.

* 16ನೇ ಭಾರತ ಐರೋಪ್ಯ ಶೃಂಗಸಭೆಗಾಗಿ ಇದೇ ಮೇ 8ರಂದು ಪ್ರಧಾನಿ ಮೋದಿ ಪೋರ್ಚುಗಲ್ ಹಾಗೂ ರಷ್ಯಾಕ್ಕೆ ಪ್ರಯಾಣ ಬೆಳಸಲಿದ್ದಾರೆ ಎಂದು ತಿಳಿಸಲಾಗಿತ್ತು ಆದರೆ ಈ ಪ್ರವಾಸವು ರದ್ದಾಗಿದೆ.

* ಈ ಹಿಂದೆ ಕೊರೋನಾ ಲಾಕ್ ಡೌನ್ ತೆರುವುಗೊಳಿಸಿದ ನಂತರ ಮಾರ್ಚ್ ತಿಂಗಳನಲ್ಲಿ ಪ್ರಧಾನಿ ಮೋದಿ ಮೊದಲ ವಿದೇಶ ಪ್ರವಾಸವಾಗಿ ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದರು.

## ಪ್ರಮುಖ ತೈಲ ಕಂಪನಿಗಳಿಂದ ಮತ್ತು JSWನಿಂದ ಆಸ್ಪತ್ರೆಗಳಿಗೆ ಆಕ್ಸಿಜನ್ ಪೂರೈಕೆ ಪ್ರಾರಂಭ



* ಪ್ರಮುಖ ತೈಲ ಕಂಪನಿಯಾಗಿರುವ BPCL ನಿಂದ ಆಸ್ಪತ್ರೆಗೆ ಮೆಡಿಕಲ್ ಆಕ್ಸಿಜನ್ ಪೂರೈಕೆ ಪ್ರಾರಂಭವಾಗಿದೆ, ಈ ಆಮ್ಲಜನಕ ಸಿಲಿಂಡರ್ ಪೂರೈಕೆಯನ್ನು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್(BPCL) ಉಚಿತವಾಗಿ ನೀಡುತ್ತಿದೆ.

* ಆಸ್ಪತ್ರೆಗಳಿಗೆ ಮೆಡಿಕಲ್ ಆಕ್ಸಿಜನ್'ನ್ನು ಪ್ರತಿ ತಿಂಗಳಿಗೆ ಅಂದಾಜು 100 ಮೆಟ್ರಿಕ್ ಟನ್ ಆಕ್ಸಿಜನ್'ನ್ನು ನೀಡಲು BPCL ಸಹಾಯಸ್ತವನ್ನು ತೋರಿದೆ ಹಾಗೂ ಇದು ಸಂಪೂರ್ಣವಾಗಿ ಉಚಿತ ಸೇವೆಯಾಗಿದೆ ಎಂದು ತಿಳಿಸಿದೆ.

* ಪ್ರಸ್ತುತ ದೆಹಲಿಯ ಆಸ್ಪತ್ರೆಗಳಿಗೆ 150 ಮೆಟ್ರಿಕ್ ಟನ್ ಮೆಡಿಕಲ್ ಆಕ್ಸಿಜನ್'ನ್ನು ಇಂಡಿಯನ್ ಆಯಿಲ್ ಕಾರ್ಪೊರೇಷನ್(IOCL) ತೈಲ ಘಟಕವು ನೀಡಲು ಮುಂದಾಗಿದೆ.

* ಕರ್ನಾಟಕ ರಾಜ್ಯದ JSW ಸ್ಟೀಲ್ ಕಂಪನಿ ರಾಜ್ಯದಲ್ಲಿನ ಆಸ್ಪತ್ರೆಗಳಿಗೆ ದಿನಕ್ಕೆ 400 ಟನ್ ಆಮ್ಲಜನಕ ಪೂರೈಕೆ ಮಾಡಲು ಒಪ್ಪಕೊಂಡಿದೆ ಎಂದು JSW ಸ್ಟೀಲ್ ಉಪ ವ್ಯವಸ್ಥಾಪಕ ನಿರ್ದೇಶಕ ಡಾ.ವಿನೋದ್ ನೋವಲ್ ತಿಳಿಸಿದ್ದಾರೆ.

* ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಸಲು ಉಕ್ಕಿನ ಕಂಪನಿಗಳು ಮುಂದಾಗಿವೆ ಎಂದು ಗಣಿ ಮತ್ತು ಭೂ ವಿಜ್ಞಾನಿ ಸಚಿವ ನಿರಾಣಿ ತಿಳಿಸಿದ್ದಾರೆ.

## ಇಸ್ಲಾಮಿಕ್ TLP ಪಕ್ಷದ ಬೇಡಿಕೆಗೆ ಒಪ್ಪಿಗೆ ಸೂಚಿಸಿದ ಪಾಕಿಸ್ತಾನ ಸರ್ಕಾರ



* ತೀವ್ರಗಾಮಿ ಇಸ್ಲಾಮಿಕ್ TLP ಪಕ್ಷದ ಬೇಡಿಕೆಗೆ ಪಾಕಿಸ್ತಾನದ ಸರ್ಕಾರವು ಒಪ್ಪಿಗೆಯನ್ನು ಸೂಚಿಸಿದೆ ಎಂದು ತಿಳಿದು ಬಂದಿದೆ.

* ಈ ಹಿಂದೆ ಫ್ರಾನ್ಸ್'ನಲ್ಲಿ ಪ್ರವಾದಿ ಮೊಹಮ್ಮದ್ ಅವರ ವ್ಯಂಗ್ಯ ಚಿತ್ರ ರಚಿಸಿದ್ದನು ವಿರೋಧಿಸಿ ತೆಹ್ರೀಕ್ ಎ ಲಬ್ಬೈಕ್ (TLP) ಎಂಬ ಪಕ್ಷವು ಪ್ರಸ್ತುತ ಪಾಕಿಸ್ತಾನದಲ್ಲಿರುವ ಫ್ರಾನ್ಸ್'ನ ರಾಯಭಾರಿಯನ್ನು ಉಚ್ಚಾಟಿಸಬೇಕು ಮತ್ತು ನಮ್ಮ TLP ಪಕ್ಷದ ವಿರುದ್ಧ ದಾಖಲಾಗಿರುವ ಎಲ್ಲಾ ಪ್ರಕರಣಗಳನ್ನೂ ರದ್ದುಗೊಳಿಸಬೇಕೆಂದು ಆಗ್ರಹಿಸಿ ಪ್ರತಿಭಟನೆಯನ್ನು ನಡೆಸುತಿತ್ತು.

* ಇದೀಗ ಪಾಕಿಸ್ತಾನ ಸರ್ಕಾರವು ತೀವ್ರಗಾಮಿ ಪಕ್ಷದೊಂದಿಗೆ ಸರಣಿ ಮಾತುಕತೆ ನಡೆಸಿ ಇವರ ಬೇಡಿಕೆಗಳಿಗೆ ಒಪ್ಪಿಗೆಯನ್ನು ನೀಡಿ ಫ್ರಾನ್ಸ್ ರಾಯಭಾರಿಯನ್ನು ವಾಪಸ್ ಕಳಿಸುವ ನಿರ್ಣಯವನ್ನು ಸಂಸತ್'ನಲ್ಲಿ ಪಾಕಿಸ್ತಾನ ಸರ್ಕಾರ ಘೋಷಣೆ ಮಾಡಿದೆ.

## ವಿಶ್ವ ಹವಾಮಾನ ಸಂಸ್ಥೆ "ಸ್ಟೇಟ್ ಆಫ್ ದಿ ಗ್ಲೋಬಲ್ ಕ್ಲೈಮೇಟ್ 2020" ವರದಿ ಬಿಡುಗಡೆ




* 1993 ರಿಂದ ವಿಶ್ವ ಹವಾಮಾನ ಸಂಸ್ಥೆಯು "ಸ್ಟೇಟ್ ಆಫ್ ದಿ ಗ್ಲೋಬಲ್ ಕ್ಲೈಮೇಟ್ 2020" ವರದಿಯನ್ನು ಪ್ರಕಟಿಸುತ್ತ ಬಂದಿದ್ದು, 2011 2020 ದಾಖಲೆಯ ಅತ್ಯಂತ ಬೆಚ್ಚಗಿನ ದಶಕಗಳಾಗಿವೆ, ಉತ್ತರ ಹಿಂದೂ ಮಹಾಸಾಗರದಲ್ಲಿ ಅತ್ಯಂತ ದುಬಾರಿ ಉಷ್ಣವಲಯ ದಾಖಲಾಗಿದೆ. ಇದಕ್ಕೆ ಮುಖ್ಯ ಕಾರಣ ಇಂಫಾನ್ ಚಂಡಮಾರುತ ಎನ್ನಲಾಗಿದೆ. ಈ ಚಂಡಮಾರುತವು ಮೇ. 2020ರಲ್ಲಿ ಭಾರತ ಬಾಂಗ್ಲಾದೇಶದ ಗಡಿಯ ಸಮೀಪ ಭೂಕುಸಿತವನ್ನು ಉಂಟುಮಾಡಿದಲ್ಲದೆ, ಇದರಿಂದ ಭಾರತದಲ್ಲಿನ ಸುಮಾರು 14 ಬಿಲಿಯನ್ USD ನಷ್ಟ ಆರ್ಥಿಕ ನಷ್ಟ ಆಗಿದೆ ಎಂದು ವಿಶ್ವ ಹವಾಮಾನ ಸಂಸ್ಥೆ ವರದಿಯನ್ನು ನೀಡಿದೆ.

* 2020ರ ಕೈಗಾರಿಕಾ ಮಟ್ಟಕ್ಕೆ ಹೋಲಿಸಿದರೆ ಜಾಗತಿಕ ಸರಾಸರಿ ತಾಪಮಾನವು 1.2 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ.

* ಭಾರತವು 1994 ರಿಂದ 2 ತೇವವಾದ ಮಾನ್ಸೂನ್ ಋತುಗಳಲ್ಲಿ ಒಂದಾಗಿದೆ, ಜೂನ್ ಮತ್ತು ಸೆಪ್ಟೆಂಬರ್'ನ ಮಳೆ ಸರಾಸರಿಗಿಂತ 9% ಹೆಚ್ಚಾಗಿದೆ ಇದರಿಂದ ಪ್ರವಾಹ, ಭೂಕುಸಿತ ಮತ್ತು ಮಳೆಯಿಂದಾಗಿ ಸರಿ ಸುಮಾರು 2,000 ಸಾವುಗಳು ನೋವುಗಳು ಸಂಭವಿಸಿವೆ.

* ಇಂಗಾಲದ ಡೈಆಕ್ಸೈಡ್ ಸಾಂದ್ರತೆಯು ಪ್ರತಿ ಮಿಲಿಯನ್'ಗೆ 410 ಭಾಗಗಳನ್ನು ಮೀರಿದೆ ಮತ್ತು ಕೈಗಾರಿಕಾ ಪೂರ್ವ ಮಟ್ಟಕ್ಕಿಂತ 148% ಹೆಚ್ಚಾಗಿದೆ ಎಂದು ತಿಳಿಸಿದೆ.

* ಹವಾಮಾನ ಆಕ್ಷನ್ ಟ್ರ್ಯಾಕರ್ ಪ್ರಕಾರ ಪ್ಯಾರಿಸ್ ಒಪ್ಪಂದಕ್ಕೆ ಭಾರತ, ಭೂತಾನ್, ಕೋಸ್ಟರಿಕಾ ಮತ್ತು ಫಿಲಿಪೈನ್ಸ್ ದೇಶಗಳು ಬದ್ಧವಾಗಿವೆ.

* ವಿಶ್ವಸಂಸ್ಥೆಯ 2050ರ ವೇಳೆಗೆ ದೇಶಗಳು ನಿವ್ವಳ ಶೂನ್ಯ ಹೊರಸೂಸುವಿಕೆಗೆ ಬದ್ಧರಾಗಿರಬೇಕು ಎಂದು ಎಚ್ಚರಿಕೆಯನ್ನು ನೀಡಿದೆ.

### ಸ್ಟಾರ್ಟ್‌ಅಪ್ ಇಂಡಿಯಾ 'ಬೀಜ ನಿಧಿ ಯೋಜನೆ' ಪ್ರಾರಂಭಿಸಿದೆ




* ಸ್ಟಾರ್ಟ್ ಅಪ್ ಇಂಡಿಯಾ ಬೀಜ ನಿಧಿ ಯೋಜನೆಯನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಇತ್ತೀಚಿಗೆ ಚಾಲನೆ ನೀಡಿದರು. ಈ ಯೋಜನೆಯು ಉತ್ಪನ್ನ ಪ್ರಯೋಗಗಳು, ಮಾರುಕಟ್ಟೆ ಪ್ರವೇಶಕ್ಕಾಗಿ ಹಣಕಾಸಿನ ನೆರವು ನೀಡಲು ಸಹಕಾರಿಯಾಗಲಿದೆ ಎಂದು ತಿಳಿಸಲಾಗಿದೆ.

* ಈ ಯೋಜನೆಯು ಒಟ್ಟು 945 ಕೋಟಿ ರೂ.ಗಳ ಯೋಜನೆಯಾಗಿದ್ದು, ಇದರಲ್ಲಿ ಶ್ರೇಣಿ 2 ಮತ್ತು ಶ್ರೇಣಿ 3 ನಗರಗಳಲ್ಲಿ ಆರಂಭಿಕ ಪರಿಸರ ವ್ಯವಸ್ಥೆಯನ್ನು ರೂಪಿಸಲಿದೆ.

## 22-04-2021

### 5ನೇ ಬ್ಯಾಚ್‌ನ ರಫೇಲ್ ಯುದ್ಧ ವಿಮಾನಗಳು ಭಾರತಕ್ಕೆ



* ಫ್ರಾನ್ಸ್ ಭಾರತ ಯುದ್ಧ ವಿಮಾನಗಳ ಖರೀದಿ ಒಪ್ಪಂದವನ್ನು ಮಾಡಿಕೊಂಡಿತ್ತು ಈ ಒಪ್ಪಂದದ ಪ್ರಕಾರ 5ನೇ ಬ್ಯಾಚ್‌ನ ರಫೇಲ್ ಯುದ್ಧ ವಿಮಾನಗಳು 8,000 ಕಿ.ಮೀ ದೂರದ ಪ್ರಯಾಣವನ್ನು ಕ್ರಮಿಸಿ ಫ್ರಾನ್ಸ್‌ನಿಂದ ಭಾರತಕ್ಕೆ ಬಂದಿವೆ ಎಂದು ಭಾರತೀಯ ವಾಯುಪಡೆ ಮಾಹಿತಿಯನ್ನು ನೀಡಿದೆ.

* ಭಾರತೀಯ ವಾಯುಪಡೆಯು ಇಲ್ಲಿಯವರೆಗೆ ಭಾರತಕ್ಕೆ ಬಂದಿರುವ ರಫೇಲ್ ಯುದ್ಧ ವಿಮಾನಗಳ ಸಂಖ್ಯೆಯನ್ನು ತಿಳಿಸಿಲ್ಲ.

* ಫ್ರಾನ್ಸ್‌ನಿಂದ ಭಾರತಕ್ಕೆ ಹೊರಟಿರುವ ರಫೆಲ್ ಯುದ್ಧ ವಿಮಾನಗಳಿಗೆ ವಾಯು ಮಾರ್ಗದಲ್ಲಿ ಇಂಧನ ತುಂಬುವಿಕೆ ನೆರವನ್ನು ಫ್ರಾನ್ಸ್‌ನ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ವಾಯುಪಡೆಗಳು ನೀಡಿವೆ ಎಂದು ಭಾರತೀಯ ವಾಯುಪಡೆ ತಿಳಿಸಿದೆ.

* ಈ ಹಿಂದೆ 4ನೇ ಬ್ಯಾಚ್'ನ 3 ರಫೇಲ್ ಯುದ್ಧ ವಿಮಾನಗಳು ಏಪ್ರಿಲ್ 1ರಂದು ಭಾರತಕ್ಕೆ ಬಂದಿದ್ದವು ಎಂದು IAF ತಿಳಿಸಿದೆ.

### ಅಮೆರಿಕ ವಿರುದ್ಧ ಅಣಕು ಯುದ್ಧ ಪ್ರಯೋಗಿಸಿದ ಚೀನಾ



* ಚೀನಾ ದೇಶವು ಅಮೇರಿಕ ವಿರುದ್ಧ ಅಣಕು ಯುದ್ಧ ನಡೆಸಿದೆ ಹಾಗೂ ಹಲವು ರೀತಿಯ ಬಾಂಬ್‌ಗಳ ಪ್ರಯೋಗವನ್ನು ನಡೆಸಿದೆ.

* ಪೂರ್ವ ಚೀನಾದಲ್ಲಿರುವ ಕ್ವಿನ್‌ಫಾಯ್ ಪ್ರಾಂತ್ಯದ ವಾಯುನೆಲೆಯಿಂದ ಯುದ್ಧ ವಿಮಾನಗಳು ಪ್ರಯೋಗ ನಡೆಸಿವೆ ಎಂದು ತಿಳಿದು ಬಂದಿದೆ, ಈ ಯುದ್ಧ ವಿಮಾನಗಳ ಪ್ರಯೋಗದಲ್ಲಿ ಎಚ್ 6ಕೆ ಯುದ್ಧ ವಿಮಾನಗಳು ಭಾಗಿಯಾಗಿದ್ದವು ಎಂದು ಡ್ರ್ಯಾಗನ್‌ನ ಸರಕಾರಿ ನ್ಯೂಸ್ ಚಾನೆಲ್'ನ CCTV ಮೂಲಕ ತಿಳಿದು ಬಂದಿದೆ.

* ಅಮೆರಿಕ ಮತ್ತು ಜಪಾನ್ ದೇಶಗಳು ಜಂಟಿಯಾಗಿ ತೈವಾನ್ ದ್ವೀಪ ಸಮೂಹದ ವ್ಯಾಪ್ತಿಯಲ್ಲಿ ಶಾಂತಿಯುತ ಮತ್ತು ದ್ವೇಷಮಯ ವಾತಾವರಣಕ್ಕೆ ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಹೇಳಿಕೆಯನ್ನು ನೀಡಿದೆ ಇದರ ಬೆನ್ನಲ್ಲೇ ಯುದ್ಧ ಪ್ರಯೋಗ ನಡೆದಿದೆ ಎನ್ನಲಾಗಿದೆ.

* ಇದೇ ಮೊದಲ ಬಾರಿಗೆ ಅಂದರೆ 1969ರ ನಂತರ ತೈವಾನ್ ದ್ವೀಪದ ಬಗ್ಗೆ ಎರಡೂ ದೇಶಗಳ ಜಂಟಿಯಾಗಿ ಹೇಳಿಕೆಯನ್ನು ನೀಡಿವೆ ಎಂದು ತಿಳಿಸಲಾಗಿದೆ.

### BSF ಪಡೆಯು ಪಾಕ್ ಪಾರಿವಾಳದ ವಿರುದ್ಧ FIR ದಾಖಲಿಸಲು ಕೋರಿಕೆ ನೀಡಿದೆ



* ಭಾರತೀಯ ಗಡಿ ಭದ್ರತಾ (BSF) ಪಡೆಯು ಪಾಕಿಸ್ತಾನದಿಂದ ಅಕ್ರಮವಾಗಿ ಭಾರತದ ಗಡಿಯೊಳಗೆ ಬಂದಿರುವ ಪಾರಿವಾಳದ ವಿರುದ್ಧ FIR ದಾಖಲಿಸಲು ಅನುಮತಿ ಕೇಳಿದೆ, ಪಂಜಾಬ್ ಪೊಲೀಸರು ಕಾನೂನು ಅಭಿಪ್ರಾಯ ಕೋರಿದ್ದಾರೆ ಎಂದು ತಿಳಿದು ಬಂದಿದೆ.

* ಈ ಪಾಕ್ ಪರಿವಾಳವು ರೊರಾವಾಲಾ ಪೋಸ್ಟನಲ್ಲಿರುವ ಗಡಿಭದ್ರತಾ ಪಡೆಯ ಸೈನಿಕನ ಭುಜದ ಮೇಲೆ ಕುಳಿತುಕೊಂಡಿತು ಹಾಗೂ ಗಡಿಯುದ್ದಕ್ಕೂ ಹಾರಾಟದ ನಡೆಸಿದ್ದ ಈ ಪಾರಿವಾಳದ ಕಾಲಿಗೆ ಸಂಪರ್ಕ ಸಂಖ್ಯೆ ಹೊಂದಿದೆ ಮತ್ತು ಕಾಗದದ ತುಣಕನ್ನು ಸುತ್ತಲಾಗಿತ್ತು ಎಂದು BSF ಅಧಿಕಾರಿ ಮಾಹಿತಿಯನ್ನು ನೀಡಿದ್ದಾರೆ.

* ಈ ಪಾಕ್ ಪಾರಿವಾಳವನ್ನು ಪಂಜಾಬ್ ಪೊಲೀಸರಿಗೆ BSF ಅಧಿಕಾರಿ ಒಪ್ಪಿಸಿದ್ದಾರೆ ಇದರ ವಿರುದ್ಧ ಸೂಕ್ತ ಕಾನೂನು ಕ್ರಮ ತಗೆದುಕೊಳ್ಳಬೇಕು ಎಂದು ಲಿಖಿತ ರೊಪದಲ್ಲಿ ಕೇಳಿಕೊಂಡಿದ್ದಾರೆ.

* ಗಡಿಪ್ರದೇಶಗಳಲ್ಲಿ ಗೂಢಚರ್ಯೆ ಕಾರ್ಯಗಳಿಗಾಗಿ ಪಾರಿವಾಳವನ್ನು ಬಳಸಲಾಗುತ್ತದೆ ಮತ್ತು ಇವುಗಳನ್ನು ಬಳಸಿಕೊಂಡು ಗುಪ್ತಸಂದೇಶಗಳನ್ನೂ ರವಾನಿಸಲಾಗುತ್ತದೆ ಎಂದು ತಿಳಿಸಲಾಗಿದೆ.

* ಪ್ರಸ್ತುತ ಈ ಪರಿವಾಳವು ಖಾಂಗಾರದ ಪೊಲೀಸ್ ಠಾಣೆಯ ವಶದಲ್ಲಿದೆ ಎಂದು ತಿಳಿದು ಬಂದಿದೆ.

## ಕೇಂದ್ರ ಸರ್ಕಾರದಿಂದ ರೆಮ್‌ಡೆಸಿವಿರ್ ಔಷಧಿ ಹಂಚಿಕೆ




* ಪ್ರಸ್ತುತ ಕೇಂದ್ರ ಸರ್ಕಾರವು ರೆಮ್‌ಡೆಸಿವಿರ್ ಔಷಧವನ್ನು 19 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಹಂಚಿಕೆ ಮಾಡಿದೆ ಅದರಲ್ಲಿ ಕರ್ನಾಟಕ ರಾಜ್ಯಕ್ಕೆ 25,400 ಡೋಸ್‌ಗಳಷ್ಟು ನೀಡಿದೆ.

* ಕೇಂದ್ರ ಸರ್ಕಾರವು ರೆಮ್‌ಡೆಸಿವಿರ್ ಔಷಧಿಯನ್ನು ಮ್ಯಾಲ್ಯನ್ ಕಂಪನಿಯಿಂದ 17,400 ಡೋಸ್ ಮತ್ತು ಸಿಪ್ಲಾದಿಂದ 1000 ಡೋಸ್ ಹಾಗೂ ಸನ್ ಕಂಪನಿಯಿಂದ 6000 ಡೋಸ್ ಮತ್ತು ಜ್ಯುಬಿಲಂಟ್ ಕಂಪನಿಯಿಂದ 1000 ಡೋಸ್‌ಗಳಷ್ಟು ರೆಮ್‌ಡೆಸಿವಿರ್ ದೊರೆಯಲಿದೆ ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದರು.

* ಮಹಾರಾಷ್ಟ್ರ ರಾಜ್ಯದಲ್ಲಿ ಅತೀ ಹೆಚ್ಚು ಕೋವಿಡ್ 19 ಪ್ರಕರಣಗಳು ದಾಖಲಾಗಿರುವದರಿಂದ ಈ ರಾಜ್ಯಕ್ಕೆ 2.69 ಲಕ್ಷ ಡೋಸ್, ಗುಜರಾತ್‌ಗೆ1.63 ಲಕ್ಷ ಡೋಸ್ ಮತ್ತು ಉತ್ತರ ಪ್ರದೇಶಕ್ಕೆ 1.22 ಲಕ್ಷ, ಮಧ್ಯಪ್ರದೇಶಕ್ಕೆ 92,400ರಷ್ಟು ಡೋಸ್‌ಗಳನ್ನು ಕೇಂದ್ರ ಸರ್ಕಾರ ಹಂಚಿಕೆ ಮಾಡಿದೆ ಎಂದು ತಿಳಿಸಿದೆ.

## ಬೆಂಗಳೂರಿನ ವಿಭಾ ಹರೀಶ್'ಗೆ ಫೋರ್ಬ್ಸ್'ನ ಯುವ ಪ್ರತಿಭೆ ಪಟ್ಟಿಯಲ್ಲಿ ಸ್ಥಾನ



* ಏಷಿಯಾ ಫೋರ್ಬ್ಸ್ ಅಂಡರ್ 30 ಉದ್ಯಮಿ ಪಟ್ಟಿಯನ್ನು ಬಿಡುಗಡೆ ಮಾಡಿದೆ, ಈ ಏಷಿಯಾ ಫೋರ್ಬ್ಸ್ ಉದ್ಯಮವಲಯದಲ್ಲಿ ಸಾಧನೆ ಮಾಡಿರುವ 30ವರ್ಷ ಒಳಗಿನ ಯುವ ಪ್ರತಿಭೆಗಳನ್ನು ಗುರುತಿಸಿ ಈ ಪಟ್ಟಿಯನ್ನು ಬಿಡುಗಡೆ ಮಾಡಿದೆ, ಈ ಪಟ್ಟಿಯಲ್ಲಿ ಬೆಂಗಳೂರಿನ ಯುವ ಉದ್ಯಮಿ ವಿಭಾ ಹರೀಶ್ ಅವರು ಆಯ್ಕೆಯಾಗಿದ್ದಾರೆ ಇದು ದೇಶ ಹೆಮ್ಮೆ ಪಡುವ ವಿಷಯವಾಗಿದೆ.

* ಪ್ರಸ್ತುತ ವಿಶ್ವಾದ್ಯಂತ ಸಾವಿರಾರು ಅರ್ಜಿಗಳು ಸಲ್ಲಿಕೆಯಾಗಿದ್ದವು ಅದರಲ್ಲಿ ಈ ಏಷಿಯಾ ಫೋರ್ಬ್ಸ್ ವಿಭಾ ಹರೀಶ್ ಮಾಡಿರುವ ಸಾಧನೆಯನ್ನು ಪರಿಗಣಿಸಿ ಇವರನ್ನು ಆಯ್ಕೆ ಮಾಡಿದೆ ಎಂದು ತಿಳಿಸಲಾಗಿದೆ.

* ಬೆಂಗಳೂರಿನ 25 ವರ್ಷದ ವಿಭಾ ಹರೀಶ್ ಅವರು "ಕಾಸ್ಮಿಕ್ಸ್" ಎಂಬ ಸ್ಟಾರ್ಟ್‌ಅಪ್ ಆರಂಭಿಸಿದ್ದರು ಇವರು ಈ ಕಂಪನಿಯ ಮೂಲಕ ಆರೋಗ್ಯ ಸಂಬಂಧಪಟ್ಟ ನ್ಯೂಟ್ರೀಷಿಯನ್ಸ್, ಸಪ್ಲಿಮೆಂಟ್ಸ್‌ಗಳನ್ನು ತಯಾರಿಸಿ ಜನರ ಆರೋಗ್ಯ ಕಾಪಾಡುವಲ್ಲಿ ಯಶಸ್ಸು ಕಂಡಿದ್ದರು ಈ ಸಂಸ್ಥೆಯು ಕೋವಿಡ್ 19 ವೈರಸ್ ಹರಡುವಕ್ಕಿಂತಲೂ ಮುನ್ನ ಪ್ರಾರಂಭವಾಗಿತ್ತು ದೇಶದೆಲ್ಲೆಡೆ ಹೆಸರು ಪಡೆದುಕೊಂಡಿತ್ತು.

* ಈ ಕಂಪನಿಯ ಪದಾರ್ಥಗಳು ಆನ್‌ಲೈನ್'ನಲ್ಲಿ ಕೂಡ ಲಭ್ಯವಿದೆ ಎಂದು ತಿಳಿಸಿದ್ದಾರೆ.

## ಬಂಗಾಳದ ಖ್ಯಾತ ಕವಿ ಶಂಖಾ ಘೋಷ್ ಇನ್ನಿಲ



* ಪದ್ಮಭೂಷಣ, ಜ್ಞಾನಪೀಠ ಪುರಸ್ಕೃತ ಶಂಖಾ ಘೋಷ್' ಅವರು ತಮ್ಮ 89ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ, ಇವರು ಬಂಗಾಳದ ಖ್ಯಾತ ಕವಿ ಯಾಗಿದ್ದರು.

* ಶಂಖಾ ಘೋಷ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ ಸಂತಾಪ ತಿಳಿಸಿದ್ದಾರೆ.

* ಶಂಖಾ ಘೋಷ್ ಭಾರತೀಯ ಕವಿ ಮತ್ತು ವಿಮರ್ಶಕರಾಗಿದ್ದರು ಘೋಷ್ 1951ರಲ್ಲಿ ಕೋಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಿಂದ ಬಂಗಾಳಿ ಭಾಷೆಯಲ್ಲಿ ಆರ್ಟ್ಸ್ ಪದವಿ ಪಡೆದುಕೊಂಡಿದ್ದರು ಮತ್ತು 1954ರಲ್ಲಿ ಕೋಲ್ಕತ್ತಾದ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದಾರೆ. ಶಂಖಾ ಘೋಷ್ ರವರ ಬಗ್ಗೆ ಮಾಹಿತಿ :

* ಶಂಖಾ ಘೋಷ್ ಭಾರತೀಯ ಕವಿ ಮತ್ತು ವಿಮರ್ಶಕ.

* ಘೋಷ್ 1951 ರಲ್ಲಿ ಕೋಲ್ಕತ್ತಾದ ಕೋಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಿಂದ ಬಂಗಾಳಿ ಭಾಷೆಯಲ್ಲಿ ಆರ್ಟ್ಸ್ ಪದವಿಪೂರ್ವ ಪದವಿ ಪಡೆದರು ಮತ್ತು ತರುವಾಯ 1954 ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದರು.

* ಜನನ: 5 ಫೆಬ್ರುವರಿ 1932, ಚಾಂದಪುರ ಜಿಲ್ಲೆ, ಬಾಂಗ್ಲಾದೇಶ

* ನಿಧನ: 21 ಏಪ್ರಿಲ್ 2021, ಕೋಲ್ಕತಾ

* ಪುಸ್ತಕಗಳು: ಬಾಬರರ್ ಪ್ರಥೋನಾ, ಮುಖ್ಖಾ ಬಾರಾ ಸಮಾಜಿಕ್ ನಾಯ್, ಚಕ್ರವರ್ತಿ ಬಾಬರ್ ಅವರ ಪ್ರಾರ್ಥನೆ ಮತ್ತು ಇತರ ಕವನಗಳು, ಆಯ್ದ ಕವನಗಳು

* ಪ್ರಶಸ್ತಿಗಳು: ರವೀಂದ್ರ ಪುರಸ್ಕರ್, ಜ್ಞಾನಪೀಠ ಪ್ರಶಸ್ತಿ, ಪದ್ಮಭೂಷಣ್

## ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದ ವರದಿ ಪ್ರಕಟ




* 2002ರಿಂದ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕವನ್ನು ರಿಪೋರ್ಟರ್ಸ್ ವಿಥೌಟ್ ಬಾರ್ಡರ್ಸ್ ಪ್ರಕಟಿಸುತ್ತ ಬಂದಿದೆ.

* ಪ್ರತಿ ದೇಶದಲ್ಲಿ ಪತ್ರಕರ್ತರು, ಸುದ್ದಿ ಸಂಸ್ಥೆಗಳು ಮತ್ತು ನೆಟಿಜನ್‌ಗಳು ಹೊಂದಿರುವ ಸ್ವಾತಂತ್ರ್ಯದ ಮಟ್ಟವನ್ನು ಮತ್ತು ಈ ಸ್ವಾತಂತ್ರ್ಯವನ್ನು ಗೌರವಿಸಲು ಅಧಿಕಾರಿಗಳು ಮಾಡಿದ ಪ್ರಯತ್ನಗಳನ್ನು ಇದು ತೋರಿಸುತ್ತಿದೆ.

* ಪ್ರಸ್ತುತ ರಿಪೋರ್ಟರ್ಸ್ ವಿಥೌಟ್ ಬಾರ್ಡರ್ಸ್ ಎಂಬ ಅಂತರಾಷ್ಟ್ರೀಯ ಸಂಸ್ಥೆ 180 ದೇಶಗಳ ಜಾಗತಿಕ ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕವನ್ನು ಬಿಡುಗಡೆಗೊಳಿಸಿದ್ದು, ಇದರಲ್ಲಿ ಭಾರತವು 142ನೇ ಸ್ಥಾನ ಪಡೆದುಕೊಂಡಿದೆ.

* ಚೀನಾ 177ನೇ ಸ್ಥಾನ
* ನೇಪಾಳ 106ನೇ ಸ್ಥಾನ
* ಶ್ರೀಲಂಕಾ 127ನೇ ಸ್ಥಾನ
* ಪಾಕಿಸ್ತಾನ 145 ಸ್ಥಾನ
* ಬಾಂಗ್ಲಾದೇಶ 152ನೇ ಸ್ಥಾನದಲ್ಲಿದೆ.

* ಭಾರತದಲ್ಲಿ ಕಳೆದ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ಸರಕಾರ ಪುನಃ ಆಯ್ಕೆಯಾದ ನಂತರ ಮಾಧ್ಯಮಗಳ ಮೇಲಿನ ಒತ್ತಡ ಇನ್ನಷ್ಟು ಹೆಚ್ಚಾಗಿದೆ ಎಂದು ವರದಿ ಮೂಲಕ ತಿಳಿದಿದೆ.

* ಪ್ರಸ್ತುತ ಕಾಶ್ಮೀರದ ಸ್ಥಿತಿ ಆತಂಕಕಾರಿಯಾಗಿದೆ, ಅಲ್ಲಿನ ಪತ್ರಕರ್ತರಿಗೆ ಆಗಾಗ ಪೊಲೀಸರು ಮತ್ತು ಸೇನಾ ಪಡೆಗಳಿಂದ ಕಿರುಕುಳವಾಗುತ್ತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

* ರಿಪೋರ್ಟರ್ಸ್ ವಿಥೌಟ್ ಬಾರ್ಡರ್ಸ್ ಪ್ರಕಟಿಸಿರುವ ಪತ್ರಿಕಾ ಸೂಚ್ಯಂಕದಲ್ಲಿ ನಾರ್ವೆ ಅಗ್ರ ಸ್ಥಾನದಲ್ಲಿದ್ದು ನಂತರದ ಸ್ಥಾನಗಳಲ್ಲಿ ಫಿನ್‌ಲ್ಯಾಂಡ್ ಹಾಗೂ ಡೆನ್ಮಾರ್ಕ್ ದೇಶಗಳಿವೆ.

* 2021ರಲ್ಲಿನ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಅತೀ ಕಡಿಮೆ ಸ್ಥಾನ ಪಡೆದ ದೇಶಗಳು ಇಂತಿವೆ ಎರಿಟ್ರಿಯಾ, ಉತ್ತರ ಕೊರಿಯಾ, ತುರ್ಕಮೆನಿಸ್ತಾನ್, ಚೀನಾ, ಜಿಬೌಟಿ, ವಿಯೆಟ್ನಾಂ, ಇರಾನ್, ಸಿರಿಯಾ, ಲಾವೋಸ್ ಮತ್ತು ಕ್ಯೂಬಾ ದೇಶಗಳಾಗಿವೆ.

# 23-04-2021

## ಕೇಂದ್ರ ರಾಜ್ಯ ಸರ್ಕಾರ ಎರಡಕ್ಕೂ ಕೋವಿಶೀಲ್ಡ್ ಲಸಿಕೆ ದರ ನಿಗಧಿ




* ಪುಣೆಯ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಕೋವಿಶೀಲ್ಡ್‌ನ ಲಸಿಕೆ ಪ್ರತಿ ಡೋಸ್‌ಗೆ 400ರೂ.ಬೆಲೆ ಘೋಷಿಸಿದ ಈ ಬೆಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಅನ್ವಯವಾಗಲಿದೆ ಎಂದು ಸೀರಂ ಇನ್ ಸ್ಟಿಟ್ಯೂಟ್‌ನ CEO ಆದರ್ ಪೂನವಾಲಾ ತಿಳಿಸಿದ್ದಾರೆ.

* ಈ ಹಿಂದೆ ಕೇಂದ್ರ ಸರ್ಕಾರಕ್ಕೆ 150ರೂ ಮತ್ತು ರಾಜ್ಯ ಸರ್ಕಾರಕ್ಕೆ 400ರೂ ಗಳಂತೆ ಕೋವಿಶೀಲ್ಡ್ ಲಸಿಕೆಯನ್ನು ಪೂರೈಸುತ್ತಿರುವ ಹಿನ್ನಲೆಯಿಂದ ವಿಪಕ್ಷಗಳು ಪ್ರಶ್ನೆ ಮಾಡಿದ್ದವು ಆದ್ದರಿಂದ ಇದೀಗ ರಾಜ್ಯ ಮತ್ತು ಕೇಂದ್ರಕ್ಕೆ ಪ್ರತಿ ಡೋಸ್‌ಗೆ 400ರೂ.ಬೆಲೆ ಘೋಷಿಸದೆ.

## ಚೀನಾ ಆಸ್ಟ್ರೇಲಿಯಾ ವ್ಯವಹಾರ ರದ್ದು



* ಆಸ್ಟ್ರೇಲಿಯಾ ದೇಶದ ರಾಜ್ಯ ಸರ್ಕಾರವು ಚೀನಾ ದೇಶದೊಂದಿಗೆ ಮೂಲಸೌಲಭ್ಯ ಅಭಿವೃದ್ಧಿ ಒಪ್ಪಂದಗಳನ್ನು ಮಾಡಿಕೊಂಡಿತ್ತು ಇದೀಗ ಈ ಒಪ್ಪಂದಗಳನ್ನು ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆ ಉಂಟಾಗುತ್ತದೆ ಎಂಬ ಹೇಳಿಕೆಯನ್ನು ನೀಡಿ ಆಸ್ಟ್ರೇಲಿಯಾ ಸರ್ಕಾರವು ಒಪ್ಪಂದಗಳನ್ನು ರದ್ದುಗೊಳಿಸಿರುವುದಾಗಿ ತಿಳಿಸಿದೆ.

* ಆಸ್ಟ್ರೇಲಿಯಾದ ವಿಕ್ಟೋರಿಯಾ ರಾಜ್ಯವು 2018 ಮತ್ತು 2019ರಲ್ಲಿ ಚೀನಾದೊಂದಿಗೆ ಬೆಲ್ಟ್ ಆಯಂಡ್ ರೋಡ್ ಮೂಲಸೌಲಭ್ಯ ಅಭಿವೃದ್ಧಿ ಯೋಜನೆಗೆ ಸಹಿ ಹಾಕಲಾಗಿತ್ತು.

* ರಾಜ್ಯದ ಶಿಕ್ಷಣ ಇಲಾಖೆಯು 1999ರಲ್ಲಿ ಸಿರಿಯಾ ಮತ್ತು 2004ರಲ್ಲಿ ಇರಾನ್ ಜತೆಗೂ ಒಪ್ಪಂದ ಮಾಡಿಕೊಂಡಿತ್ತು.

* ಈ ನಾಲ್ಕೂ ಒಪ್ಪಂದಗಳು ಹೊಸ ಕಾನೂನುಗಳ ಅಡಿಯಲ್ಲಿ ರಾಷ್ಟ್ರೀಯ ಹಿತಾಸಕ್ತಿಗೆ ಭಂಗ ತರುತ್ತವೆ ಎಂಬ ಕಾರಣಗಳನ್ನು ತಿಳಿಸಿ ಈ ಒಪ್ಪಂದಗಳನ್ನು ರದ್ದುಪಡಿಸುವ ನಿರ್ಧಾರಕ್ಕೆ ಆಸ್ಟ್ರೇಲಿಯಾ ಸರ್ಕಾರ ಬಂದಿದೆ ಎಂದು ವಿದೇಶಾಂಗ ಸಚಿವ ಮಾರಿಸ್ ಪೈನೆ ಮಾಹಿತಿಯನ್ನು ನೀಡಿದ್ದಾರೆ. ಆಸ್ಟ್ರೇಲಿಯಾ ದೇಶದ ಬಗ್ಗೆ ಮಾಹಿತಿ :

* ಆಸ್ಟ್ರೇಲಿಯಾ, ಅಧಿಕೃತವಾಗಿ ಆಸ್ಟ್ರೇಲಿಯಾದ ಕಾಮನ್ವೆಲ್ತ್, ಇದು ಆಸ್ಟ್ರೇಲಿಯಾ ಖಂಡದ ಮುಖ್ಯ ಭೂಭಾಗವಾಗಿದೆ.

* ಟ್ಯಾಸ್ಮೆನಿಯಾ ದ್ವೀಪ ಮತ್ತು ಹಲವಾರು ಸಣ್ಣ ದ್ವೀಪಗಳನ್ನು ಒಳಗೊಂಡಿರುವ ಸಾರ್ವಭೌಮ ದೇಶವಾಗಿದೆ.

* ಇದು ಓಷಿಯಾನಿಯಾದ ಅತಿದೊಡ್ಡ ದೇಶ ಮತ್ತು ಒಟ್ಟು ವಿಸ್ತೀರ್ಣದಿಂದ ವಿಶ್ವದ ಆರನೇ ಅತಿದೊಡ್ಡ ದೇಶವಾಗಿದೆ.

* ಪ್ರಧಾನಿ: ಸ್ಕಾಟ್ ಮಾರಿಸನ್ ಟ್ರೆಂಡಿಂಗ್
* ರಾಜಧಾನಿ: ಕ್ಯಾನ್ಬೆರಾ
* ಡಯಲಿಂಗ್ ಕೋಡ್: +61
* ಜನಸಂಖ್ಯೆ: 2.54 ಕೋಟಿ (2019)
* ಕರೆನ್ಸಿ: ಆಸ್ಟ್ರೇಲಿಯಾದ ಡಾಲರ್

## ಭಾರತೀಯ ಮೂಲದ ವನಿತಾ ಗುಪ್ತಾ ಅಮೆರಿಕಾದ ಸಹ ಅಟಾರ್ನಿ ಜನರಲ್ ಆಗಿ ನೇಮಕ



* ಭಾರತೀಯ ಮೂಲದ ವನಿತಾ ಗುಪ್ತಾ ಅವರು ಅಮೆರಿಕದ ಸಹ ಅಟಾರ್ನಿ ಜನರಲ್ ಆಗಿ ನೇಮಕಗೊಂಡಿದ್ದಾರೆ, ಭಾರತೀಯ ಮೂಲದ ಮೊದಲ ಮಹಿಳೆ ಅಟಾರ್ನಿ ಜನರಲ್ ಹುದ್ದೆಗೆ ನೇಮಕಗೊಂಡಿದ್ದಾರೆ.

* ಸೆನೆಟ್‌ನಲ್ಲಿ ನಡೆದ ಮತದಾನದಲ್ಲಿ ವನಿತಾ ಗುಪ್ತಾ ಅವರು 51 49 ಮತಗಳ ಅಂತರದಿಂದ ಗೆದ್ದು ಈ ಹುದ್ದೆಗೆ ಆಯ್ಕೆಯಾಗಿದ್ದಾರೆ ಎಂದು ತಿಳಿಸಲಾಗಿದೆ.

* ಅಮೇರಿಕ ಅಧ್ಯಕ್ಷ ಜೋ ಬೈಡನ್'ರವರು ಅಮೆರಿಕಾದ ಸಹ ಅಟಾರ್ನಿ ಜನರಲ್ ಆಯ್ಕೆಯಾಗಿರುವ ವನಿತಾ ಗುಪ್ತ

ಅವರನ್ನು ಅಭಿನಂದಿಸಿರುವ 'ಜನಾಂಗೀಯ ಸಮಾನತೆ ಮತ್ತು ನ್ಯಾಯ ಕ್ಷೇತ್ರದಲ್ಲಿ ಅರ್ಪಣೆಯಿಂದ ಕೆಲಸ ಮಾಡುವ ಹೊಣೆಗಾರಿಕೆ ವನಿತಾ ಗುಪ್ತ ಮತ್ತು ಕ್ರಿಸ್ಟಿನ್ ಕ್ಲರ್ಕ್ ಅವರಿಗೆ ನೀಡಿದರು.

* ಈ ಸಹ ಅಟಾರ್ನಿ ಜನರಲ್ ಹುದ್ದೆ ದೇಶದ ನ್ಯಾಯಾಂಗ ವ್ಯವಸ್ಥೆಯ 3ನೇ ಅತಿ ಪ್ರಮುಖ ಹುದ್ದೆಯಾಗಿದೆ, ಅಮೆರಿಕದ ನ್ಯಾಯಾಂಗ ವ್ಯವಸ್ಥೆಯಲ್ಲಿ ಅಟಾರ್ನಿ ಜನರಲ್ ಹುದ್ದೆ ಅತ್ಯಂತ ಪ್ರಮುಖವಾಗಿದೆ.

* ವನಿತಾ ಗುಪ್ತಾ ಅವರು ಈ ಹಿಂದೆ ಬರಾಕ್ ಒಬಾಮ ಅಧ್ಯಕ್ಷರಾಗಿದ್ದ ಸಮಯದಲ್ಲಿ ನ್ಯಾಯಾಂಗ ಇಲಾಖೆಯ ನಾಗರಿಕ ಹಕ್ಕುಗಳ ವಿಭಾಗವನ್ನು ನೋಡಿಕೊಳ್ಳುತ್ತಿದ್ದರು ಎಂದು ತಿಳಿಸಿದ್ದಾರೆ. ವನಿತಾ ಗುಪ್ತಾ ರವರ ಬಗ್ಗೆ ಮಾಹಿತಿ :

* ವನಿತಾ ಗುಪ್ತಾ ನವೆಂಬರ್ 15, 1974 ರಂದು ಜನಿಸಿದರು.

* ಅಮೆರಿಕದ ನಾಗರಿಕ ಹಕ್ಕುಗಳ ವಕೀಲ ಅವರು ನಾಗರಿಕ ಮತ್ತು ಮಾನವ ಹಕ್ಕುಗಳ ನಾಯಕತ್ವ ಸಮ್ಮೇಳನದ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದರು.

* 2014 ರಿಂದ 2017 ರವರೆಗೆ, ಅವರು ಯು.ಎಸ್. ನ್ಯಾಯಾಂಗ ಇಲಾಖೆಯಲ್ಲಿ ಪ್ರಧಾನ ಉಪ ಸಹಾಯಕ ಅಟಾರ್ನಿ ಜನರಲ್ ಮತ್ತು ನಾಗರಿಕ ಹಕ್ಕುಗಳ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು.

* ಇವರು ಯುನೈಟೆಡ್ ಸ್ಟೇಟ್ಸ್‌ನ ಮುಖ್ಯ ನಾಗರಿಕ ಹಕ್ಕುಗಳ ಅಭಿಯೋಜಕರಾಗಿದ್ದರು.

* ಜನವರಿ 7, 2021 ರಂದು, ಅಧ್ಯಕ್ಷ ಜೋ ಬಿಡೆನ್ ಅವರು ಗುಪ್ತಾ ಅವರನ್ನು ಅಸೋಸಿಯೇಟ್ ಅಟಾರ್ನಿ ಜನರಲ್ ಆಗಿ ನೇಮಕ ಮಾಡಿದರು.

## ಓಲಾ ಇ ಸ್ಕೂಟರ್ ಇದೇ ಜುಲೈನಲ್ಲಿ ಲೋಕಾರ್ಪಣೆ!



* ಓಲಾ ಇ ಸ್ಕೂಟರ್ ಇದೇ ವರ್ಷದ ಜುಲೈನಲ್ಲಿ ಮಾರುಕಟ್ಟೆಗೆ ಎಲೆಕ್ಟ್ರಿಕ್ ಸ್ಕೂಟರ್‌ಗಳನ್ನು ಬಿಡುಗಡೆಗೊಳಿಸಿದೆ ಎಂದು ಓಲಾ ಎಲೆಕ್ಟ್ರಿಕ್ ಕಂಪನಿ ತಿಳಿಸಿದೆ, ಮತ್ತು 400 ನಗರಗಳಲ್ಲಿ 1 ಲಕ್ಷ ಚಾರ್ಜಿಂಗ್ ಪಾಯಿಂಟ್‌ಗಳ ಹೈಪರ್ ಚಾರ್ಜರ್ ನೆಟ್‌ವರ್ಕ್ ಸ್ಥಾಪಿಸಲಿದೆ ಓಲಾ ಎಲೆಕ್ಟ್ರಿಕ್ ಮಾಹಿತಿಯನ್ನು ನೀಡಿದೆ.

* ಈ ಹಿಂದಿನ ವರ್ಷ ತಮಿಳುನಾಡಿನಲ್ಲಿ ಮೊದಲ ಎಲೆಕ್ಟ್ರಿಕ್ ಸ್ಕೂಟರ್‌ಕಾರ್ಖಾನೆ ಪ್ರಾರಂಭಿಸಲಾಗಿದ್ದು, ಇದಕ್ಕೆ ಓಲಾ ಕಂಪನಿ 2400 ಕೋಟಿ ರೂ. ಬಂಡವಾಳ ಹೂಡಿದೆ ಮತ್ತು 10 ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶ ನೀಡಲಿದೆ ಎನ್ನುವ ಭರವಸೆಯನ್ನು ನೀಡಿದೆ.

* ಪ್ರಸ್ತುತ ಓಲಾ ಕಂಪನಿಯು 2 ಮಿಲಿಯನ್ ಸ್ಕೂಟರ್'ಗಳನ್ನೂ ತಯಾರಿಸುವ ಸಾಮರ್ಥ್ಯ ಹೊಂದಿದೆ, ಇದೇ ಜೂನ್‌ನಲ್ಲಿ ಕಾರ್ಖಾನೆ ಕಾರ್ಯ ಸಂಪೂರ್ಣಗೊಳ್ಳಲಿದೆ ಮತ್ತೇ ಜುಲೈ ತಿಂಗಳಿನಿಂದ ಸ್ಕೂಟರ್‌ಗಳನ್ನ ಮಾರಾಟ ಮಾಡಲು ಪ್ರಾರಂಭಿಸಲಿದೆ ಎಂದು ಓಲಾ ಚೇರ್‌ಮನ್ ಹಾಗೂ ಗ್ರೂಪ್ CEO ಭವಿಶ್ ಅಗರ್‌ವಾಲ್ ಮಾಹಿತಿಯನ್ನು ನೀಡಿದ್ದಾರೆ.

## ಇಥಿಯೋಪಿಯಾ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆ



* ಇಥಿಯೋಪಿಯಾ ದೇಶದ ಹಲವು ಭಾಗಗಳಲ್ಲಿ ಹಿಂಸಾಚಾರ ಭುಗಿಲೆದ್ದ ಕಾರಣದಿಂದಾಗಿ ಅಮ್ಹಾರಾ ಪ್ರದೇಶದ ದಕ್ಷಿಣ ಭಾಗದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿತು.

* ಇಥಿಯೋಪಿಯಾದಲ್ಲಿನ ಒರೊಮೊ ಇಮಾಮ್ ಜನಾಂಗೀಯರನ್ನು ಮಸೀದಿಯ ಮುಂದೆ ಗುಂಡಿಕ್ಕಿ ಕೊಲ್ಲಲಾಗಿದೆ ಇದರಿಂದ ಈ ಪ್ರದೇಶದಲ್ಲಿ ಹಿಂಸಾಚಾರ ಆರಂಭವಾಗಿದೆ.

* ಒರೊಮೊ ಇಮಾಮ್ ಜನಾಂಗೀಯ ನಾಗರಿಕರು ಮತ್ತು ಅಮ್ಹಾರಾ ಭದ್ರತಾ ಪಡೆಗಳ ನಡುವಿನ ಘರ್ಷಣೆಯನ್ನು ಯಾಗಿದೆ. ಅಮ್ಹಾರಾ ಮತ್ತು ಒರೊಮೊ ನಡುವಿನ ಸಮಸ್ಯೆ:

* ಇಥಿಯೋಪಿಯನ್ ರಾಜಕೀಯವು 1991ರವರೆಗೆ ಅಮ್ಹಾರಾ ಪ್ರಾಬಲ್ಯ ಹೊಂದಿತ್ತು, ಹಾಗೂ ಒರೊಮೊ ಇಥಿಯೋಪಿಯನ್ ದೇಶದ ಅತಿದೊಡ್ಡ ಜನಾಂಗೀಯ ಗುಂಪಾಗಿದೆ, ಈ ಗುಂಪುಗಳ ನಡುವೆ ಜನಾಂಗೀಯ ಸಂಘರ್ಷವನ್ನು ಸೃಷ್ಟಿಸಿದೆ ಈ ಸಂಘರ್ಷದಿಂದಾಗಿ

ಅನೇಕರು ನಿರಾಶ್ರಿತರು ಶಾಶ್ವತ ನಿವಾಸಿಗಳಾಗಿ US ಗೆ ತೆರಳಿದ್ದಾರೆ.

* ಪ್ರಬಲ ಟೈಗ್ರೇ ಪೀಪಲ್ಸ್ ಲಿಬರೇಶನ್ ಫ್ರಂಟ್ ಇಥಿಯೋಪಿಯಾದ ಟೈಗ್ರೇ ಪ್ರದೇಶವನ್ನು ಆಳುತ್ತದೆ. ಇಥಿಯೋಪಿಯಾದ ಪ್ರಧಾನ ಮಂತ್ರಿ ಅಬಿ ಅಹ್ಮದ್ ಅವರು 2018 ರಲ್ಲಿ ಎರಿಟ್ರಿಯಾದೊಂದಿಗೆ ಶಾಂತಿ ಸ್ಥಾಪಿಸಿದರು, ಈ ಕಾರಣಕ್ಕಾಗಿ 2019 ರಲ್ಲಿ ಶಾಂತಿ ನೊಬೆಲ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು ಇಥಿಯೋಪಿಯಾ ದೇಶದ ಬಗ್ಗೆ ಮಾಹಿತಿ :

* ಆಫ್ರಿಕಾದ ಹಾರ್ನ್‌ನಲ್ಲಿರುವ ಇಥಿಯೋಪಿಯಾ, ಗ್ರೇಟ್ ರಿಫ್ಟ್ ಕಣಿವೆಯಿಂದ ವಿಭಜಿಸಲ್ಪಟ್ಟ ಒರಟಾದ, ಭೂಕುಸಿತ ದೇಶ.

* ಪುರಾತತ್ತ್ವ ಶಾಸ್ತ್ರದ ಸಂಶೋಧನೆಗಳು 3 ದಶಲಕ್ಷ ವರ್ಷಗಳಿಗಿಂತಲೂ ಹಳೆಯದಾಗಿದೆ.

* ಇದು ಪ್ರಾಚೀನ ಸಂಸ್ಕೃತಿಯ ಸ್ಥಳವಾಗಿದೆ. ಅದರ ಪ್ರಮುಖ ತಾಣಗಳಲ್ಲಿ 12 ರಿಂದ 13 ನೇ ಶತಮಾನಗಳ ಲಾಲಿಬೆಲಾ ಅದರ ಕಲ್ಲು ಕತ್ತರಿಸಿದ ಕ್ರಿಶ್ಚಿಯನ್ ಚರ್ಚುಗಳಿವೆ.

* ರಾಜಧಾನಿ: ಆಡಿಸ್ ಅಬಾಬಾ
* ಡಯಲಿಂಗ್ ಕೋಡ್: +251
* ಕರೆನ್ಸಿ: ಇಥಿಯೋಪಿಯನ್ ಬಿರ್
* ಜನಸಂಖ್ಯೆ: 11.21 ಕೋಟಿ (2019)
* ಪ್ರಧಾನಿ: ಅಬಿ ಅಹ್ಮದ್
* ಅಧಿಕೃತ ಭಾಷೆ: ಅಂಹರಿಕ್

### ಏಪ್ರಿಲ್ 22 : ಭೂ ದಿನ ಆಚರಣೆ




* ಪ್ರತಿ ವರ್ಷ ಏಪ್ರಿಲ್ 22ರಂದು ಭೂ ದಿನವನ್ನು ಆಚರಿಸಲಾಗುತ್ತದೆ.

* ಅಮೇರಿಕಾ ಅಧ್ಯಕ್ಷ ಜೋ ಬಿಡನ್ 2021 ಮಾರ್ಚ್ 22ರಂದು ಎರಡು ದಿನಗಳ ಭೂ ದಿನ ಶೃಂಗಸಭೆಯನ್ನು ಆರಂಭಿಸಿದರು ಈ ಸಂದರ್ಭದಲ್ಲಿ ಜೋ ಬಿಡನ್ ಅವರು ದಶಕದ ಅಂತ್ಯದ ವೇಳೆಗೆ ಅಮೇರಿಕಾ ಹೊರಸೂಸುವಿಕೆಯನ್ನು ಅರ್ಧಕ್ಕೆ ಇಳಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ ಎಂದು ತಿಳಿಸಲಾಗಿದೆ.
* ಅಮೇರಿಕಾ ಅಧ್ಯಕ್ಷ ಜೋ ಬಿಡನ್ 2 ಟ್ರಿಲಿಯನ್ USD ಮೂಲಸೌಕರ್ಯ ಪ್ಯಾಕೇಜ್ ಘೋಷಣೆ ಮಾಡಿದರು ಪ್ಯಾಕೇಜ್‌ನಲ್ಲಿ ಹವಾಮಾನ ಸ್ನೇಹಿ ನೀತಿಗಳು ಮತ್ತು ಎಲೆಕ್ಟ್ರಿಕ್ ಗ್ರಿಡ್‌ನಲ್ಲಿ ಹೂಡಿಕೆ, ಶುದ್ಧ ಇಂಧನಕ್ಕಾಗಿ ಅಭಿವೃದ್ಧಿ ಈ ವಿಷಯಗಳನ್ನು ಹೊಂದಿವೆ.

* ಈ ಭೂ ದಿನ ಆಚರಣೆಯ ಸಮಯದಲ್ಲಿ ಪಳೆಯುಳಿಕೆ ಇಂಧನ ಪ್ರಸರಣ ರಹಿತ ಒಪ್ಪಂದಕ್ಕೆ ಸುಮಾರು 101 ನೊಬೆಲ್ ಪ್ರಶಸ್ತಿ ವಿಜೇತರು ಸಹಿ ಹಾಕಿದರು.

## 24-04-2021

### ಕೇಂದ್ರ ಸರಕಾರವು ಬಡವರಿಗೆ 2 ತಿಂಗಳು ಉಚಿತ ಆಹಾರ ಧಾನ್ಯ ಪೂರೈಕೆ



* ಭಾರತದಲ್ಲಿ ಕೊರೊನಾ ಎರಡನೇ ಅತೀ ಹೆಚ್ಚಾಗಿ ಹರಡುತ್ತಿರುವ ಹಿನ್ನಲೆಯಿಂದ ಆರ್ಥಿಕ ಸಂಕಷ್ಟ ಎದುರಾಗುವ ಸಾಧ್ಯತೆಗಳಿಂದ ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ಅಡಿಯಲ್ಲಿ ಬಡವರಿಗೆ 2 ತಿಂಗಳ ಕಾಲ ಉಚಿತ ಅಕ್ಕಿ, ಆಹಾರ ಧಾನ್ಯ ನೀಡಲಾಗುತ್ತದೆ ಎಂದು ತಿಳಿಸಿದೆ.

* ಕೇಂದ್ರ ಸರ್ಕಾರವು 80 ಕೋಟಿ ಬಡ ಜನರಿಗೆ ಇದೇ ಮೇ ಹಾಗೂ ಜೂನ್ ತಿಂಗಳಿನಲ್ಲಿ 5 KG ಅಕ್ಕಿ ಹಾಗೂ ಆಹಾರ ಧಾನ್ಯಗಳನ್ನು ಉಚಿತವಾಗಿ ನೀಡಲಾಗುವುದು ಎಂದು ತಿಳಿಸಿದೆ.

* ಉಚಿತ ಆಹಾರ ಧಾನ್ಯ ಯೋಜನೆಗೆ ಕೇಂದ್ರ ಸರ್ಕಾರ 26,000 ಕೋಟಿ ರೂ. ಮೀಸಲಿಟ್ಟಿದೆ.

* ದೇಶದಲ್ಲಿ ಕಳೆದ ವರ್ಷದಲ್ಲಿ ಕೊರೊನ ವೈರಸ್ ವ್ಯಾಪಕವಾಗಿ ಹರಡಿತ್ತು ಆದ್ದರಿಂದ ಆರ್ಥಿಕ ಬಿಕ್ಕಟ್ಟು ಎದುರಾಗಿತ್ತು ಆ ಸಮಯದಲ್ಲಿ ಪ್ರಧಾನಿ ಗರೀಬ್ ಕಲ್ಯಾಣ್ ಯೋಜನೆಯಡಿ ಉಚಿತ ಆಹಾರ ಧಾನ್ಯವನ್ನು ಬಡವರಿಗೆ ನವೆಂಬರ್ ತಿಂಗಳವರೆಗೆ ನೀಡಲಾಗಿತ್ತು. ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ಬಗ್ಗೆ ಮಾಹಿತಿ :

* ಪ್ರಧಾನ್ ಮಂತ್ರಿ ಗರಿಬ್ ಕಲ್ಯಾಣ್ ಯೋಜನೆ, 2016 ನರೇಂದ್ರ ಮೋದಿ ನೇತೃತ್ವದ ಭಾರತ ಸರ್ಕಾರವನ್ನು ಡಿಸೆಂಬರ್ 2016 ರಲ್ಲಿ ಪ್ರಾರಂಭಿಸಿದ ಆದಾಯ ಘೋಷಣೆ ಯೋಜನೆಯಾಗಿದೆ. 2016 (ಐಡಿಎಸ್) ಮಾದರಿಯಲ್ಲಿ ಪ್ರಾರಂಭಿಸಲಾಯಿತು.

* ಡಿಸೆಂಬರ್ 16, 2016 ರಿಂದ ಮಾರ್ಚ್ 31, 2017 ರವರೆಗೆ ಮಾನ್ಯವಾಗಿರುವ ಈ ಯೋಜನೆಯನ್ನು ಭಾರತೀಯ ಬ್ಯಾಂಕ್ ಖಾತೆಗಳಲ್ಲಿ ನಗದು ಅಥವಾ ಬ್ಯಾಂಕ್ ಠೇವಣಿ ರೂಪದಲ್ಲಿ ಆದಾಯವನ್ನು ಘೋಷಿಸಲು ಮಾತ್ರ ಪಡೆಯಬಹುದು.

* ತೆರಿಗೆ ರಿಟರ್ನ್‌ಗಳಲ್ಲಿ ಆದಾಯವನ್ನು ತೋರಿಸಿದರೆ ಪಿಎಂಜಿಕೆವೈ ಅಡಿಯಲ್ಲಿ ಬಹಿರಂಗಪಡಿಸದ ಆದಾಯವನ್ನು ಘೋಷಿಸದಿರುವುದು 77.25% ದಂಡವನ್ನು ಆಕರ್ಷಿಸುತ್ತದೆ. ತೆರಿಗೆ ರಿಟರ್ನ್‌ಗಳಲ್ಲಿ ಆದಾಯವನ್ನು ತೋರಿಸದಿದ್ದರೆ, ಅದು ಇನ್ನೂ 10% ದಂಡವನ್ನು ಆಕರ್ಷಿಸುತ್ತದೆ ಮತ್ತು ನಂತರ ಕಾನೂನು ಕ್ರಮ ಜರುಗಿಸುತ್ತದೆ.

## ಭಾರತಕ್ಕೆ ಸಹಾಯ ಹಸ್ತ ಸೂಚಿಸಿದ ಪಾಕಿಸ್ತಾನ ಎಧಿ ಫೌಂಡೇಶನ್




* ಭಾರತದಲ್ಲಿ ಕೊರೋನಾ 2ನೇ ಅಲೆ ಅತೀ ಹೆಚ್ಚಾಗಿ ಹರಡುತ್ತಿರುವ ಹಿನ್ನಲೆಯಿಂದಾಗಿ ಚೀನಾ ರಾಷ್ಟ್ರವು ಭಾರತಕ್ಕೆ ನೆರವು ನೀಡುವುದಾಗಿ ಸೂಚಿಸಿದೆ, ಇದೀಗ ಪಾಕಿಸ್ತಾನವು ಕೂಡ ಭಾರತಕ್ಕೆ ಸಹಾಯ ಹಸ್ತವನ್ನು ನೀಡುವದಾಗಿ ತಿಳಿಸಿದೆ.

* ಪ್ರಸ್ತುತ ಭಾರತಕ್ಕೆ ಪಾಕಿಸ್ತಾನದ ಎಧಿ ಫೌಂಡೇಶನ್ 50 ಆಯಂಬುಲೆನ್ಸ್'ಗಳ ನೆರವು ನೀಡಲು ಮುಂದಾಗಿದೆ ಎಂದು ಎಧಿ ಫೌಂಡೇಶನ್ ಸಂಸ್ಥೆಯ ಸಂಸ್ಥಾಪಕದಿವಂಗತ ಅಬ್ದುಲ್ ಸತ್ತಾರ್ ಎಡಿಯವರ ಪುತ್ರ ಫೈಸಲ್'ರವರು ಭಾರತದ ಪ್ರಧಾನಿ ಮೋದಿ ಅವರಿಗೆ ಪತ್ರದ ತಿಳಿಸಿದ್ದಾರೆ.

## ಕೇಂದ್ರದಿಂದ ಇ ಪ್ರಾಪರ್ಟಿ ಕಾರ್ಡ್ ಯೋಜನೆಗೆ ಪ್ರಧಾನಿ ಮೋದಿ ಚಾಲನೆ



* ಪ್ರಧಾನಿ ನರೇಂದ್ರ ಮೋದಿ ಕೇಂದ್ರ ಸರ್ಕಾರದಿಂದ ಗ್ರಾಮೀಣಾ ಜನತೆಗೆ ಇ ಪ್ರಾಪರ್ಟಿ ಕಾರ್ಡ್ ವಿತರಿಸುವ ಯೋಜನೆಗೆ ಚಾಲನೆ ನೀಡಲಿದ್ದಾರೆ.

* ಪ್ರಧಾನಿ ನರೇಂದ್ರ ಮೋದಿ ಏಪ್ರಿಲ್ 24ರಂದು ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚಾರಣೆ ಅಂಗವಾಗಿ 4.09 ಲಕ್ಷ ಜನರಿಗೆ ಸಂಬಂಧಪಟ್ಟ ಆಸ್ತಿ ಮಾಲೀಕತ್ವದ ಇ ಪ್ರಾಪರ್ಟಿ ಕಾರ್ಡುಗಳನ್ನು ವಿತರಿಸುವ ಯೋಜನೆಗೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಲಾಗಿದೆ.

* ಈ ಯೋಜನೆ ಜಾರಿಯಾದ ನಂತರ ದೇಶದ ಜನರು ತಮ್ಮ ಆಸ್ತಿ ಅಥವಾ ಪ್ರಾಪರ್ಟಿ ಕಾರ್ಡ್ ಡೌನ್ ಲೋಡ್ ಮಾಡಿಕೊಳ್ಳಬಹುದು ಎಂದು ತಿಳಿಸಲಾಗಿದೆ, ನಂತರ ಆಸ್ತಿ ಕಾರ್ಡ್ ಗಳನ್ನು ರಾಜ್ಯ ಸರ್ಕಾರಗಳು ಭೌತಿಕವಾಗಿ ನೀಡುತ್ತವೆ.

* ಈ ಇ ಪ್ರಾಪರ್ಟಿ ಕಾರ್ಡ್ ಯೋಜನೆಯ ಮೂಲಕ ಬ್ಯಾಂಕಿನಿಂದ ಸಾಲ ಪಡೆಯಲು ಗ್ರಾಮೀಣ ಜನರಿಗೆ ಅನುಕೂಲವಾಗಲಿದೆ ಎಂದು ತಿಳಿಸಲಾಗಿದೆ.

* 2020 21ನೇ ಅವಧಿಯಲ್ಲಿ ಇ ಪ್ರಾಪರ್ಟಿ ಕಾರ್ಡ್ ಯೋಜನೆಯನ್ನು ಮಹಾರಾಷ್ಟ್ರ, ಕರ್ನಾಟಕ, ಹರಿಯಾಣ, ಉತ್ತರ ಪ್ರದೇಶ, ಉತ್ತರಾಖಂಡ್, ಮಧ್ಯಪ್ರದೇಶ, ಪಂಜಾಬ್ ಮತ್ತು ರಾಜಸ್ಥಾನದ ಆಯ್ಕೆ ಮಾಡಲಾದ ಕೆಲ ಹಳ್ಳಿಗಳಲ್ಲಿ ಯೋಜನೆಯ ಪ್ರಾಯೋಗಿಕ ಜಾರಿಗೆ ತರಲಾಯಿತು ಎಂದು ತಿಳಿಸಿದ್ದಾರೆ.

## ಜಪಾನ್'ನಲ್ಲಿ ತುರ್ತುಪರಿಸ್ಥಿತಿ ಘೋಷಣೆ




* ಪ್ರಸ್ತುತ ಜಪಾನ್'ನಲ್ಲಿ ಕೋವಿಡ್ 19 ಹಿನ್ನಲೆಯಿಂದಾಗಿ ಮೂರನೇ ಬಾರಿ ತುರ್ತು ಪರಿಸ್ಥಿತಿ ಘೋಷಿಸುತ್ತಿದೆ.

* ಪ್ರಸ್ತುತ ಏಪ್ರಿಲ್ 25ರಿಂದ ಮೇ 11ರವರಗೆ ಜಪಾನ್ ಪ್ರಧಾನಿ ಯೋಶಿಹಿಡೆ ಸುಗಾ ಅವರು ಟೋಕಿಯೊ, ಒಸಾಕಾ, ಕ್ಯೂಟೊ ಮತ್ತು ಹ್ಯೋಗೊ ಪ್ರಾಂತ್ಯಗಳಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ.

## ಮೊಬೈಲ್ ಕೋವಿಡ್ ಪರೀಕ್ಷಾ ಕೇಂದ್ರ ಕ್ರಿಕೆಟರ್ ಹರಭಜನ್ ಸಿಂಗ್ ಅವರಿಂದ ಸ್ಥಾಪನೆ



* ಕ್ರಿಕೆಟರ್ ಹರಭಜನ್ ಸಿಂಗ್'ಅವರು ಪುಣೆಯಲ್ಲಿ ಮೊಬೈಲ್ ಕೋವಿಡ್ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಿದ್ದಾರೆ ಇದೀಗ ಈ ಕೇಂದ್ರವು ಕಾರ್ಯಾಚರಣೆಯನ್ನು ಪ್ರಾರಂಭಿಸಲಿದೆ ಎಂದು ತಿಳಿಸಿದ್ದಾರೆ.* ರಾಜ್ಯ ಬಿಜೆಪಿ ಮುಖ್ಯಸ್ಥ ಚಂದ್ರಕಾಂತ್ ಪಾಟೀಲ್ ಅವರು ಹರಭಜನ್ ಸಿಂಗ್'ಅವರಿಂದ ಮೊಬೈಲ್ ಕೋವಿಡ್ ಪರೀಕ್ಷಾ ಕೇಂದ್ರವು ಪುಣೆಯ ವಡ್ಗಾಂಶೇರಿಯಲ್ಲಿ ಪ್ರಾರಂಭವಾಗಲಿದೆ ಎಂದು ತಿಳಿಸಿದ್ದಾರೆ.

* ಡಯಾಗ್ನೋಸ್ಟಿಕ್ಸ್ ಕಂಪನಿ ಮೈಲಾಬ್ ಡಿಸ್ಕವರಿ ಸೊಲ್ಯೂಷನ್ಸ್ ಈ ಮೊಬೈಲ್ ಕೋವಿಡ್ ಪರೀಕ್ಷಾ ಕೇಂದ್ರವನ್ನು ನಿರ್ವಹಿಸಲಿದೆ, ಮತ್ತು ಈ ಕೇಂದ್ರವು ದಿನನಿತ್ಯ 1,500 ಮಾದರಿಗಳನ್ನು ಪರೀಕ್ಷಿಸುವ ಸಾಮರ್ಥ್ಯವನ್ನು ಹೊಂದಿದೆ ಹಾಗೂ ಆರ್‌ಟಿ ಪಿಸಿಆರ್ ಪರೀಕ್ಷೆಗಳ ಫಲಿತಾಂಶವನ್ನು 4 ಗಂಟೆಗಳಲ್ಲಿ ನೀಡಲಿದೆ ಎಂದು ತಿಳಿಸಿದ್ದಾರೆ.

## ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬ್ಡೆ ಸುಪ್ರೀಂ ಕೋರ್ಟ್‌ಗೆ ವಿದಾಯ



* ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬ್ಡೆ ಸುಪ್ರೀಂ ಕೋರ್ಟ್'ನ ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ.

* ಶರದ್ ಅರವಿಂದ್ ಬೊಬ್ಡೆ ಅವರು ಅಯೋಧ್ಯೆಯ ರಾಮಜನ್ಮಭೂಮಿ ವಿವಾದ ಸೇರಿದಂತೆ ಹಲವು ಮಹತ್ವದ ಪ್ರಕರಣಗಳನ್ನು ತಮ್ಮ ಕರ್ತವ್ಯಾವಧಿಯಲ್ಲಿ ಪರಿಹರಿಸಿದ್ದಾರೆ ಇದೀಗ ಶರದ್ ಅರವಿಂದ್ ಬೊಬ್ಡೆ ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ.

* ಶರದ್ ಅರವಿಂದ್ ಬೊಬ್ಡೆ ಭಾರತೀಯ ನ್ಯಾಯಾಧೀಶರಾಗಿದ್ದರು ಪ್ರಸ್ತುತ ಇವರು ನವೆಂಬರ್ 18, 2019 ರಿಂದ ಏಪ್ರಿಲ್ 23 2021ರವರೆಗೆ 47ನೇ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ.

* ಶರದ್ ಅರವಿಂದ್ ಬೊಬ್ಡೆ ಅವರು ಮಧ್ಯಪ್ರದೇಶದ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ಹಾಗೂ ಮುಂಬೈನ ಮಹಾರಾಷ್ಟ್ರ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಮತ್ತು ನಾಗ್ಪುರದ ಮಹಾರಾಷ್ಟ್ರ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಸುಪ್ರೀಂ ಕೋರ್ಟ್ ಬಗ್ಗೆ ಮಾಹಿತಿ :

* ಭಾರತದ ಸುಪ್ರೀಂ ಕೋರ್ಟ್ (ಭರತಾಯ ಉಚ್ಚತಮಾ ನ್ಯಾಯಾಲಯ) ಭಾರತದ ಸರ್ವೋಚ್ಚ ನ್ಯಾಯಾಂಗ ಮತ್ತು ಸಂವಿಧಾನದಡಿಯಲ್ಲಿ ಭಾರತದ ಅತ್ಯುನ್ನತ ನ್ಯಾಯಾಲಯವಾಗಿದೆ.

* ಇದು ಅತ್ಯಂತ ಹಿರಿಯ ಸಾಂವಿಧಾನಿಕ ನ್ಯಾಯಾಲಯವಾಗಿದ್ದು, ನ್ಯಾಯಾಂಗ ಪರಿಶೀಲನೆಯ ಅಧಿಕಾರವನ್ನು ಹೊಂದಿದೆ.

* ಭಾರತದಮುಖ್ಯ ನ್ಯಾಯಮೂರ್ತಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿದ್ದಾರೆ ಮತ್ತು ನ್ಯಾಯಾಲಯವು ಗರಿಷ್ಠ 34 ನ್ಯಾಯಾಧೀಶರನ್ನು ಒಳಗೊಂಡಿದೆ ಮತ್ತು ಇದು ಮೂಲ, ಮೇಲ್ಮನವಿ ಮತ್ತು ಸಲಹಾ ನ್ಯಾಯವ್ಯಾಪ್ತಿಗಳ ರೂಪದಲ್ಲಿ ವ್ಯಾಪಕ ಅಧಿಕಾರವನ್ನು ಹೊಂದಿದೆ. ಇದನ್ನು ಭಾರತದ ಅತ್ಯಂತ ಶಕ್ತಿಶಾಲಿ ಸಾರ್ವಜನಿಕ ಸಂಸ್ಥೆ ಎಂದು ಪರಿಗಣಿಸಲಾಗಿದೆ.

* ದೇಶದ ಸಾಂವಿಧಾನಿಕ ನ್ಯಾಯಾಲಯವಾಗಿ, ಇದು ಪ್ರಾಥಮಿಕವಾಗಿ ಯೂನಿಯನ್‌ನ ವಿವಿಧ ರಾಜ್ಯಗಳ ಹೈಕೋರ್ಟ್‌ಗಳು ಮತ್ತು ಇತರ ನ್ಯಾಯಾಲಯಗಳು ಮತ್ತು ನ್ಯಾಯಮಂಡಳಿಗಳ ತೀರ್ಪುಗಳ ವಿರುದ್ಧ ಮೇಲ್ಮನವಿಗಳನ್ನು ತೆಗೆದುಕೊಳ್ಳುತ್ತದೆ.

* ಇದು ನಾಗರಿಕರ ಮೂಲಭೂತ ಹಕ್ಕುಗಳನ್ನು ಕಾಪಾಡುತ್ತದೆ ಮತ್ತು ವಿವಿಧ ಸರ್ಕಾರಿ ಅಧಿಕಾರಿಗಳು ಮತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅಥವಾ ರಾಜ್ಯ ಸರ್ಕಾರಗಳು ಮತ್ತು ದೇಶದ ಮತ್ತೊಂದು ರಾಜ್ಯ ಸರ್ಕಾರದ ನಡುವಿನ ವಿವಾದಗಳನ್ನು ಬಗೆಹರಿಸುತ್ತದೆ.

* ಪ್ರಿವಿ ಕೌನ್ಸಿಲ್ ನ ನ್ಯಾಯಾಂಗ ಸಮಿತಿಯನ್ನು ಸುಪ್ರೀಂ ಕೋರ್ಟ್ 28 ಜನವರಿ 1950 ರಿಂದ ಮೇಲ್ಮನವಿ ಸಲ್ಲಿಸಿದೆ.

## ಏಪ್ರಿಲ್ 24 ರಾಷ್ಟ್ರೀಯ ಪಂಚಾಯತಿ ರಾಜ್ ದಿನ ಆಚರಣೆ




* ಪ್ರತಿ ವರ್ಷವು ಏಪ್ರಿಲ್ 24 ರಂದು ರಾಷ್ಟ್ರೀಯ ಪಂಚಾಯತಿ ರಾಜ್ ದಿನವನ್ನು ಆಚರಣೆ ಮಾಡಲಾಗುತ್ತದೆ.

* 2010ರ ಏಪ್ರಿಲ್ 24ರಂದು ಮೊದಲ ರಾಷ್ಟ್ರೀಯ

ಪಂಚಾಯತಿ ರಾಜ್ ದಿನವನ್ನು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಘೋಷಿಸಿದರು.

* 73ನೇ ಸಾಂವಿಧಾನಿಕ ತಿದ್ದುಪಡಿಯ ಮೂಲಕ 1993ರ ಏಪ್ರಿಲ್ 24 ಭಾರತದ ಪಂಚಾಯತಿ ರಾಜ್ ವ್ಯವಸ್ಥೆ ಜಾರಿಗೆ ತರಲಾಗಿದೆ.

* 2020ರ ರಾಷ್ಟ್ರೀಯ ಪಂಚಾಯತಿ ರಾಜ್ ದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾಮಿತ್ವಾ ಯೋಜನೆಯನ್ನು ಆರಂಭಿಸಿದರು.

* ಪ್ರಸ್ತುತ 2021ರ ರಾಷ್ಟ್ರೀಯ ಪಂಚಾಯತಿ ರಾಜ್ ಪ್ರಶಸ್ತಿಗಳಲ್ಲಿ 74,000ಕ್ಕೂ ಅಧಿಕ ಪಂಚಾಯಿತಿಗಳು ಭಾಗವಹಿಸಲಿವೆ.

* ಪ್ರಸ್ತುತ ದೇಶದಲ್ಲಿ 2.6 ಲಕ್ಷಕ್ಕೂ ಅಧಿಕ ಪಂಚಾಯಿತಿಗಳಿವೆ.

* ಬಲ್ವಂತ್ ರೈ ಸಮಿತಿಯು ಪಂಚಾಯತಿ ರಾಜ್ ವ್ಯವಸ್ಥೆಯನ್ನು ಸ್ಥಾಪಿಸಲು ಶಿಫಾರಸು ಮಾಡಿದೆ ಎಂದು ತಿಳಿಸಲಾಗಿದೆ. ಮನಮೋಹನ್ ಸಿಂಗ್ ರವರ ಬಗ್ಗೆ ಮಾಹಿತಿ :

* ಮನಮೋಹನ್ ಸಿಂಗ್ ಅವರು ಭಾರತೀಯ ಅರ್ಥಶಾಸ್ತ್ರಜ್ಞ, ಶೈಕ್ಷಣಿಕ ಮತ್ತು ರಾಜಕಾರಣಿಯಾಗಿದ್ದು, ಅವರು 2004 ರಿಂದ 2014 ರವರೆಗೆ ಭಾರತದ 13ನೇ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ.

* ಅಧಿಕಾರದಲ್ಲಿದ್ದ ಮೊದಲ ಸಿಖ್, ಜವಾಹರಲಾಲ್ ನೆಹರು ನಂತರ ಮೊದಲ ಅವಧಿ ಪೂರ್ಣಗೊಂಡ ಬಳಿಕ ಪುನರಾಯ್ಕೆಯಾದ ಪ್ರಧಾನ ಮಂತ್ರಿಯೂ ಆಗಿದ್ದಾರೆ.

* ಜನನ: 26 ಸೆಪ್ಟೆಂಬರ್ 1932 (ವಯಸ್ಸು 88 ವರ್ಷ),

* ಶಿಕ್ಷಣ: ಸೇಂಟ್ ಜಾನ್ಸ್ ಕಾಲೇಜು (1956 1957)

* ಹಿಂದಿನ ಕಚೇರಿಗಳು: ಭಾರತದ ಹಣಕಾಸು ಸಚಿವರು (2012–2012),

# 25-04-2021

## ಭಾರತಕ್ಕೆ ಆಕ್ಸಿಜನ್ ನೀಡಿದ ಸಿಂಗಪೂರ್ ಮತ್ತು ಸೌದಿ ಅರೇಬಿಯಾ



* ಭಾರತದಲ್ಲಿ ಕೋರೋಣ ಹಿನ್ನಲೆಯಿಂದ ಉಂಟಾಗುತ್ತಿರುವ ವೈದ್ಯಕೀಯ ಆಮ್ಲಜನಕದ ಕೊರತೆಯನ್ನು ಸರಿದೂಗಿಸಲು ಭಾರತ ಸರ್ಕಾರ ಬೇರೆ ಬೇರೆ ದೇಶಗಳ ಸಹಾಯವನ್ನೂ ಪಡೆಯಲು ಮುಂದಾಗಿದೆ.

* ಪ್ರಸ್ತುತ ಸಿಂಗಪೂರ್ ಭಾರತದ ರಾಷ್ಟ್ರ ರಾಜಧಾನಿ ದೆಹಲಿಗೆ ಸೇನಾ ವಿಮಾನಗಳನ್ನು ಮತ್ತು ರೈಲುಗಳನ್ನು ಬಳಸಿ ಆಕ್ಸಿಜನ್ ನೀಡುತ್ತಿದೆ.

* ಇದೇ ತರಹ ಸೌದಿ ಅರೇಬಿಯಾ 80 ಮೆಗಾ ಟನ್ ಲಿಕ್ವಿಡ್ ಆಕ್ಸಿಜನ್‌ಅನ್ನು ಅದಾನಿ ಗುಂಪು ಮತ್ತು ಲಿಂಡೆ ಕಂಪೆನಿಯ ಸಹಕಾರದೊಂದಿಗೆ ಹಡಗಿನ ಮೂಲಕ ಭಾರತಕ್ಕೆ ಕಳುಹಿಸಿದೆ ಎಂದು ತಿಳಿದು ಬಂದಿದೆ.

## ಭಾರತದ 551 ಕಡೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪನೆ



* ಭಾರತದಲ್ಲಿ ಕೊರೊನಾ ವೈರಸ್'ನ 2ನೇ ಅಲೆ ಅತಿ ಹೆಚ್ಚಾಗಿ ಹರಡುತ್ತಿರುವ ಹಿನ್ನಲೆಯಿಂದಾಗಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕ ಕೊರತೆ, ಐಸಿಯು, ವೆಂಟಿಲೇಟರ್ ಹೀಗೆ ಇನ್ನು ಹಲವು ವೈದ್ಯಕೀಯ ಕೊರತೆಗಳು ಉಂಟಾಗಿವೆ.

* ಪ್ರಧಾನಮಂತ್ರಿ ನರೇಂದ್ರ ಮೋದಿ ಭರವಸೆ ಮೇರೆಗೆ ಪ್ರಸ್ತುತ ಭಾರತ ದೇಶಾದ್ಯಂತ ವೈದ್ಯಕೀಯ ಆಮ್ಲಜನಕ ಕೊರತೆ ನೀಗಿಸುವ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲಾ ಹಂತದಲ್ಲೂ ಆಕ್ಸಿಜನ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಮುಂದಾಗಿದೆ ಎಂದು ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಟ್ವೀಟ್ ಮೂಲಕ ಮಾಹಿತಿಯನ್ನು

ನೀಡಿದ್ದಾರೆ.

* ಪಿಎಂ ಕೇರ್ ವತಿಯಿಂದ ಜಿಲ್ಲೆಯ ಪ್ರಮುಖ 551 ಕೇಂದ್ರಗಳಲ್ಲಿ ಆಕ್ಸಿಜನ್ ಘಟಕ ಸ್ಥಾಪಿಸಲು ಪಿಎಂ ಕೇರ್ಸ್ ನಿಧಿ ತಾತ್ವಿಕ ಅನುಮೋದನೆ ನೀಡಿದೆ, ಈ ಕಾರಣಕ್ಕೆ ಜನರು ಪ್ರಧಾನಿ ಮೋದಿ ಅವರಿಗೆ ಧನ್ಯವಾದ ತಿಳಿಸಿದ್ದಾರೆ.

* ಪ್ರಸ್ತುತ ಭಾರತದ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಜಿಲ್ಲಾ ಕೇಂದ್ರಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಘಟಕಗಳನ್ನು ಸ್ಥಾಪನೆ ಮಾಡಲಾಗುವುದು ಎಂದು ತಿಳಿಸಲಾಗಿದೆ.

## ಭಾರತ ಫ್ರಾನ್ಸ್ ಸಮರಾಭ್ಯಾಸ



* ಭಾರತ ಫ್ರಾನ್ಸ್ ದೇಶಗಳ ನೌಕಾ ಸೇನೆಗಳು ಮೂರು ದಿನಗಳ ಕಾಲ ಅರಬ್ಬೀ ಸಮುದ್ರದಲ್ಲಿ ಅತ್ಯಾಧುನಿಕ ನೌಕೆಗಳು, ಸಬ್ ಮರೀನ್ ನೌಕೆಗಳನ್ನು ಒಳಗೊಂಡು ಸಮರಾಭ್ಯಾಸ ನಡೆಸಲಿವೆ ಎಂದು ತಿಳಿದು ಬಂದಿದೆ.

* ಈ ಸಮರಾಭ್ಯಾಸ ಭಾರತೀಯ ನೌಕಾಪಡೆಗೆ ಬೆಂಬಲ ನೀಡುವ ಹಡಗು ದೀಪಕ್, ಕಲ್ವರಿ ದರ್ಜೆಯ ಜಲಾಂತರ್ಗಾಮಿ ನೌಕೆ ಮತ್ತು ಪಿ 8ಐ ಸಾಗರ ಗಸ್ತು ವಿಮಾನಗಳನ್ನು ನಿಯೋಜಿಸಲಿದೆ ಎಂದು ತಿಳಿಸಿದ್ದಾರೆ.

* ಫ್ರಾನ್ಸ್ ನೌಕಾಪಡೆಯಿಂದ ವಿಮಾನ ವಾಹಕವಾಗಿರುವ ಚಾರ್ಲ್ಸ್ ಡಿ ಗಾಲ್ ರಫೇಲ್ ಎಂ ಯುದ್ಧ ವಿಮಾನಗಳು ಮತ್ತು E2C ಹಾಕೀ ವಿಮಾನ ಮತ್ತು ಹೆಲಿಕಾಪ್ಟರ್'ಗಳ ಕೈಮನ್ ಎಂ ಹಾಗೂ ದಾಫಿನ್ ನಿಯೋಜನೆ ಮಾಡಲಾಗುವದು ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ಎರಡು ದೇಶಗಳು ಸಾಗರ ಕ್ಷೇತ್ರದಲ್ಲಿ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಕಾಪಾಡಲು ಮತ್ತು ಉತ್ತೇಜನ ನೀಡಲು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಈ ನೌಕಾಪಡೆಗಳು ಸಮರಾಭ್ಯಾಸ ನಡೆಸುತ್ತಿವೆ ಎಂದು ಭಾರತೀಯ ನೌಕಾಪಡೆಯ ವಕ್ತಾರ ಕಮಾಂಡರ್ ವಿವೇಕ್ ಮಧ್ವಾಲ್ ತಿಳಿಸಿದರು.

## ಎನ್.ವಿ.ರಮಣ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕಾರ



* ಭಾರತದ 48ನೇ ಮುಖ್ಯ ನ್ಯಾಯಮೂರ್ತಿಯಾಗಿ ಎನ್ .ವಿ. ರಮಣ ಅವರು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಂದ ಪ್ರಮಾಣ ವಚನ ಸ್ವೀಕಾರ ಮಾಡಿದರು.

* ಏಪ್ರಿಲ್ 23ರಂದು ಮುಖ್ಯ ನ್ಯಾಯಮೂರ್ತಿ ಶರದ್ ಅರವಿಂದ್ ಬೊಬ್ಡೆ ಅವರ ಅಧಿಕಾರ ಮುಕ್ತಾಯವಾದ ಹಿನ್ನಲೆಯಿಂದಾಗಿ ಎನ್.ವಿ. ರಮಣ ಅವರನ್ನು ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ.

* ಪ್ರಸ್ತುತ ಇವರು ಆಂಧ್ರ ಪ್ರದೇಶ ಹೈಕೋರ್ಟ್‌ನಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಆಯ್ಕೆಯಾದ ಮೊದಲ ನ್ಯಾಯಮೂರ್ತಿಯಾಗಿದ್ದಾರೆ.

* ಎನ್.ವಿ. ರಮಣ ಅವರು 1983ರಲ್ಲಿ ವಕೀಲ ವೃತ್ತಿಯನ್ನು ಪ್ರಾಂಭಿಸಿದರು ಮತ್ತು 2000ರಲ್ಲಿ ಆಂಧ್ರಪ್ರದೇಶ ಹೈಕೋರ್ಟ್‌ನ ಖಾಯಂ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ.

## ಫ್ರಾನ್ಸ್'ನಿಂದ ಭಾರತದಲ್ಲಿ ವಿಶ್ವದ ಅತಿ ದೊಡ್ಡ ಪರಮಾಣು ಘಟಕ ನಿರ್ಮಾಣ




* ಫ್ರಾನ್ಸ್ ವಿಶ್ವದ ಅತಿ ದೊಡ್ಡ ಪರಮಾಣು ಘಟಕವನ್ನು ಭಾರತದಲ್ಲಿ ನಿರ್ಮಿಸಲಿದೆ ಎಂದು ಫ್ರಾನ್ಸ್'ನ ವಿದ್ಯುತ್ ಸಮೂಹ ಸಂಸ್ಥೆ ಇಡಿಎಫ್ ಮಾಹಿತಿಯನ್ನು ಬಹಿರಂಗ ಪಡಿಸಿದೆ.

* ಭಾರತದಲ್ಲಿ ಇಡಿಎಫ್ ಸಂಸ್ಥೆಯು ನಿರ್ಮಿಸುತ್ತಿರುವ ಈ ಪರಮಾಣು ಘಟಕವು ಸರಿ ಸುಮಾರು 10GW ನಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ ಎಂದು ಈ ಸಂಸ್ಥೆ ತಿಳಿಸಿದೆ.

* ವಿಶ್ವದ ಅತಿ ದೊಡ್ಡ ಪರಮಾಣು ಘಟಕದ ಯೋಜನೆಯು ಭಾರತದ ಮಹಾರಾಷ್ಟ್ರ ರಾಜ್ಯದ ಜೈತಾಪುರದಲ್ಲಿ ನಿರ್ಮಾಣವಾಗಲಿದೆ ಎಂದು ತಿಳಿಸಲಾಗಿದೆ.

* ಈ ಪರಮಾಣು ಘಟಕದ ನಿರ್ಮಾಣದ ಕಾರ್ಯ ಪೂರ್ಣಗೊಳ್ಳಲು15 ವರ್ಷಗಳ ಕಾಲ ಬೇಕಾಗುತ್ತದೆ.

* ಪ್ರಸ್ತುತ ಪರಮಾಣು ಘಟಕದ ಯೋಜನೆ ಪೂರ್ಣಗೊಳ್ಳುವದಕ್ಕಿಂತ ಮುಂಚಿತವಾಗಿ 10 GW ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭ ಮಾಡಲಾಗುವದು ಎಂದು ತಿಳಿಸಿದೆ, ಹಾಗೂ ಈ ವಿದ್ಯುತ್'ನಿಂದ 70 ಮಿಲಿಯನ್ ಮನೆಗಳಿಗೆ ವಿದ್ಯುತ್ ಕಲ್ಪಿಸಲಾಗುವದು ಎಂದು ಸಂಸ್ಥೆ ಮಾಹಿತಿಯನ್ನು ನೀಡಿದೆ.

### ವಿಶ್ವ ಮಲೇರಿಯಾ ದಿನ ಆಚರಣೆ




* ವಿಶ್ವ ಆರೋಗ್ಯ ಸಂಸ್ಥೆಯು ವಿಶ್ವ ಮಲೇರಿಯಾ ದಿನವನ್ನು ಪ್ರತಿ ವರ್ಷ ಏಪ್ರಿಲ್ 25ರಂದು ಆಚರಿಸಲಾಗುತ್ತದೆ ಹಾಗೂ ಈ ವರ್ಷ ವಿಶ್ವ ಮಲೇರಿಯಾ ದಿನವನ್ನು ಜೀರೋ ಮಲೇರಿಯಾ ಗುರಿ ಎಂಬ ವಿಷಯದ ಅಡಿಯಲ್ಲಿ ಆಚರಣೆ ಮಾಡಲಾಗಿದೆ.

* ವಿಶ್ವ ಮಲೇರಿಯಾ ದಿನವನ್ನು ವಿಶ್ವ ಆರೋಗ್ಯ ಅಸೆಂಬ್ಲಿಯ 60ನೇ ಅಧಿವೇಶನದ ಮೂಲಕ ಸ್ಥಾಪಿಸಲಾಗಿದೆ ಈ ಮೊದಲು ಈ ದಿನವನ್ನು ಆಫ್ರಿಕನ್ ಮಲೇರಿಯಾ ದಿನ ಎಂದು ಕರೆಯುತ್ತಿದ್ದರು.

* ಮಲೇರಿಯಾ ರೋಗವು ಹೆಣ್ಣು ಅನಾಫಿಲಿಸ್ ಸೊಳ್ಳೆಯ ಕಚ್ಚುವದರಿಂದ ಮನುಷ್ಯರಿಗೆ ಹರಡುತ್ತದೆ.

* ವಿಶ್ವ ಆರೋಗ್ಯ ಸಂಸ್ಥೆಯು ಅಧಿಕೃತ 11 ಸಾರ್ವಜನಿಕ ಆರೋಗ್ಯ ಅಭಿಯಾನಗಳನ್ನು ಆಚರಣೆ ಮಾಡುತ್ತದೆ, ಅವುಗಳು ವಿಶ್ವ ಮಲೇರಿಯಾ ದಿನ, ವಿಶ್ವ ಏಡ್ಸ್ ದಿನ, ವಿಶ್ವ ಹೆಪಟೈಟಿಸ್ ದಿನ, ವಿಶ್ವ ತಂಬಾಕು ರಹಿತ ದಿನ, ವಿಶ್ವ ಚಾಗಸ್ ರೋಗ ದಿನ, ವಿಶ್ವ ಕ್ಷಯರೋಗ ದಿನ, ವಿಶ್ವ ರೋಗಿಗಳ ಸುರಕ್ಷತಾ ದಿನ, ವಿಶ್ವ ರಕ್ತದಾನಿಗಳ ದಿನ, ವಿಶ್ವ ಆರೋಗ್ಯ ದಿನ, ಹಾಗೂ ವಿಶ್ವ ಆಂಟಿಮೈಕ್ರೊಬಿಯಲ್ ಜಾಗೃತಿ ವಾರ ಎಂಬ ಸಾರ್ವಜನಿಕ ಆರೋಗ್ಯ ಅಭಿಯಾನಗಳನ್ನು ಆಚರಿಸುತ್ತದೆ.

ಮಲೇರಿಯಾ ನಿರ್ಮೂಲನೆಗೆ ರಾಷ್ಟ್ರೀಯ ಕಾರ್ಯತಂತ್ರದ ಯೋಜನೆ :

* 2020ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮಾಹಿತಿ ನೀಡಿರುವ ಪ್ರಕಾರ 116 ಭಾರತೀಯ ಜಿಲ್ಲೆಗಳಲ್ಲಿ ಶೂನ್ಯ ಮಲೇರಿಯಾ ಪ್ರಕರಣಗಳು ವರದಿಯಾಗಿವೆ ಎಂದು ತಿಳಿಸಿದೆ.

## 27-04-2021

### ರಫೆಲ್ ನಡಾಲ್ ಗೆ ಬಾರ್ಸಿಲೋನಾ ಓಪನ್ ಟೆನಿಸ್ ಪ್ರಶಸ್ತಿ



* 2021ನೇ ಸಾಲಿನ ಬಾರ್ಸಿಲೋನಾ ಓಪನ್ ಟೆನಿಸ್ ಪ್ರಶಸ್ತಿಯನ್ನು ರಫೆಲ್ ನಡಾಲ್ ಅವರು ಪಡೆದುಕೊಂಡಿದ್ದಾರೆ. ಹಾಗೂ ರಫೆಲ್ ನಡಾಲ್ ಅವರಿಗೆ ಇದು 12ನೇ ಪ್ರಶಸ್ತಿಯಾಗಿದೆ.

* ಬಾರ್ಸಿಲೋನಾ ಓಪನ್ ಟೆನಿಸ್ ಫೈನಲ್‌ನಲ್ಲಿ ಗ್ರೀಕ್‌ನ ಸ್ಟೆಫನೋಸ್ ಸಿಸಿಪಸ್ ಅವರನ್ನು ರಫೆಲ್ ನಡಾಲ್ ಅವರು 7 5 ಅಂತರದಿಂದ ಸೋಲಿಸಿದ್ದಾರೆ.

* ಈ ಹಿಂದೆ ಅಂದರೆ ಫೆಬ್ರುವರಿ ತಿಂಗಳಿನಲ್ಲಿ ನಡೆಡಿರುವ ಆಸ್ಟ್ರೇಲಿಯನ್ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಸಿಸಿಪಸ್ ವಿರುದ್ಧ ರಫೆಲ್ ನಡಾಲ್ ಸೋಲು ಅನುಭವಿಸಿದ್ದರು ಇದೀಗ ಆ ಸೋಲಿಗೆ ಉತ್ತರ ನೀಡಿದ್ದಾರೆ ಎನ್ನಲಾಗಿದೆ.

* ರಫೆಲ್ ನಡಾಲ್ ಅವರು 2021ರಲ್ಲಿ ಪಡೆದ ಮೊದಲ ಟೆನಿಸ್ ಪ್ರಶಸ್ತಿ ಇದಾಗಿದೆ. ರಫೆಲ್ ನಡಾಲ್ ರವರ ಬಗ್ಗೆ ಮಾಹಿತಿ:

* ರಾಫೆಲ್ "ರಾಫಾ" ನಡಾಲ್ ಪರೇರಾ ಸ್ಪ್ಯಾನಿಷ್ ವೃತ್ತಿಪರ ಟೆನಿಸ್ ಆಟಗಾರ. ಅಸೋಸಿಯೇಷನ್ ಆಫ್ ಟೆನಿಸ್ ಪ್ರೊಫೆಷನಲ್ಸ್ ಅವರು ವಿಶ್ವ ನಂ .2 ಸ್ಥಾನದಲ್ಲಿದ್ದಾರೆ, 209 ವಾರಗಳವರೆಗೆ ಎಟಿಪಿಶ್ರೇಯಾಂಕದಲ್ಲಿ ನಂ .1 ಸ್ಥಾನದಲ್ಲಿದ್ದಾರೆ ಮತ್ತು ವರ್ಷಾಂತ್ಯದ ನಂ 1 ಸ್ಥಾನದಲ್ಲಿ ಐದು ಬಾರಿ ಸ್ಥಾನ ಪಡೆದಿದ್ದಾರೆ.

*ಜನನ: 3 ಜೂನ್ 1986 (ವಯಸ್ಸು 34 ವರ್ಷ),

ಮನಕೋರ್, ಸ್ಪೇನ್

*ಗ್ರ್ಯಾಂಡ್ ಸ್ಲ್ಯಾಮ್ಸ್ ಗೆದ್ದರು (ಸಿಂಗಲ್ಸ್): 20
*ಎತ್ತರ: 1.85 ಮೀ
*ರಾಷ್ಟ್ರೀಯತೆ: ಸ್ಪ್ಯಾನಿಷ್
*ಶೀರ್ಷಿಕೆಗಳು: ಫ್ರೆಂಚ್ ಓಪನ್, ಮೆಕ್ಸಿಕನ್ ಓಪನ್

## ಬಾಂಗ್ಲಾ ಭಾರತ ದೇಶಗಳ ಗಡಿ ಬಂದ್



* ಭಾರತದಲ್ಲಿ ಕೊರೋನ ವೈರಸ್'ನ ಎರಡನೇ ಅಲೆ ಅತೀ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಿಂದಾಗಿ ಬಾಂಗ್ಲಾ ದೇಶವು ಭಾರತದೊಂದಿಗೆ ಹಂಚಿಕೊಂಡಿರುವ ಗಡಿಯನ್ನು 14 ದಿನಗಳ ಕಾಲ ಸ್ಥಗಿತಗೊಳಿಸಲು ನಿರ್ಧರಿಸಿದೆ.

* ಬಾಂಗ್ಲಾದೇಶದ ಗೃಹ ಸಚಿವ ಅಸಾದುಝ ಮಾನ್ ಖಾನ್ ಅವರು ಭಾರತದಿಂದ ಬರುವ ಪ್ರಜೆಗಳಿಗೆ 14 ದಿನಗಳ ಕಾಲ ನಿಷೇಧ ಹೇರಲಾಗುತ್ತಿದೆ ಎಂದು ಸುದ್ದಿವಾಹಿನಿಗೆ ಮಾಹಿತಿಯನ್ನು ನೀಡಿದ್ದಾರೆ.

## ಗೂಗಲ್ ಸಂಸ್ಥೆಯಿಂದ ಭಾರತಕ್ಕೆ 135 ಕೋಟಿ ರೂ ನೆರವು ಘೋಷಣೆ




* ಭಾರತ ದೇಶದಾದ್ಯಂತ ಕೊರೊನಾ ವೈರಸ್ ಅಟ್ಟಹಾಸ ಮಿತಿಮೀರುತ್ತಿದೆ ಈ ಕಾರಣದಿಂದಾಗಿ ಎಲ್ಲ ಆಸ್ಪತ್ರೆಗಳಲ್ಲಿ ಹಾಸಿಗೆ, ವೆಂಟಿಲೇಟರ್, ಆಕ್ಸಿಜನ್ ಕೊರತೆ ಹೀಗೆ ಇನ್ನು ಹಲವಾರು ಸಮಸ್ಯೆಗಳು ಎದುರಾಗುತ್ತಿವೆ. ಪ್ರಸ್ತುತ ಗೂಗಲ್ ಸಂಸ್ಥೆ ಭಾರತಕ್ಕೆ 135 ಕೋಟಿ ರೂ. ನೆರವು ಘೋಷಣೆ ಮಾಡಿದೆ.

* ಪ್ರಸ್ತುತ ಗೂಗಲ್ ಕಂಪನಿಯು ತನ್ನ ಕೇಂದ್ರ ಕಚೇರಿಯನ್ನು ಅಮೇರಿಕಾದಲ್ಲಿ ಹೊಂದಿದೆ.

* ಭಾರತಕ್ಕೆ 135 ಕೋಟಿ ರೂಪಾಯಿ ಹಣವನ್ನ ದೇಣಿಗೆ ರೂಪದಲ್ಲಿ ನೆರವು ನೀಡಲಾಗಿತ್ತಿದೆ ಎಂದು ಗೂಗಲ್ ಸಂಸ್ಥೆಯ ಸಿಇಓ ಸುಂದರ್ ಪಿಚೈ ತಿಳಿಸಿದ್ದಾರೆ.

* ಗೂಗಲ್ ಸಂಸ್ಥೆಯ ನೀಡುತ್ತಿರುವ ದೇಣಿಗೆಯಲ್ಲಿ ಗೂಗಲ್ ಕಂಪನಿಯ 900 ಉದ್ಯೋಗಿಗಳ 3.7 ಕೋಟಿ ರೂ ಹಣ ಕೂಡ ಇದೆ ಎಂದು ಸಂಸ್ಥೆ ಮಾಹಿತಿಯನ್ನು ನೀಡಿದೆ.

## 2021ನೇ ಸಾಲಿನ ಆಸ್ಕರ್ ಪ್ರಶಸ್ತಿ ಕಾರ್ಯಕ್ರಮ




* 2021ನೇ ಸಾಲಿನ ಪ್ರತಿಷ್ಠಿತ ಆಸ್ಕರ ಪ್ರಶಸ್ತಿ ಕಾರ್ಯಕ್ರಮವು ಲಾಸ್ ಆಂಜಲೀಸ್‌ನಲ್ಲಿ ಇತ್ತೀಚಿಗೆ ಜರುಗಿದೆ.

* 2021ನೇ ಸಾಲಿನ ಅತ್ಯುತ್ತ ಚಿತ್ರದ ಆಸ್ಕರ್ ಪ್ರಶಸ್ತಿಯನ್ನು ನೋಮ್ಯಾಡ್ ಲ್ಯಾಂಡ್ ಚಿತ್ರವು ಪಡೆದುಕೊಂಡಿದೆ.

* ಆಂಟೋನಿ ಹಾಪ್ಕಿನ್ಸ್ ನಟಿಸಿರುವ ದಿ ಫಾದರ್ ಚಿತ್ರದ ನಟನೆಗಾಗಿ ಅತ್ಯುತ್ತಮ ನಟ ಪ್ರಶಸ್ತಿ ಹಾಗೂ ಫ್ರಾನ್ಸಸ್ ಮ್ಯಾಕ್ ಡೋರ್ಮಂಡ್ ಅವರಿಗೆ ನೋಮ್ಯಾಡ್ ಲ್ಯಾಂಡ್ ಚಿತ್ರದ ನಟನೆಗಾಗಿ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

* ನೋಮ್ಯಾಡ್ ಲ್ಯಾಂಡ್ ಚಿತ್ರದ ನಿರ್ದೇಶನಕ್ಕಾಗಿ ಕೋಯಿ ಜಾವ್ ಅವರು ಆಸ್ಕರ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ, ಮೂಲತಃ ಇವರು ಚೀನಾದವರಾಗಿದ್ದು, ಹಾಗೂ ಈ ಆಸ್ಕರ್ ಪ್ರಶಸ್ತಿ ಪಡೆದ ಏಷ್ಯಾದ ಮೊದಲ ನಿರ್ದೇಶಕಿಯಾಗಿ ಹೊರ ಹೊಮ್ಮಿದ್ದಾರೆ.

* ಆಸ್ಕರ್ ಪ್ರಶಸ್ತಿ ವಿತರಣಾ ಕಾರ್ಯಕ್ರಮದಲ್ಲಿ ಪ್ರತೀ ವರ್ಷ ನಿಧನರಾಗುವ ಜನಪ್ರಿಯ ಸೆಲೆಬ್ರಿಟಿಗಳನ್ನು ನೆನಪಿಸಿಕೊಳ್ಳಲಾಗುತ್ತದೆ, ಕಳೆದ ವರ್ಷ ನಿಧನರಾದ ಇರ್ಫಾನ್ ಖಾನ್ ಮತ್ತು ಭಾನು ಅಥಯ್ಯ ಅವರನ್ನು ಇನ್ ಮೆಮೋರಿಯಮ್ ಎಂಬ ವಿಭಾಗದಲ್ಲಿ ನೆನಪಿಸಿಕೊಂಡಿದ್ದಾರೆ.

* ಗಾಂಧಿ ಚಿತ್ರದ ವಸ್ತ್ರ ವಿನ್ಯಾಸ ಮಾಡಿದ್ದಕ್ಕಾಗಿ ಭಾನು ಅಥಯ್ಯ ಅವರಿಗೆ ಪ್ರಶಸ್ತಿ ಲಿಬಿಸಿದೆ ಈ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯರಾಗಿದ್ದಾರೆ.

## ಏಪ್ರಿಲ್ ಕೊನೆಯ ವಾರ : ವಿಶ್ವ ರೋಗನಿರೋಧಕ ವಾರ




* ಪ್ರತಿ ವರ್ಷ ಏಪ್ರಿಲ್ ಕೊನೆಯ ವಾರದಲ್ಲಿ ವಿಶ್ವ ರೋಗನಿರೋಧಕ ವಾರ ಆಚರಣೆ ಮಾಡಲಾಗುತ್ತದೆ.

* 2021ರ ವಿಶ್ವ ರೋಗನಿರೋಧಕ ವಾರವನ್ನು ಲಸಿಕೆಗಳು ನಮ್ಮನ್ನು ಹತ್ತಿರಕ್ಕೆ ಎಂಬ ವಿಷಯದ ಅಡಿಯಲ್ಲಿ ಆಚರಿಸಲಾಗುತ್ತಿದೆ.

* COVID 19 ಸಮಯದಲ್ಲಿ ಜಗತ್ತಿನಲ್ಲಿ 20 ದಶಲಕ್ಷಕ್ಕೂ ಹೆಚ್ಚು ಮಕ್ಕಳು ದಡಾರ ಮತ್ತು ಪೋಲಿಯೊ ಲಸಿಕೆ ಹಾಕಿಸಿಕೊಳ್ಳುವದನ್ನು ತಪ್ಪಿಸಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

* COVAXIN ಮತ್ತು COVISHIELD ಇವುಗಳು COVID 19 ಲಸಿಕೆಗಳಾಗಿವೆ ಈ ಲಸಿಕೆಗಳು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಕೊರೋಣ ವೈರಸ್ ವಿರುದ್ಧ ಹೋರಾಡಲು ವ್ಯಕ್ತಿಗಳಿಗೆ ಶಕ್ತಿಯನ್ನು ನೀಡುತ್ತದೆ.

## ಭಾರತೀಯ ಸೇನೆಯಿಂದ ಲಡಾಖ್ ಇಗ್ನಿಟೆಡ್ ಮೈಂಡ್ಸ್ ಯೋಜನೆ ಪ್ರಾರಂಭ



* ಭಾರತೀಯ ಸೇನೆಯು ಲಡಾಖ್'ನ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅವಕಾಶಗಳನ್ನು ನೀಡುವ ಸಲುವಾಗಿ ಇಗ್ನಿಟೆಡ್ ಮೈಂಡ್ಸ್ ಯೋಜನೆಯನ್ನು ಆರಂಭಿಸಿದೆ.

* ಭಾರತೀಯ ಸೇನೆಯು ಪ್ರಾರಂಭಿಸಿರುವ ಈ ಯೋಜನೆಗೆ HPCL (ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್) ಹಾಗೂ ಕಾನ್ಪುರ ಮೂಲದ NGO ರಾಷ್ಟ್ರೀಯ ಸಮಗ್ರತೆ ಮತ್ತು ಶೈಕ್ಷಣಿಕ ಅಭಿವೃದ್ಧಿ ಸಂಸ್ಥೆಗಳು ಈ ಯೋಜನನೆಯ ಒಪ್ಪಂದಕ್ಕೆ ಲೇಹ್‌ನಲ್ಲಿ ಸಹಿ ಹಾಕಿವೆ ಎಂದು ತಿಳಿದು ಬಂದಿದೆ.

* ಭಾರತೀಯ ಸೇನೆಯು ಆರಂಭಿಸಿರುವ ಯೋಜನೆಯಿಂದಾಗಿ ಕಾರ್ಗಿಲ್ ಹಾಗೂ ಲೇಹ್ ಜಿಲ್ಲೆಗಳ 45 ವಿದ್ಯಾರ್ಥಿಗಳಿಗೆ JEE ಮತ್ತು NEET ಪ್ರವೇಶ ಪರೀಕ್ಷೆಗಳಿಗೆ ತರಬೇತಿ ನೀಡಲಿದೆ.

* ಲಡಾಕ್‌ನಲ್ಲಿ ಮೊದಲ ಭೂಶಾಖದ ವಿದ್ಯುತ್ ಯೋಜನೆಯನ್ನು ತೈಲ ಮತ್ತು ನೈಸರ್ಗಿಕ ಅನಿಲ ನಿಗಮ ಸ್ಥಾಪನೆ ಮಾಡಲಿದೆ.

* ಲಡಾಖ್'ಅನ್ನು ಲಾಮಾ ಲ್ಯಾಂಡ್ ಅಥವಾ ಲಿಟಲ್ ಟಿಬೆಟ್ ಎಂದು ಕರೆಯಲಾಗುತ್ತದೆ.

* ಭಾರತದ ಇತರ ಪ್ರದೇಶಗಳಿಗೆ ಹೋಲಿಸಿದಂತೆ ಲಡಾಖ್'ನಲ್ಲಿ ಹೆಚ್ಚಿನ ಸೌರ ವಿಕಿರಣ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಉತ್ಪಾದಿಸಲು ಉತ್ತಮವಾದ ಪ್ರದೇಶವಾಗಿದೆ. ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್ (HPCL) ಬಗ್ಗೆ ಮಾಹಿತಿ :

* ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್ ತೈಲ ಮತ್ತು ನೈಸರ್ಗಿಕ ಅನಿಲ ನಿಗಮದ ಅಂಗಸಂಸ್ಥೆಯಾಗಿದ್ದು, ಇದರ ಪ್ರಧಾನ ಕಚೇರಿ ಮಹಾರಾಷ್ಟ್ರದ ಮುಂಬೈನಲ್ಲಿದೆ. ಇದು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಭಾರತದಲ್ಲಿ 25% ಮಾರುಕಟ್ಟೆ ಪಾಲನ್ನು ಹೊಂದಿದೆ ಮತ್ತು ಬಲವಾದ ಮಾರುಕಟ್ಟೆ ಮೂಲಸೌಕರ್ಯವನ್ನು ಹೊಂದಿದೆ.

* ಷೇರು ಬೆಲೆ: HINDPETRO (NSE) ₹233.10 +0.60 (+ 0.26%)
* ಪ್ರಧಾನ ಕಚೇರಿ: ಮುಂಬೈ
* ಸಿಇಒ: ಮುಖೇಶ್ ಕುಮಾರ್ ಸುರಾನಾ (1 ಏಪ್ರಿಲ್ 2016)
* ಅಧ್ಯಕ್ಷರು: ಮುಖೇಶ್ ಕುಮಾರ್ ಸುರಾನಾ
* ಪೋಷಕ ಸಂಸ್ಥೆ: ತೈಲ ಮತ್ತು ನೈಸರ್ಗಿಕ ಅನಿಲ ನಿಗಮ
* ಅಂಗಸಂಸ್ಥೆಗಳು: ಎಚ್‌ಪಿಸಿಎಲ್ ಜೈವಿಕ ಇಂಧನ ಲಿಮಿಟೆಡ್

## ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾದಲ್ಲಿ ಅಂಜಾಕ್ (ANZAC) ದಿನ ಆಚರಣೆ




* ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಲ್ಲಿ ಪ್ರತಿ ವರ್ಷ ಏಪ್ರಿಲ್ 25ರಂದು ಅಂಜಾಕ್ ದಿನವನ್ನು ಆಚರಣೆ ಮಾಡಲಾಗುತ್ತದೆ.

* ಅಂಜಾಕ್ ದಿನವನ್ನು ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾಯುದ್ಧಗಳು, ಘರ್ಷಣೆಗಳು ಮತ್ತು ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಮರಣ ಹೊಂದಿದವರಿಗಾಗಿ ರಾಷ್ಟ್ರೀಯ ಸ್ಮರಣಾರ್ಥ ದಿನವಾಗಿ ಆಚರಣೆ ಮಾಡುತ್ತಾರೆ.

* ಪ್ರಸ್ತುತ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾದ ಗ್ಯಾಲಿಪೋಲಿ ಅಭಿಯಾನದಲ್ಲಿ ಸೇವೆ ಸಲ್ಲಿಸಿರುವ ಸೇನೆಗಳ ಸದಸ್ಯರನ್ನು ಗೌರವಿಸುವ ಸಲುವಾಗಿ ಈ ದಿನವನ್ನು ಆಯೋಜಿಸಲಾಗಿದೆ.

* ಗಲ್ಲಿಪೋಲಿ ಅಭಿಯಾವು ಮೊದಲ ಮಹಾಯುದ್ಧದ ಮೊದಲ ಮಿಲಿಟರಿ ಕಾರ್ಯಾಚರಣೆಯಾಗಿದೆ, ಇದು 1915 ಮತ್ತು 1916ರ ಮಧ್ಯೆ ನಡೆದಿದೆ. ಆಸ್ಟ್ರೇಲಿಯಾ ದೇಶದ ಬಗ್ಗೆ ಮಾಹಿತಿ :

* ಆಸ್ಟ್ರೇಲಿಯಾ ಅತಿದೊಡ್ಡ ದೇಶ ಮತ್ತು ಒಟ್ಟು ವಿಸ್ತೀರ್ಣದಿಂದ ವಿಶ್ವದ ಆರನೇ ಅತಿದೊಡ್ಡ ದೇಶವಾಗಿದೆ.

* ಪ್ರಧಾನಿ: ಸ್ಕಾಟ್ ಮಾರಿಸನ್ ಟ್ರೆಂಡಿಂಗ್
* ರಾಜಧಾನಿ: ಕ್ಯಾನ್ಬೆರಾ
* ಡಯಲಿಂಗ್ ಕೋಡ್: +61
* ಅಧಿಕೃತ ಭಾಷೆಗಳು: ಫೆಡರಲ್ ಮಟ್ಟದಲ್ಲಿ ಯಾವುದೂ ಇಲ್ಲ
*ಜನಸಂಖ್ಯೆ:2.54ಕೋಟಿ(2019)

# 28-04-2021

## ಕೋವಿಡ್ 19 2ನೇ ಅಲೆ: ಭಾರತಕ್ಕೆ ನೆರವು ನೀಡಿದ ವಿವಿಧ ದೇಶಗಳು ಮತ್ತು ಪ್ರಮುಖರು




* ಭಾರತದಲ್ಲಿ ಕೋವಿಡ್ 19 ವೈರಸ್ಸ'ನ 2ನೇ ಅಲೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಿಂದಾಗಿ ಫ್ರಾನ್ಸ್ ಸರ್ಕಾರದ ಅಧ್ಯಕ್ಷ ಎಮ್ಯಾನ್ಯುಯೆಲ್ ಮ್ಯಾಕ್ರಾನ್ ಭಾರತಕ್ಕೆ ಅತ್ಯಾಧುನಿಕ ವೆಂಟಿಲೇಟರ್ ಮತ್ತು ಹಲವು ವೈದ್ಯಕೀಯ ನೆರವು ನೀಡುವದಾಗಿ ಘೋಷಣೆ ಮಾಡಿದ್ದಾರೆ.

* ಈ ಮೊದಲು ಅಮೆರಿಕ, ಬ್ರಿಟನ್ ದೇಶಗಳು ಭಾರತಕ್ಕೆ ನೆರವು ನೀಡುವದಾಗಿ ಭರವಸೆ ನೀಡಿದ್ದವು ಇದೀಗ ಫ್ರಾನ್ಸ್ ದೇಶವು ಕೂಡ ಭಾರತದ ಸಹಾಯಕ್ಕೆ ನಿಂತಿದೆ.

* ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯೆಲ್ ಮ್ಯಾಕ್ರಾನ್ ಭಾರತಕ್ಕೆ 8 ಆಮ್ಲಜನಕ ಉತ್ಪಾದನೆ ಮಾಡುವ ಪರಿಕರಗಳು, ಆಕ್ಸಿಜನ್ ಹಾಗೂ ದ್ರವೀಕೃತ ಆಮ್ಲಜನಕ ಇರುವ ಕಂಟೇನರ್‌ಗಳು, 200 ಎಲೆಕ್ಟ್ರಿಕ್ ಸಿರೆಂಜ್ ಪಂಪ್, ವೆಂಟಿಲೇಟರ್, ಕೃತಕ ಉಸಿರಾಟದ ಪರಿಕರಗಳು ಹಾಗೂ ಔಷಧಿ ಸಾಮಗ್ರಿಗಳನ್ನು ನೀಡಲಿದ್ದೇವೆ ಎಂದು ತಿಳಿಸಿದ್ದಾರೆ.

* ರಷ್ಯಾ ದೇಶದ ಸ್ಪುಟ್ನಿಕ್ ವಿ ಲಸಿಕೆಗಳು ಮೇ 1ರಂದು ಭಾರತಕ್ಕೆ ತಲುಪಲಿವೆ ಎಂದು ತಿಳಿಸಿದ್ದಾರೆ.

* ಒಂದು ಡೋಸ್ ಸ್ಪುಟ್ನಿಕ್ ವಿ ಲಸಿಕೆಯ ಬೆಲೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 10 ಡಾಲರ್ ಗಿಂತ ಕಡಿಮೆ ಇದೆ ಎಂದು ತಿಳಿಸಿದ್ದಾರೆ.

* ಆಸ್ಟ್ರೇಲಿಯಾ ಕ್ರಿಕೆಟ್ ಆಟಗಾರ ಬ್ರೆಟ್ ಲೀ ಭಾರತದಲ್ಲಿ ಆಮ್ಲಜನಕ ಪೂರೈಕೆಗಾಗಿ ಕ್ರಿಪ್ಟೋ ಪರಿಹಾರ ನಿಧಿಗೆ '41 ಲಕ್ಷ' ದೇಣಿಗೆ ನೀಡಿದ್ದಾರೆ.

* ಮತ್ತೊಬ್ಬ ಆಸ್ಟ್ರೇಲಿಯಾ ಕ್ರಿಕೆಟ್ ಆಟಗಾರ ಪ್ಯಾಟ್ ಕಮ್ಮಿನ್ಸ್ ಅವರು ಪಿಎಂ ಕೇರ್ಸ್ ಪರಿಹಾರ ನಿಧಿಗೆ 50,000 ಅಮೆರಿಕನ್ ಡಾಲರ್ ದೇಣಿಗೆ ನೀಡಿದ್ದಾರೆ. ಫ್ರಾನ್ಸ್ ಸರ್ಕಾರದ ಬಗ್ಗೆ ಮಾಹಿತಿ :

* ಫ್ರಾನ್ಸ್ ಪಶ್ಚಿಮ ಯೂರೋಪಿನಲ್ಲಿರುವ ದೇಶ. ಇದು ಯುರೋಪ್ ಖಂಡದ ಮೂರನೆಯ ಅತ್ಯಂತ ದೊಡ್ಡ ದೇಶ. ಇದು ಯುರೋಪಿನ ಒಂದು ಬಲಾಢ್ಯ ದೇಶವಾಗಿದೆ. ಇದು ಪ್ರಪಂಚದ ಹಲವೆಡೆ ತನ್ನ ವಸಾಹತುಗಳನ್ನು ಸ್ಥಾಪಿಸಿ ಹತ್ತಂಭತ್ತನೆಯ ಶತಮಾನ ಮತ್ತು 20ನೆಯ ಶತಮಾನದ ಮೊದಲ ಭಾಗದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿತ್ತು.

* ಫ್ರಾನ್ಸ್ ಅಧಿಕೃತವಾಗಿ ರೇಪಬ್ಲೀಕ್ ಫ್ರಾನ್ಸೇಸ್. ಪಶ್ಚಿಮ ಯುರೋಪಿನ ಗಣರಾಜ್ಯ.

* ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಮತ್ತು ಬಿಸ್ಕೇಕೊಲ್ಲಿ, ದಕ್ಷಿಣದಲ್ಲಿ ಸ್ಪೇನ್ ಮತ್ತು ಮೆಡಿಟರೇನಿಯನ್ ಸಮುದ್ರ, ಪೂರ್ವದಲ್ಲಿ ಪಶ್ಚಿಮ ಜರ್ಮನಿ, ಮತ್ತು ಇಟಲಿ ಇವು ಇವೆ.

* ಫ್ರಾನ್ಸ್ ಉತ್ತರ ದಕ್ಷಿಣವಾಗಿ 950 ಕಿ.ಮೀ. ಪೂರ್ವ ಪಶ್ಚಿಮವಾಗಿ 974 ಕಿ.ಮೀ ಇದ್ದು, ಒಟ್ಟು ವಿಸ್ತೀರ್ಣ 551,500 ಚ.ಕಿ.ಮೀ ಇದೆ. 3700 ಕಿ.ಮೀ ಉದ್ದ ಸಮುದ್ರ ತೀರ ಹೊಂದಿದೆ. 1990ರಲ್ಲಿ ಇಲ್ಲಿನ ಜನಸಂಖ್ಯೆ 56,634,299.

*ರಾಜಧಾನಿ : ಪ್ಯಾರಿಸ್.

## ತನ್ನ ರೈಲು ಭೋಗಿಗಳನ್ನು ಕೋವಿಡ್ ಐಸೋಲೇಷನ್ ಸೆಂಟರ್ ಆಗಿ ಪರಿವರ್ತಿಸಿದ ಭಾರತೀಯ ರೈಲ್ವೆ




* ಭಾರತ ದೇಶದಲ್ಲಿ ಕೊರೊನಾ ವೈರಸ್ ಸಾಂಕ್ರಾಮಿಕ ರೋಗದ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಿಂದಾಗಿ ಭಾರತೀಯ ರೈಲ್ವೆ ತನ್ನ ಸುಮಾರು 4,000 ರೈಲು ಬೋಗಿಗಳನ್ನ ಕೋವಿಡ್ ಆರೈಕೆ ಘಟಕಗಳಾಗಿ ಪರಿವರ್ತಿಸಿದೆ ಮತ್ತು ರಾಜ್ಯಗಳು ಈ ಕೋವಿಡ್ ಆರೈಕೆ ಘಟಕಗಳ ಸುಮಾರು 64,000 ಹಾಸಿಗೆಗಳನ್ನ ಬಳಸಿಕೊಳ್ಳಬಹುದು ಎಂದು ರೈಲ್ವೆ ಇಲಾಖೆ ತಿಳಿಸಿದೆ.

* ಪ್ರಸ್ತುತ ಭಾರತೀಯ ರೈಲ್ವೆ ಕೋವಿಡ್ ಆರೈಕೆಗಾಗಿ 169 ಬೋಗಿಗಳನ್ನು ಬೇರೆ ಬೇರೆ ರಾಜ್ಯಗಳಿಗೆ ನೀಡಲಾಗಿದೆ ಎಂದು ಕೇಂದ್ರ ರೈಲ್ವೆ ಸಚಿವಾಲಯ ಮಾಹಿತಿಯನ್ನು ನೀಡಿದೆ. ಭಾರತೀಯ ರೈಲ್ವೆ ಬಗ್ಗೆ ಮಾಹಿತಿ :

* ಭಾರತೀಯ ರೈಲ್ವೆಯು ಭಾರತ ಸರ್ಕಾರದ ರೈಲ್ವೆ ಸಚಿವಾಲಯದ ಮಾಲೀಕತ್ವದ ಸರ್ಕಾರಿ ಸಂಸ್ಥೆಯಾಗಿದೆ.

* ಇದು ಮಾರ್ಚ್ 31, 2020 ರ ವೇಳೆಗೆ 67,956 ಕಿ.ಮೀ ಉದ್ದವನ್ನು ಹೊಂದಿರುವ ವಿಶ್ವದ ನಾಲ್ಕನೇ ಅತಿದೊಡ್ಡ ರೈಲ್ವೆ ಜಾಲವನ್ನು ಗಾತ್ರದಿಂದ ನಿರ್ವಹಿಸುತ್ತದೆ.

* ಗ್ರಾಹಕ ಸೇವೆ ಸಂಖ್ಯೆ: 139
* ಸ್ಥಾಪನೆ: 16 ಏಪ್ರಿಲ್ 1853, ಭಾರತ
* ಪ್ರಧಾನ ಕಚೇರಿ: ನವದೆಹಲಿ
* ಪೋಷಕ ಸಂಸ್ಥೆ: ಭಾರತ ಸರ್ಕಾರ
* ನೌಕರರ ಸಂಖ್ಯೆ: 13,08,000 (2016 2017)
* ಅಂಗಸಂಸ್ಥೆಗಳು: ಭಾರತೀಯ ರೈಲ್ವೆ ಅಡುಗೆ ಮತ್ತು ಪ್ರವಾಸೋದ್ಯಮ ನಿಗಮ,

## ಚಾಂಡ್ಲರ್ ಉತ್ತಮ ಸರ್ಕಾರಿ ಸೂಚ್ಯಂಕ

* ಚಾಂಡ್ಲರ್ ಉತ್ತಮ ಆಡಳಿತ ಸೂಚ್ಯಂಕವನ್ನು 'ಚಾಂಡ್ಲರ್ ಇನ್ಸ್ಟಿಟ್ಯೂಟ್ ಆಫ್ ಗವರ್ನೆನ್ಸ್' ಬಿಡುಗಡೆ ಮಾಡಿದೆ, ಇದು ಸಿಂಗಪುರದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದೆ.

CHANDLER
GOOD GOVERNMENT
INDEX

* ಈ ಸೂಚ್ಯಂಕವನ್ನು ನಾಯಕತ್ವ ಮತ್ತು ಬಲವಾದ ಸಂಸ್ಥೆಗಳು, ಕಾನೂನುಗಳು ಹಾಗೂ ನೀತಿಗಳು, ಆರ್ಥಿಕವಾಗಿ ಜನರು ಬೆಳವಣಿಗೆ ಸಹಾಯ ಮಾಡುವುದು ಆಧರಿಸಿ ಚಾಂಡ್ಲರ್ ಉತ್ತಮ ಆಡಳಿತ ಸೂಚ್ಯಂಕವನ್ನು ತಯಾರಿಸಿದೆ.

* ಪ್ರಸ್ತುತ 104 ದೇಶಗಳು ಚಾಂಡ್ಲರ್ ಉತ್ತಮ ಆಡಳಿತ ಸೂಚ್ಯಂಕದಲ್ಲಿ ಭಾಗಿಯಾಗಿದ್ದು, ಅದರಲ್ಲಿ ಭಾರತವು 49 ನೇ ಸ್ಥಾನದಲ್ಲಿದೆ ಎಂದು ತಿಳಿಸಲಾಗಿದೆ.

* ಚಾಂಡ್ಲರ್ ಉತ್ತಮ ಆಡಳಿತ ಸೂಚ್ಯಂಕದಲ್ಲಿ ಫಿನ್ಲ್ಯಾಂಡ್ ಅಗ್ರಸ್ಥಾನದಲ್ಲಿದೆ, ಮತ್ತು ನಂತರದ ಸ್ಥಾನಗಳಲ್ಲಿ



ಸ್ವಿಟ್ಜರ್ಲೆಂಡ್, ಸಿಂಗಾಪುರ್, ನೆದರ್ಲ್ಯಾಂಡ್ಸ್, ಡೆನ್ಮಾರ್ಕ್ ಮತ್ತು ನಾರ್ವೆ ದೇಶಗಳು ಸೇರಿವೆ.

* ಭಾರತದಲ್ಲಿ ಉತ್ತಮ ಆಡಳಿತ ದಿನವನ್ನು ಡಿಸೆಂಬರ್ 25 ರಂದು ಆಚರಿಸಲಾಗುತ್ತದೆ.

## ಮಿಲಿಟರಿ ಖರ್ಚುಗಳ ಬಗ್ಗೆ SIPRI ವರದಿ

* ಇತ್ತೀಚಿಗೆ ವಿಶ್ವ ಮಿಲಿಟರಿ ವೆಚ್ಚದ ವರದಿಯನ್ನು 'ಸ್ಟಾಕ್ಹೋಮ್ ಅಂತರರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆ(SIPRI)' ಬಿಡುಗಡೆ ಮಾಡಿದೆ.

* SIPRI ವರದಿಯ ಪ್ರಕಾರ ಯುನೈಟೆಡ್ ಸ್ಟೇಟ್ಸ್, ಚೀನಾ ಮತ್ತು ಭಾರತ ದೇಶಗಳು ವಿಶ್ವದ ಅತಿ ಹೆಚ್ಚು ಮಿಲಿಟರಿ ಖರ್ಚು ಮಾಡುವ ದೇಶಗಳಾಗಿವೆ ಪ್ರಸ್ತುತ ಮೂರು ದೇಶಗಳು 62% ಜಾಗತಿಕ ಮಿಲಿಟರಿ ವೆಚ್ಚದ ವರದಿಯನ್ನು ನೀಡಿವೆ.

* ಯುನೈಟೆಡ್ ಸ್ಟೇಟ್ಸ್ 2020ರಲ್ಲಿ ತನ್ನ ಮಿಲಿಟರಿಗಾಗಿ 778 ಬಿಲಿಯನ್ USD ಖರ್ಚು ಮಾಡಿದೆ ಎಂದು ಮಾಹಿತಿಯನ್ನು ನೀಡಿದೆ.

* ಚೀನಾ 252 ಬಿಲಿಯನ್ USD ಖರ್ಚು ಮಾಡಿದೆ

* ಭಾರತ 72.9 ಬಿಲಿಯನ್ USD ಖರ್ಚು ಮಾಡಿದೆ.

* ಪ್ರಸ್ತುತ 2020ರ ಮಿಲಿಟರಿ ವೆಚ್ಚವು 2019ಕ್ಕೆ ಹೋಲಿಸಿದರೆ 1981ಬಿಲಿಯನ್ USD ಹೆಚ್ಚಾಗಿದೆ. SIPRI ಬಗ್ಗೆ ಮಾಹಿತಿ :




* ಸ್ಟಾಕ್ಹೋಮ್ ಇಂಟರ್ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ ಸ್ಟಾಕ್ಹೋಮ್ ಮೂಲದ ಅಂತರರಾಷ್ಟ್ರೀಯ ಸಂಸ್ಥೆಯಾಗಿದೆ. ಇದನ್ನು 1966 ರಲ್ಲಿ ಸ್ಥಾಪಿಸಲಾಯಿತು ಮತ್ತು ಸಶಸ್ತ್ರ ಸಂಘರ್ಷ, ಮಿಲಿಟರಿ ಖರ್ಚು ಮತ್ತು ಶಸ್ತ್ರಾಸ್ತ್ರ, ವ್ಯಾಪಾರ ಮತ್ತು ನಿರಸ್ತ್ರೀಕರಣ ಮತ್ತು ಶಸ್ತ್ರಾಸ್ತ್ರ ನಿಯಂತ್ರಣಕ್ಕಾಗಿ ಡೇಟಾ, ವಿಶ್ಲೇಷಣೆ ಮತ್ತು ಶಿಫಾರಸುಗಳನ್ನು ಒದಗಿಸುತ್ತದೆ.

* ಸ್ಥಾಪನೆ: 6 ಮೇ 1966
* ನಿರ್ದೇಶಕ: ಡಾನ್ ಸ್ಮಿತ್
* ನಾಯಕ: ಡಾನ್ ಸ್ಮಿತ್
* ಪ್ರಧಾನ ಕಚೇರಿ: ಸೋಲ್ನಾ
* ಸ್ಥಳ: ಸ್ಟಾಕ್ಹೋಮ್, ಸ್ವೀಡನ್
* ಸ್ಥಾಪಕರು: ಸ್ವೀಡನ್ ಸರ್ಕಾರ, ಟೇಜ್ ಎರ್ಲ್ಯಾಂಡರ್, ಅಲ್ವಾ ಮಿರ್ಡಾಲ್

## DRDO ಸಿಂಗಲ್ ಕ್ರಿಸ್ಟಲ್ ಬ್ಲೇಡ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ




* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ಯು ಸಿಂಗಲ್ ಕ್ರಿಸ್ಟಲ್ ಬ್ಲೇಡ್ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿ ಇದೇ ತರಹದ 60 ಬ್ಲೇಡ್‌ಗಳನ್ನು HAL ಸಂಸ್ಥೆಗೆ ನೀಡಿದೆ.

* ಸಿಂಗಲ್ ಕ್ರಿಸ್ಟಲ್ ಬ್ಲೇಡ್‌ಗಳು ಹೆಲಿಕಾಪ್ಟರ್‌ಗಳಿಗೆ ಶಕ್ತಿಯುತವಾಗಿ ಕಾರ್ಯ ನಿರ್ವಹಿಸುತ್ತವೆ.

* ಸಿಂಗಲ್ ಕ್ರಿಸ್ಟಲ್ ಬ್ಲೇಡ್‌ಗಳನ್ನು ನಿಕಲ್ ಆಧಾರಿತ ಸೂಪರ್ ಮಿಶ್ರಲೋಹಗಳಿಂದ ಅಭಿವೃದ್ಧಿ ಪಡಿಸಲಾಗುತ್ತದೆ, ಮತ್ತು ಇವುಗಳು ಹೆಚ್ಚಿನ ತಾಪಮಾನವನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿವೆ ಎಂದು ತಿಳಿದು ಬಂದಿದೆ.

* ಗ್ರೇನ್ ಬೌಂಡರಿ ತಂತ್ರಜ್ಞಾನವನ್ನು ಬಳಸಿ ಸಿಂಗಲ್ ಕ್ರಿಸ್ಟಲ್ ಬ್ಲೇಡ್'ಗಳನ್ನೂ ತಯಾರಿಸಲಾಗುತ್ತದೆ.

## 'ಅಂತರರಾಷ್ಟ್ರೀಯ ಚೆರ್ನೋಬಿಲ್ ವಿಪತ್ತು ನೆನಪಿನ ದಿನ' ಆಚರಣೆ

* ಪ್ರತಿ ವರ್ಷ ಅಂತರರಾಷ್ಟ್ರೀಯ ಚೆರ್ನೋಬಿಲ್ ವಿಪತ್ತು ನೆನಪಿನ ದಿನವನ್ನು ಏಪ್ರಿಲ್ 26ರಂದು ಆಚರಣೆ ಮಾಡಲಾಗುತ್ತದೆ.

* ವಿಶ್ವಸಂಸ್ಥೆಯು 2016ರಲ್ಲಿ ಚೆರ್ನೋಬಿಲ್ ವಿಪತ್ತು ನೆನಪಿನ ದಿನವನ್ನು ಆಚರಿಸಲು ಪ್ರಾರಂಭಿಸಿತು.

* 1986ರ ಪರಮಾಣು ದುರಂತದ 30ನೇ ವಾರ್ಷಿಕೋತ್ಸವದ ದಿನದಂದು ಮೊದಲು ಅಂತರರಾಷ್ಟ್ರೀಯ ಚೆರ್ನೋಬಿಲ್ ವಿಪತ್ತು ನೆನಪಿನ ದಿನವನ್ನು ಆಚರಣೆ ಮಾಡಲಾಯಿತು ಹಾಗೂ ಈ ದಿನವನ್ನು ಪರಮಾಣು ಶಕ್ತಿಯ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು ಸಲುವಾಗಿ ಆಚರಿಸಲಾಗುತ್ತದೆ.

* ಉಕ್ರೇನ್‌ನಲ್ಲಿರುವ ಚೆರ್ನೋಬಿಲ್ ಪರಮಾಣು ವಿದ್ಯುತ್ ಘಟಕವು 1986ರ ಏಪ್ರಿಲ್.26ರಂದು ಸ್ಫೋಟವನ್ನು ಅನುಭವಿಸಿತ್ತು, ಇದರಿಂದಾಗಿ ಉಕ್ರೇನ್, ರಷ್ಯಾ ಮತ್ತು ಬೆಲಾರಸ್ ಪ್ರದೇಶಗಳಲ್ಲಿನ ಮಕ್ಕಳು ಇಂದಿಗೂ ಥೈರಾಯ್ಡ್, ಕ್ಯಾನ್ಸರ್'ನಂತಹ ರೋಗಗಳನ್ನು ಎದುರಿಸುತ್ತ ಬದುಕುತ್ತಿದ್ದಾರೆ. ವಿಶ್ವಸಂಸ್ಥೆಯ ಬಗ್ಗೆ ಮಾಹಿತಿ :

* ಪ್ರಧಾನ ಕಚೇರಿ ನ್ಯೂಯಾರ್ಕ್ ನಗರ (ಅಂತರರಾಷ್ಟ್ರೀಯ ಪ್ರದೇಶ)

* ಅಧಿಕೃತ ಭಾಷೆಗಳು ಅರೇಬಿಕ್; ಚೈನೀಸ್; ಆಂಗ್ಲ; ಫ್ರೆಂಚ್; ರಷ್ಯನ್; ಸ್ಪ್ಯಾನಿಷ್
* ಮಾದರಿ ಅಂತರ್ ಸರ್ಕಾರಿ ಸಂಸ್ಥೆ
* ಸದಸ್ಯತ್ವ 193 ಸದಸ್ಯ ರಾಷ್ಟ್ರಗಳು
* ವೀಕ್ಷಕ ರಾಜ್ಯಗಳು 2 ವಿಶ್ವಸಂಸ್ಥೆಯ ನಾಯಕರು :
* ಕಾರ್ಯದರ್ಶಿ ಜನರಲ್ಆಂಟೋನಿಯೊ ಗುಟೆರೆಸ್.
* ಉಪ ಪ್ರಧಾನ ಕಾರ್ಯದರ್ಶಿ ಅಮಿನಾ ಜೆ. ಮೊಹಮ್ಮದ್.
* ಜನರಲ್ ಅಸೆಂಬ್ಲಿ ಅಧ್ಯಕ್ಷ ಟಿಜ್ಜಾನಿ ಮುಹಮ್ಮದ್ ಬಂಡೆ.
* ಆರ್ಥಿಕಮತ್ತು ಸಾಮಾಜಿಕ ಮಂಡಳಿ ಅಧ್ಯಕ್ಷಮೋನಾ ಜುಲ್
* ಭದ್ರತಾ ಮಂಡಳಿ ಅಧ್ಯಕ್ಷಡ್ಯಾಂಗ್ ದಿನ್ಹ್ ಕ್ವಿ

## ಸುಪ್ರೀಂ ಕೋರ್ಟ್ ನಿಂದ ವೇದಾಂತ ಸಂಸ್ಥೆಗೆ ಆಕ್ಸಿಜನ್ ಉತ್ಪಾದನೆ ಮಾಡಲು ಅನುಮತಿ




* ಸುಪ್ರೀಂ ಕೋರ್ಟ್ ದೇಶದಲ್ಲಿನ ಆಮ್ಲಜನಕದ ಕೊರತೆಯನ್ನು ಪರಿಗಣಿಸಿ ಈ ಹಿಂದೆ ಸ್ಥಗಿತಗೊಳಿಸಲಾಗಿರುವ ವೇದಾಂತ

ಸಂಸ್ಥೆಗೆ ಆಕ್ಸಿಜನ್ ಉತ್ಪಾದನೆ ಮಾಡಲು ಅನುಮತಿಯನ್ನು ನೀಡಿದೆ.

* ಸುಪ್ರೀಂ ಕೋರ್ಟ್ ತಮಿಳುನಾಡಿನ ಟ್ಯೂಟಿಕಾರನ್ ಪ್ರದೇಶದಲ್ಲಿರುವ ವೇದಾಂತ ಸಂಸ್ಥೆಗೆ ಆಕ್ಸಿಜನ್ ಉತ್ಪಾದನೆಯನ್ನು ಪ್ರಾರಂಭಿಸಲು ಸೂಚನೆಯನ್ನು ನೀಡಿದೆ, ಜೊತೆಗೆ ಈ ಸಂಸ್ಥೆಯು ತಾಮ್ರ ಕರಗಿಸುವ ಘಟಕ ಆರಂಭಿಸಬಾರದು ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆಯನ್ನು ನೀಡಿದೆ.

# 29-04-2021

## ಭಾರತೀಯ ಒಲಿಂಪಿಕ್ ಸಂಸ್ಥೆಯ ಉಪಾಧ್ಯಕ್ಷ ಜನಾರ್ಧನ್ ಗೆಹ್ಲೋಟ್ ವಿಧಿವಶ



* ಜನಾರ್ದನ್ ಸಿಂಗ್ ಗೆಹ್ಲೋಟ್ ಅವರು ಭಾರತೀಯ ಒಲಿಂಪಿಕ್ ಸಂಸ್ಥೆಯ ಉಪಾಧ್ಯಕ್ಷರಾಗಿದ್ದರು, ಇವರು 2021ರ ಏಪ್ರಿಲ್ 28ರಂದು ನಿಧನರಾದರು.

* ಜನಾರ್ದನ್ ಸಿಂಗ್ ಗೆಹ್ಲೋಟ್ ಅವರು ಭಾರತೀಯ ಕ್ರೀಡಾ ನಿರ್ವಾಹಕರಾಗಿದ್ದರು, ಮತ್ತು ಇವರು ಅಂತರರಾಷ್ಟ್ರೀಯ ಕಬಡ್ಡಿ ಒಕ್ಕೂಟದ ಸ್ಥಾಪಕ ಅಧ್ಯಕ್ಷರಾಗಿದ್ದರು.

* ಇವರು 28 ವರ್ಷಗಳ ಕಾಲ ಅಮೆಚೂರ್ ಕಬಡ್ಡಿ ಫೆಡರೇಶನ್ ಆಫ್ ಇಂಡಿಯಾ (AKFI) ಅಧ್ಯಕ್ಷರಾಗಿದ್ದರು, ಇವರನ್ನು AKFI ಜೀವನ ಅಧ್ಯಕ್ಷರನ್ನಾಗಿ ಮೇ 2013 ರಲ್ಲಿ ನೇಮಕ ಮಾಡಿದೆ.

* ಜನಾರ್ದನ್ ಸಿಂಗ್ ಗೆಹ್ಲೋಟ್ ಅವರು ಬಿಜೆಪಿ ಪಕ್ಷಕ್ಕೆ ಸೇರುವ ಮೊದಲು ಅಂದರೆ 2008ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸದಸ್ಯರಾಗಿದ್ದರು.

* ಜನಾರ್ದನ್ ಸಿಂಗ್ ಗೆಹ್ಲೋಟ್'ಅವರಿಗೆ ಬಿಗ್ ಸ್ಟಾರ್ ಹೆಚ್ಚು ಮನರಂಜಿಸುವ ಕ್ರೀಡಾಪಟು ಎಂಬ ಪ್ರಶಸ್ತಿಗಳು ಲಭಿಸಿವೆ. ಭಾರತೀಯ ಒಲಿಂಪಿಕ್ ಸಂಸ್ಥೆಯ ಬಗ್ಗೆ ಮಾಹಿತಿ :

* ಒಲಿಂಪಿಕ್ ಕ್ರೀಡಾಕೂಟ, ಏಷ್ಯನ್ ಕ್ರೀಡಾಕೂಟಗಳು ಮತ್ತು ಇತರ ಅಂತರರಾಷ್ಟ್ರೀಯ ಅಥ್ಲೆಟಿಕ್ ಸಭೆಗಳಲ್ಲಿ ಭಾರತವನ್ನು ಪ್ರತಿನಿಧಿಸಲು ಕ್ರೀಡಾಪಟುಗಳನ್ನು ಆಯ್ಕೆಮಾಡುವ ಮತ್ತು ಈ ಸ್ಪರ್ಧೆಗಳಲ್ಲಿ ಭಾರತೀಯ ತಂಡಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಭಾರತೀಯ ಒಲಿಂಪಿಕ್ ಸಂಘ ಹೊಂದಿದೆ.

* ಸ್ಥಾಪನೆ: 1927
* ಅಧ್ಯಕ್ಷ: ನರಿಂದರ್ ಬಾತ್ರಾ
* ಪ್ರಧಾನ ಕಾರ್ಯದರ್ಶಿ: ರಾಜೀವ್ ಮೆಹ್ತಾ
* ಸ್ಥಾಪಕರು: ಹ್ಯಾರಿ ಬಕ್, ಆರ್ಥರ್ ನೊಹ್ರೆನ್

## ಪೈಥಾನ್ 5 ಕ್ಷಿಪಣಿ ತೇಜಸ್ ಯುದ್ಧ ವಿಮಾನಿನಲ್ಲಿ ಅಳವಡಿಸಲು ಅನುಮತಿ



* ಪ್ರಸ್ತುತ ತೇಜಸ್ ಯುದ್ಧ ವಿಮಾನ ಸ್ವದೇಶಿ ನಿರ್ಮಿತ ಅಥವಾ ಅಭಿವೃದ್ಧಿಪಡಿಸಲಾಗಿರುವ ಹಗುರ ಯುದ್ಧ ವಿಮಾನಗಳಾಗಿವೆ, ಇದೀಗ ಈ ತೇಜಸ್ ವಿಮಾನಿನಲ್ಲಿ ಪೈಥಾನ್ 5 ಕ್ಷಿಪಣಿಯನ್ನು ಅಳವಡಿಸಲು ಅನುಮತಿ ನೀಡಲಾಗಿದೆ.

* ರಕ್ಷಣ ಅಭಿವೃದ್ಧಿ ಮತ್ತು ಸಂಶೋಧನ ಸಂಸ್ಥೆ (DRDO)ಯು ಈ ಪೈಥಾನ್ 5 ಕ್ಷಿಪಣಿಯನ್ನು ಬೇರೆ ಬೇರೆ ರೀತಿಗಳಲ್ಲಿ ಪರೀಕ್ಷಿಸಿರುವ ಕುರಿತು ತಿಳಿಸಿದೆ.

* ಪ್ರಸ್ತುತ ತೇಜಸ್ ಯುದ್ಧ ವಿಮಾನಗಳಲ್ಲಿ ಈಗಾಗಲೇ ಅಳವಡಿಸಲಾಗಿರುವ ಡರ್ಬಿ ಬಿಯಾಂಡ್ ವಿಷ್ಯುವಲ್ ರೇಂಜ್ ಕ್ಷಿಪಣಿಗಳಿಗಿಂತ ಈ ಪೈಥಾನ್ 5 ಕ್ಷಿಪಣಿಯು ಹೆಚ್ಚಿನ ಕಾರ್ಯ ಕ್ಷಮತೆಯನ್ನು ಹೊಂದಿದೆ.

* ಪೈಥಾನ್ 5 ಕ್ಷಿಪಣಿಯ ಪರೀಕ್ಷೆಯನ್ನು ಗೋವಾದಲ್ಲಿ ನಡೆಸಿರುವುದಾಗಿ DRDO ಮಾಹಿತಿಯನ್ನು ನೀಡಿದೆ.

* ಡರ್ಬಿ ಮತ್ತು ಪೈಥಾನ್ ಕ್ಷಿಪಣಿಗಳನ್ನು ಯುದ್ಧ ವಿಮಾನದಿಂದ ಮತ್ತೊಂದು ವಿಮಾನಗಳನ್ನು ಹೊಡೆದು ಉರುಳಿಸಲು ಬಳಸಲಾಗುತ್ತದೆ ಈ ಕ್ಷಿಪಣಿಗಳು ಶೇ.100 ರಷ್ಟು ಗುರಿ ಛೇದಿಸುವಲ್ಲಿ ಉತ್ತಮ ಕ್ಷಿಪಣಿಗಳಾಗಿವೆ.

* ಪೈಥಾನ್ 5 ಕ್ಷಿಪಣಿಯನ್ನು ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ(ADA) ಮತ್ತು ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ(HAL) ವಿಜ್ಞಾನಿಗಳು ಜಂಟಿಯಾಗಿ ಅಭಿವೃದ್ಧಿಪಡಿಸಿದ್ದಾರೆ. ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಬಗ್ಗೆ ಮಾಹಿತಿ :

* ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಭಾರತದ ಸರ್ಕಾರಿ ಸ್ವಾಮ್ಯದ ಏರೋಸ್ಪೇಸ್ ಮತ್ತು ರಕ್ಷಣಾ ಕಂಪನಿಯಾಗಿದ್ದು, ಇದರ ಪ್ರಧಾನ ಕಚೇರಿ ಬೆಂಗಳೂರಿನಲ್ಲಿದೆ. ಇದನ್ನು ಭಾರತೀಯ ರಕ್ಷಣಾ ಸಚಿವಾಲಯದ ನಿರ್ವಹಣೆಯಡಿಯಲ್ಲಿ ನಿರ್ವಹಿಸಲಾಗುತ್ತದೆ.

* ಪ್ರಧಾನ ಕಚೇರಿ: ಬೆಂಗಳೂರು
* ಸ್ಥಾಪಕ: ವಾಲ್ಚಂದ್ ಹಿರಾಚಂದ್
* ಸ್ಥಾಪನೆ: 23 ಡಿಸೆಂಬರ್ 1940, ಬೆಂಗಳೂರು
* ಮಾಲೀಕ: ಭಾರತ ಸರ್ಕಾರ (89.97%)
* ಆದಾಯ: 21,522.07 ಕೋಟಿ ರೂ. (ಯುಎಸ್ $ 3.0 ಬಿಲಿಯನ್, 2020)
* ಅಂಗಸಂಸ್ಥೆಗಳು: ಇನ್ಫೋಟೆಕ್ ಎಚ್‌ಎಎಲ್ ಲಿಮಿಟೆಡ್,

## ರೈತರ ಅನುಕೂಲಕ್ಕೆ, ಅಗ್ರಿವಾರ್ ರೂಂ (ಕೃಷಿ ಯುದ್ಧ ಕೊಠಡಿ) ಆರಂಭ



* ಕರ್ನಾಟಕ ರಾಜ್ಯದಲ್ಲಿ ಕೊರೊನಾ ವೈರಸ್ ಹೆಚ್ಚುತ್ತಿರುವ ಕಾರಣದಿಂದಾಗಿ ಇದೀಗ ರಾಜ್ಯದಲ್ಲಿ 14 ದಿನಗಳ ಕಾಲ ಲಾಕ್ ಡೌನ್ ಜಾರಿಗೊಳಿಸಲಾಗಿದೆ, ಇದರಿಂದ ರೈತರಿಗೆ ಕೃಷಿ ಚುಟುವಟಿಕೆಗಳಿಗೆ ತೊಂದರೆ ಉಂಟಾಗಬಾರದೆಂದು ಕೃಷಿ ಇಲಾಖೆ ಅಗ್ರಿವಾರ್ ರೂಂ ಆರಂಭಿಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದ್ದಾರೆ.

* ರಾಜ್ಯ ಕೃಷಿ ಇಲಾಖೆ ಬೆಂಗಳೂರಿನಲ್ಲಿ ಅಗ್ರಿವಾರ್ ರೂಂ (ಕೃಷಿ ಯುದ್ಧ ಕೊಠಡಿ) ಯನ್ನು ಆರಂಭಿಸಿದೆ, ಇದರಿಂದ ರೈತರು ಮತ್ತು ಇತರ ದಲ್ಲಾಳಿಗಳ ಸಮಸ್ಯೆಗಳು ಮತ್ತು ದೂರುಗಳು ಮತ್ತು ಕೃಷಿ ಉಪಕರಣಗಳನ್ನು ಪಡೆಯುವಲ್ಲಿನ ಸಮಸ್ಯೆಗಳನ್ನು ಪರಿಹರಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ಶ್ರೀನಿವಾಸ್'ರವರು ತಿಳಿಸಿದ್ದಾರೆ.

* ರೈತರ ಅಗ್ರಿವಾರ್ ರೂಂ ಬೆಳಗ್ಗ 8 ರಿಂದ ರಾತ್ರಿ 8 ಗಂಟೆವರೆಗೆ ಕಾರ್ಯನಿರ್ವಹಿಸಲಿದೆ, ರೈತರು ಈ ಸಹಾಯವಾಣಿಗಳಿಗೆ080 22210237 ಹಾಗೂ 080 22212818 ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ

## 2021ನೇ ಸಾಲಿನ ವೈಲ್ಡ್ ಇನ್ನೋವೇಟರ್ ಪ್ರಶಸ್ತಿ ಕನ್ನಡತಿ ಕೃತಿ ಕಾರಂತ್‌ಗೆ ಲಭಿಸಿದೆ



* 2021ನೇ ಸಾಲಿನ ವೈಲ್ಡ್ ಇನ್ನೋವೇಟರ್ ಪ್ರಶಸ್ತಿಗೆ ಕನ್ನಡತಿ ಕೃತಿ ಕಾರಂತ್‌ಗೆ ಲಭಿಸಿದೆ.

* ಕೃತಿ ಕಾರಂತ್ ಇವರು ಬೆಂಗಳೂರಿನ ವನ್ಯಜೀವಿ ಸಂರಕ್ಷಣಾ ವಿಜ್ಞಾನಿಯಾಗಿದ್ದಾರೆ.

* ಕೃತಿ ಕಾರಂತ್'ರವರು ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡೀಸ್ ಪ್ರಧಾನ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ, ಇವರಿಗೆ ವೈಲ್ಡ್ ಎಲಿಮೆಂಟ್ಸ್ ಫೌಂಡೇಶನ್ ವತಿಯಿಂದ ಈ ಪ್ರಶಸ್ತಿಯನ್ನು ನೀಡಲಾಗಿದೆ.

* ಈ ಪ್ರಶಸ್ತಿಗೆ ಭಾಜನರಾಗಲು ವನ್ಯಜೀವಿ ಸಂರಕ್ಷಣೆಗೆ ನೀಡಿದ ಪರಿಹಾರ ಕೊಡುಗೆ ಪರಿಗಣಿಸಿ ಆಯ್ಕೆ ಮಾಡಲಾಗುತ್ತದೆ ಎಂದು ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡೀಸ್ ತಿಳಿಸಿದೆ, ಈ ಪ್ರಶಸ್ತಿ ಮೊತ್ತವು 1 ಲಕ್ಷ ಡಾಲರ್(USD) ಆಗಿದೆ.

## 'ಸೀರಮ್' ಸಂಸ್ಥೆಯ CEO ಅದಾರ್ ಪೂನಾವಾಲಾಗೆ 'ವೈ' ವರ್ಗದ ಭದ್ರತೆ



* ಕೇಂದ್ರ ಸರ್ಕಾರವು ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಸಂಸ್ಥೆಯ CEO ಹುದ್ದೆಯಲ್ಲಿರುವ ಅದಾರ್ ಪೂನಾವಾಲಾ ಅವರಿಗೆ 'ವೈ' ವರ್ಗದ ಭದ್ರತಾ (ಸೆಕ್ಯೂರಿಟಿ) ರಕ್ಷಣೆಯನ್ನು ನೀಡಲಿದೆ ಎಂದು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ ಅಧಿಸೂಚನೆಯಲ್ಲಿ ಮಾಹಿತಿಯನ್ನು ನೀಡಿದೆ.

* ಪ್ರಸ್ತುತ 'ವೈ' ವರ್ಗದ ಭದ್ರತೆಯುಲ್ಲಿ ಕಮಾಂಡೋಗಳು ಮತ್ತು ಪೊಲೀಸ್ ಸಿಬ್ಬಂದಿಗಳನ್ನೂ ಒಳಗೊಂಡಿರುತ್ತದೆ, ಒಟ್ಟಾರೆ 11 ಸಿಬ್ಬಂದಿಗಳನ್ನೂ ಇದು ಹೊಂದಿರುತ್ತದೆ.

* ಅದಾರ್ ಪೂನಾವಾಲಾ ಅವರು ರಾಜ್ಯಗಳಿಗೆ ನೀಡುವ ಕೋವಿಡ್ 19 ಔಷಧಿಗಳ ಬೆಲೆಯನ್ನು 400 ರಿಂದ 300 ರೂ.ಗೆ ಇಳಿಸಲಾಗುತ್ತದೆ ಹಾಗೂ ಇದು ಈ ಕ್ಷಣದಿಂದ ಜಾರಿಗೆ ಬರಲಿದೆ ಎಂದು ತಿಳಿಸಿದ್ದಾರೆ. ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಬಗ್ಗೆ ಮಾಹಿತಿ :

* ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಭಾರತೀಯ ಜೈವಿಕ ತಂತ್ರಜ್ಞಾನ ಕಂಪನಿಯಾಗಿದೆ.

* ಇದು ವಿಶ್ವದ ಅತಿದೊಡ್ಡ ಲಸಿಕೆ ತಯಾರಕ ಸಂಸ್ಥೆಯಾಗಿದೆ. ಇದು ಭಾರತದ ಮಹಾರಾಷ್ಟ್ರದ ಪುಣೆ ನಗರದಲ್ಲಿದೆ ಮತ್ತು ಇದನ್ನು ಸೈರಸ್ ಪೂನವಾಲ್ಲಾ 1966 ರಲ್ಲಿ ಸ್ಥಾಪಿಸಿದರು.

* ಈ ಕಂಪನಿಯು ಪೂನವಾಲ್ಲಾ ಇನ್ವೆಸ್ಟ್ಮೆಂಟ್ ಮತ್ತು ಇಂಡಸ್ಟ್ರೀಸ್ನ ಹಿಡುವಳಿ ಕಂಪನಿಯ ಅಂಗಸಂಸ್ಥೆಯಾಗಿದೆ.

* ಸಿಇಒ: ಆದರ್ ಪೂನವಾಲ್ಲಾ (2011)
* ಸ್ಥಾಪಕ: ಸೈರಸ್ ಎಸ್. ಪೂನವಾಲ್ಲಾ
* ಸ್ಥಾಪನೆ: 1966

* ಪೋಷಕ ಸಂಸ್ಥೆ: ಪೂನವಾಲ್ಲಾ ಇನ್ವೆಸ್ಟ್ಮೆಂಟ್ಸ್ & ಇಂಡಸ್ಟ್ರೀಸ್ ಪ್ರೈ. ಲಿಮಿಟೆಡ್. ಅಂಗಸಂಸ್ಥೆಗಳು: ಬಿಲ್ಥೋವನ್‌ಬಯೋಲಾಜಿಕಲ್ಸ್ ಬಿವಿ, ವಕ್ಸಿನ್ ಪ್ರೊಜೆಕ್ಟ್ ಮ್ಯಾನೇಜ್ಮೆಂಟ್ ಜಿಎಂಬಿಹೆಚ್

## ಫ್ರಾನ್ಸ್ ನಿಂದ ಏರ್ಬಸ್ ಎ 330 ವಿಮಾನ ಗುತ್ತಿಗೆ ಪಡೆಯಲು ಮುಂದಾದ ಭಾರತೀಯ ವಾಯುಪಡೆ



* ಭಾರತೀಯ ವಾಯುಪಡೆ ಫ್ರೆಂಚ್'ನ ಏರ್ಬಸ್ ಎ 330 ವಿಮಾನವನ್ನು ತರಬೇತಿ ಉದ್ದೇಶಗಳಿಗಾಗಿ ಗುತ್ತಿಗೆ ನೀಡುವಂತೆ ಫ್ರೆಂಚ್ ಸರ್ಕಾರವನ್ನು ಕೇಳಿದೆ.

* ಈ ಫ್ರೆಂಚ್'ನ ಏರ್ಬಸ್ ಎ 330 ವಿಮಾನಗಳಿಂದ ಹೋರಾಟದ ಯುದ್ಧ ಸಾಮರ್ಥ್ಯ ಹೆಚ್ಚಿಸಲು ಉಪಯೋಗವಾಗಲಿವೆ ಮತ್ತು ಆಕಾಶದಲ್ಲಿ ಯುದ್ಧ ವಿಮಾನಗಳಿಗೆ ಇಂಧನ ತುಂಬುವ ಕಾರ್ಯವನ್ನು ನಿರ್ವಹಿಸಲಿವೆ.

* ಏರ್ ಚೀಫ್ ಮಾರ್ಷಲ್ ಭದೌರಿಯಾ ಫ್ರಾನ್ಸ್'ಗೆ ಭೇಟಿಯಾದ ಸಂದರ್ಭದಲ್ಲಿ ಈ ವಿಷಯವನ್ನು ಚರ್ಚೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ, ಇದರಿಂದ IAF ತನ್ನ ಮುಂಬರುವ ಸವಾಲು ಎದುರಿಸಲು ಸಿದ್ಧವಾಗಿದೆ.

* ಫ್ರಾನ್ಸ್'ನ ಎ 330 ವಿಮಾನಗಳಿಂದ ಇಂಧನ ತುಂಬುವ ಕಾರ್ಯದ ಬಗ್ಗೆ ಪೈಲಟ್‌ಗಳಿಗೆ ತರಬೇತಿ ನೀಡಲಾಗುತ್ತದೆ.

* ಫ್ರಾನ್ಸ್'ನ ಎ 330 ವಿಮಾನ ಕೇವಲ ಇಂಧನ ತುಂಬುವಿಕೆ ಜೊತೆಗೆ ಸೈನ್ಯ ಮತ್ತು ಶಸ್ತ್ರಾಸ್ತ್ರಗಳನ್ನೂ ಸಾಗಿಸಲು ಬಳಸಲಾಗುತ್ತದೆ, ಈ ಎ 330 ವಿಮಾನಗಳು ಲಡಾಕ್ ಸೂಕ್ಷ್ಮ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸಲು ಉತ್ತಮವಾಗಿವೆ ಎಂದು ತಿಳಿಸಲಾಗಿದೆ.

## ಭಾರತ ಬ್ರಿಟನ್ ನಡುವೆ ಸುಂಕ ಸಹಕಾರ ಕುರಿತು ಒಪ್ಪಂದಕ್ಕೆ ಅನುಮೋದನೆ



* ಭಾರತ ಮತ್ತು ಬ್ರಿಟನ್ ದೇಶಗಳ ನಡುವೆ ಸುಂಕ ಸಹಕಾರ ವಿಷಯಗಳಲ್ಲಿ ಪರಸ್ಪರ ಆಡಳಿತಾತ್ಮಕ ನೆರವು ಕುರಿತ ಒಪ್ಪಂದಗಳಿಗೆ ಸಹಿ ಹಾಕಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

* ಈ ಒಪ್ಪಂದದಿಂದ ಸುಂಕ ಅಪರಾಧಗಳ ತಡೆಗಟ್ಟುವಿಕೆ ಮತ್ತು ತನಿಖೆ ನಡೆಸಲು, ದೇಶಗಳ ನಡುವೆ ವಹಿವಾಟು ನಡೆಸುವ ಸರಕುಗಳ ಮಾಹಿತಿಯನ್ನು ಪಡೆಯಲು ಈ ಒಪ್ಪಂದವು ಅನುಕೂಲವಾಗಲಿದೆ, ಪ್ರಸ್ತುತ ಎರಡೂ ಪಕ್ಷಗಳ ಅಧಿಕೃತ ಪ್ರತಿನಿಧಿಗಳು ಸಹಿ ಹಾಕಿದ ನಂತರ ಈ ಒಪ್ಪಂದಗಳು ಜಾರಿಗೆ ಬರಲಿವೆ ಎಂದು ತಿಳಿಸಿದರು.

* ಭಾರತ ಮತ್ತು ಬ್ರಿಟನ್ ದೇಶಗಳ ಈ ಒಪ್ಪಂದವು ಭಾರತೀಯ ಸುಂಕ ಕಾಳಜಿ, ಕಸ್ಟಮ್ಸ್ ಮೌಲ್ಯದ ನಿಖರತೆ ಮತ್ತು ಉಭಯ ದೇಶಗಳ ಮಧ್ಯ ನಡೆಯುವ ವಹಿವಾಟುಗಳ ಬಗ್ಗೆ ಮಾಹಿತಿ ಪಡೆಯಲು ಈ ಒಪ್ಪಂದವು ಉಪಯೋಗವಾಗಲಿದೆ ಎಂದು ಎರಡು ದೇಶಗಳು ತಿಳಿಸಿವೆ.

# 30-04-2021

## ಬಜಾಜ್ ಮುಖ್ಯಸ್ಥ ಹುದ್ದೆಗೆ ರಾಜೀನಾಮೆ ನೀಡಿದ ರಾಹುಲ್ ಬಜಾಜ್



* ರಾಹುಲ್ ಬಜಾಜ್ ಅವರು ಕಾರ್ಯನಿರ್ವಾಹಕ ನಿರ್ದೇಶಕ ಹಾಗೂ ಅಧ್ಯಕ್ಷ ಸ್ಥಾನಕ್ಕೆ ಏಪ್ರಿಲ್ 30ರಂದು ರಾಜೀನಾಮೆ ನೀಡಲಿದ್ದಾರೆ ಎಂದು ಬಜಾಜ್ ಆಟೋ ಮಾಹಿತಿಯನ್ನು ನೀಡಿದೆ.

* ರಾಹುಲ್ ಬಜಾಜ್ ಅವರು ಒಬ್ಬ ಭಾರತೀಯ ಬಿಲಿಯನೇರ್ ಉದ್ಯಮಿ, ಹಾಗೂ ಬಜಾಜ್ ಸಮೂಹದ ಅಧ್ಯಕ್ಷರು ಮತ್ತು ಸಂಸತ್ ಸದಸ್ಯರಾಗಿದ್ದಾರೆ.

* 2001ರಲ್ಲಿ ಇವರಿಗೆ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಪದ್ಮಭೂಷಣ ನೀಡಲಾಯಿತು.

* 2008ರಲ್ಲಿ ಬಜಾಜ್ ಆಟೋವನ್ನು ಮೂರು ಘಟಕಗಳಾಗಿ ವಿಂಗಡಿಸಿದರು ಬಜಾಜ್ ಆಟೋ, ಹಣಕಾಸು ಕಂಪನಿ ಬಜಾಜ್ ಫಿನ್ಸರ್ವ್ ಮತ್ತು ಹೋಲ್ಡಿಂಗ್ ಕಂಪನಿ, ಇದೀಗ ಅವರ ಮಕ್ಕಳು ಕಂಪನಿಯ ದಿನನಿತ್ಯದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದ್ದಾರೆ.

* ಮೇ 1 ರಂದು ನೀರಜ್ ಬಜಾಜ್ ಅವರು ನೂತನ ಅಧ್ಯಕ್ಷರಾಗಿ ಮತ್ತು ಕಂಪನಿಯ ಕಾರ್ಯನಿರ್ವಾಹಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ ಬಜಾಜ್ ಆಟೋ ತಿಳಿಸಿದೆ. ರಾಹುಲ್ ಬಜಾಜ್ ರವರ ಬಗ್ಗೆ ಮಾಹಿತಿ :

* ರಾಹುಲ್ ಬಜಾಜ್ ಭಾರತೀಯ ಬಿಲಿಯನೇರ್ ಉದ್ಯಮಿ. ಅವರು ಭಾರತೀಯ ಸಂಘಟಿತ ಬಜಾಜ್ ಸಮೂಹದ ಅಧ್ಯಕ್ಷರು ಮತ್ತು ಸಂಸತ್ ಸದಸ್ಯರಾಗಿದ್ದಾರೆ. 2001 ರಲ್ಲಿ ಅವರಿಗೆ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಪದ್ಮಭೂಷಣ ನೀಡಲಾಯಿತು.

* ಜನನ: 10 ಜೂನ್ 1938 (ವಯಸ್ಸು 82 ವರ್ಷ), ಕೋಲ್ಕತಾ
* ನಿವ್ವಳ ಮೌಲ್ಯ: 630 ಕೋಟಿ ಯುಎಸ್ಡಿ (2021) ಫೋರ್ಬ್ಸ್
* ಪಕ್ಷ: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್
* ಶಿಕ್ಷಣ: ಹಾರ್ವರ್ಡ್ ಬಿಸಿನೆಸ್ ಸ್ಕೂಲ್ (1964)

## ಭಾರತೀಯ ಚಿತ್ರರಂಗದ ದಾದಾ ಸಾಹೇಬ್ ಫಾಲ್ಕೆಯವರ ಹುಟ್ಟು ಹಬ್ಬ



* ಭಾರತೀಯ ಚಿತ್ರರಂಗದ ಪಿತಾಮಹ ಎಂದೇ ಪ್ರಖ್ಯಾತಿ ಪಡೆದಿರುವ ದಾದಾ ಸಾಹೇಬ್ ಫಾಲ್ಕೆಯವರ ಜನ್ಮ ದಿನಾಚರಣೆಯನ್ನು ಏಪ್ರಿಲ್ 30ರಂದು ಆಚರಣೆ ಮಾಡಲಾಗುತ್ತದೆ, ಇವರ ಪೂರ್ಣ ಹೆಸರು ದುಂಡಿರಾಜ್ ಗೋವಿಂದ ಫಾಲ್ಕೆ.

* ದಾದಾ ಸಾಹೇಬ್ ಅವರು 15ನೇ ವಯಸ್ಸಿನಲ್ಲಿ ಮುಂಬೈನ ಜೆ.ಜೆ ಸ್ಕೂಲ್ ಆಫ್ ಆರ್ಟ್ಸ್ ಸೇರಿ ಅಲ್ಲಿನ ಶಿಲ್ಪಕಲೆ, ಚಿತ್ರಕಲೆ, ಫೋಟೋಗ್ರಫಿ ಬಗ್ಗೆ ಅಧ್ಯಯನ ಮಾಡಲು ಪ್ರಾರಂಭಿಸಿದ್ದರು.

* ದಾದಾ ಸಾಹೇಬ್ ಫಾಲ್ಕೆ ಅವರು ಭಾರತೀಯ ಚಿತ್ರರಂಗದ ನಿರ್ಮಾಪಕರಾಗಿ, ನಿರ್ದೇಶಕರಾಗಿ, ಚಿತ್ರಕಥೆಗಾರರಾಗಿ ಭಾರತೀಯ ಚಿತ್ರರಂಗವನ್ನು ಹುಟ್ಟುಹಾಕಿದ್ದಾರೆ.

* ದಾದಾ ಸಾಹೇಬ್ ಫಾಲ್ಕೆಅವರ 1913ರಲ್ಲಿ ಮೊಟ್ಟ ಮೊದಲ ಸಿನಿಮಾ ರಾಜ ಹರಿಶ್ಚಂದ್ರ ಚಿತ್ರವನ್ನು ನಿರ್ಮಿಸಿದ್ದಾರೆ, ಹಾಗೂ ಈ ಸಿನಿಮಾವನ್ನು ಭಾರತದ ಮೊಟ್ಟ ಮೊದಲ ಪೂರ್ಣ ಪ್ರಮಾಣದ ಚಿತ್ರ ಎಂದು ಹೇಳಲಾಗುತ್ತದೆ.

* ದಾದಾ ಸಾಹೇಬ ಫಾಲ್ಕೆ ಅವರು ಒಟ್ಟಾರೆ 95 ಸಿನಿಮಾಗಳು ಹಾಗೂ 27 ಕಿರುಚಿತ್ರಗಳನ್ನು ನಿರ್ಮಾಣ ಮಾಡಿದ್ದಾರೆ.

* ಭಾರತೀಯ ಚಿತ್ರರಂಗದಲ್ಲಿ ಜೀವಮಾನ ಸಾಧನೆ ಮಾಡಿದ ಸಿನಿಮಾ ರಂಗದ ಕಲಾವಿದರಿಗೆ ಇವರ ಹೆಸರಿನಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

* ಕನ್ನಡದ ಸಿನಿಮಾ ರಂಗದಲ್ಲಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಡಾ.ರಾಜ್ ಕುಮಾರ್ ಅವರು 1995ರಲ್ಲಿ ಈ ಪ್ರಶಸ್ತಿಯನ್ನು ಪಡೆದಿದ್ದಾರೆ.

* 1969ರಲ್ಲಿ ಪ್ರಥಮವಾಗಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ದೇವಿಕಾ ರಾಣಿ ಅವರು ಪಡೆದು ಕೊಂಡಿದ್ದಾರೆ.

* 2020ರಲ್ಲಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ರಜನಿಕಾಂತಅವರುಪಡೆದುಕೊಂಡಿದ್ದಾರೆ.

## HALನಿಂದ, ಧ್ರುವ್ ಲಘು ಹೆಲಿಕಾಪ್ಟರ್ ಸಾಮರ್ಥ್ಯ ಪರೀಕ್ಷೆ




* ಹಡಗಿನ ಮೇಲೆ 'ಧ್ರುವ್ ಎಂಕೆ 3' ಲಘು ಹೆಲಿಕಾಪ್ಟರ್ ಎಚ್ಎಎಲ್'ನಿಂದ ಪರೀಕ್ಷೆ ನಡೆಸಲಾಯಿತು.* ಧ್ರುವ್ ಎಂಕೆ 3ಯನ್ನು HAL ಅಭಿವೃದ್ಧಿಪಡಿಸಿದೆ, ಹಡಗಿನಲ್ಲಿ ಬ್ಲೇಡ್‌ಗಳನ್ನು ಮಡಚುವ ಮತ್ತು ಹ್ಯಾಂಗರ್‌ನೊಳಗೆ ನಿಲ್ಲುವ ಸಾಮರ್ಥ್ಯವನ್ನು ಯಶಸ್ವಿಯಾಗಿ ಪ್ರದರ್ಶನ ಮಾಡಲಾಗಿದೆ.

* ಭಾರತೀಯ ಕೋಸ್ಟ್ ಗಾರ್ಡ್ ಸಹಯೋಗದೊಂದಿಗೆ ಚೆನ್ನೈನ ಕಡಲ ತೀರದಲ್ಲಿ ಪರೀಕ್ಷೆಯನ್ನು ನಡೆಸಲಾಯಿತು ಎಂದು HAL ಮಾಹಿತಿ ನೀಡಿದೆ.

* HAL ನಿಂದ ಭಾರತೀಯ ಕೋಸ್ಟ್ ಗಾರ್ಡ್‌ಗೆ ಧ್ರುವ್ ಎಂಕೆ 3 ಎಂಆರ್'ಅನ್ನು ಪೂರೈಸಲಾಯಿತು.

* HAL ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಆರ್ .ಮಾಧವನ್ ರವರು ನೀಡಿರುವ ಮಾಹಿತಿಯ ಪ್ರಕಾರ ಈ ಲಘು ಹೆಲಿಕಾಪ್ಟರ್'ನ್ನು ಹುಡುಕಾಟ ಮತ್ತು ರಕ್ಷಣೆ ಕಾರ್ಯಕ್ಕೆ ಬಳಸಿ ಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

## ಚೀನಾ ದೇಶದಿಂದ ಬಾಹ್ಯಾಕಾಶ ನಿಲ್ದಾಣದ ಮೊದಲ ಮಾಡ್ಯೂಲ್ ಉಡಾವಣೆ



* ಚೀನಾ ಬಾಹ್ಯಾಕಾಶ ಕೇಂದ್ರದ ಮೊದಲ ಮಾಡ್ಯೂಲ್ ಅನ್ನು ಬಿಡುಗಡೆ ಮಾಡಿದೆ, ಹೆಚ್ಚಿನ ಭಾಗಗಳನ್ನು ತರಲು ಮತ್ತು ಅವುಗಳನ್ನು ಕಕ್ಷೆಯಲ್ಲಿ ಜೋಡಿಸಲು ಸುಮಾರು 10 ಕಾರ್ಯಾಚರಣೆಗಳ ನಂತರ ಅಂದರೆ 2022 ರಲ್ಲಿ ಬಾಹ್ಯಾಕಾಶ ಕೇಂದ್ರವು ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬರಲಿದೆ ಎಂದು ನಿರೀಕ್ಷೆ ಪಟ್ಟಿದ್ದಾರೆ.

* 2021ರ ಏಪ್ರಿಲ್ 29ರಂದು ದಕ್ಷಿಣ ಚೀನಾದ ಹೈನಾನ್ ಪ್ರಾಂತ್ಯದ ವೆನ್ಚಾಂಗ್ ಬಾಹ್ಯಾಕಾಶ ನೌಕೆ ಉಡಾವಣಾ ಕೇಂದ್ರದಿಂದ ಮಾರ್ಚ್ 5ಬಿ ರಾಕೆಟ್ ಬಳಸಿ ಚೀನಾ ತನ್ನ ಬಾಹ್ಯಾಕಾಶ ನಿಲ್ದಾಣದ ಪ್ರಮುಖ ಮಾಡ್ಯೂಲ್ ಅನ್ನು ಬಾಹ್ಯಾಕಾಶಕ್ಕೆ ರವಾನಿಸಿದೆ.

* ಚೀನಾ ಉಡಾವಣೆ ಮಾಡಿದ ಮೊದಲ ಮಾಡ್ಯೂಲ್'ನಿಂದ ಬಾಹ್ಯಾಕಾಶದಲ್ಲಿ ಶಾಶ್ವತ ಮಾನವ ಉಪಸ್ಥಿತಿಯನ್ನು ಕಾಯ್ದಿರಿಸಲು ಬೀಜಿಂಗ್‌ನ ಮಹತ್ವಾಕಾಂಕ್ಷೆಯ ಯೋಜನೆ ಇದಾಗಿದೆ.

* ಚೀನಾ ದೇಶವು ಅಮೇರಿಕಾ ಮತ್ತು ರಷ್ಯಾದ ಜಾಗತಿಕ ಸ್ಥಿತಿಗೆ ಬೆಳೆಯಲು ಶತಕೋಟಿ ಡಾಲರ್'ಗಳನ್ನೂ ಬಾಹ್ಯಾಕಾಶ ಸಂಶೋಧನೆಗೆ ಖರ್ಚು ಮಾಡುತ್ತಿದೆ.

## ಒಡಿಶಾ ಸರ್ಕಾರದಿಂದ ಕೋರೋಣ ವಾರಿಯರ್ ಗಳಿಗೆ 50 ಲಕ್ಷ ಪರಿಹಾರ ಘೋಷಣೆ



* ಒಡಿಶಾ ಸರಕಾರವು ಕರ್ತವ್ಯ ನಿರ್ವಹಿಸುತ್ತಿರುವ ಕೋವಿಡ್ ವಾರಿಯರ್ ಸಾವನ್ನಪ್ಪಿದರೆ ಆ ಮೃತನ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರವಾಗಿ ನೀಡಲಾಗುತ್ತದೆ ಎಂದು ಸರ್ಕಾರ ಘೋಷಣೆ ಮಾಡಿದೆ.

* ಒಡಿಶಾ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಪ್ರಸ್ತುತ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಯಾವುದೇ ಕೋವಿಡ್ ವಾರಿಯರ್ ಮೃತಪಟ್ಟರೆ ಈ ಕುಟುಂಬಕ್ಕೆ ಪರಿಹಾರವಾಗಿ 50 ಲಕ್ಷ ನೀಡುವದಾಗಿ ತಿಳಿಸಿದೆ.

* ಈ 50 ಲಕ್ಷ ಪರಿಹಾರ ಧನವನ್ನು ಕೇಂದ್ರ ಸರ್ಕಾರ ನೀಡುವದಿಲ್ಲ ಅದರ ಪರವಾಗಿ ಒಡಿಶಾ ರಾಜ್ಯ ಸರಕಾರವು ನೀಡಲಿದೆ ಎಂದು ಒಡಿಶಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ. ಒಡಿಶಾ ಸರಕಾರ ಬಗ್ಗೆ ಮಾಹಿತಿ :

* ಭಾರತದ ಇತರ ರಾಜ್ಯಗಳಂತೆ, ಒಡಿಶಾ ರಾಜ್ಯದ ಮುಖ್ಯಸ್ಥರು ರಾಜ್ಯಪಾಲರಾಗಿದ್ದು, ಕೇಂದ್ರ ಸರ್ಕಾರದ ಸಲಹೆಯ ಮೇರೆಗೆ ಭಾರತದ ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ.

* ಒಡಿಶಾ ರಾಜ್ಯವನ್ನು ಲೋಕಸಭೆಯ 21 ಸಂಸತ್ತು ಸದಸ್ಯರು ಮತ್ತು ರಾಜ್ಯಸಭೆಯಲ್ಲಿ 10 ಸಂಸತ್ತು ಸದಸ್ಯರು ಪ್ರತಿನಿಧಿಸುತ್ತಾರೆ. 21 ಲೋಕಸಭಾ ಕ್ಷೇತ್ರಗಳಿವೆ.

* ರಾಜ್ಯಪಾಲ: ಗಣೇಶ ಲಾಲ್
* ಮುಖ್ಯಮಂತ್ರಿ :ನವೀನ್ ಪಟ್ನಾಯಕ್, (ಬಿಜೆಡಿ)
* ಮುಖ್ಯ ಕಾರ್ಯದರ್ಶಿ : ಶ್ರೀ ಸುರೇಶ್ ಚಂದ್ರ ಮಹಾಪಾತ್ರ, ಐ.ಎ.ಎಸ್
* ಸ್ಪೀಕರ್ : ಸುರ್ಜ್ಯಾ ನಾರಾಯಣ್ ಪತ್ರೋ,
* ಉಪ ಸ್ಪೀಕರ್:ರಜನಿ ಕಾಂತ್ ಸಿಂಗ್

## ರಾಯಚೂರು ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿಗೆ AAI ಒಪ್ಪಿಗೆ



* ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು ಕರ್ನಾಟಕ ರಾಜ್ಯದ ರಾಯಚೂರು ನಗರದ ಹೊರವಲಯದ ಪ್ರದೇಶದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುವದಕ್ಕೆ ಅನುಮತಿ ನೀಡಿದೆ.

* ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ತಂತ್ರಜ್ಞರ ತಂಡವು ಈಗಾಗಲೇ ರಾಯಚೂರು ನಗರದ ಹೊರವಲಯದ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆಯನ್ನು ಮಾಡಿ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿಗೆ ಅನುಮತಿಯನ್ನು ನೀಡಿದೆ.

* ರಾಯಚೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ 40 ಕೋಟಿ ರೂ. ಮತ್ತು ರಾಯಚೂರು ಜಿಲ್ಲಾ ಗಣಿ ನಿಧಿ 10 ಕೋಟಿ ರೂ. ಮೀಸಲಿಟ್ಟಿದೆ.

* ಸದ್ಯ ಇದೀಗ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಿಂದ ತಾಂತ್ರಿಕ ಒಪ್ಪಿಗೆ ಪತ್ರ ಸಿಕ್ಕಿದೆ, ಎಂದು ರಾಯಚೂರು ಜಿಲ್ಲಾಧಿಕಾರಿ ಆರ್.ವೆಂಕಟೇಶಕುಮಾರ್ ಅವರು ಸುದ್ದಿವಾಹಿನಿಗೆ ಮಾಹಿತಿಯನ್ನು ನೀಡಿದ್ದಾರೆ. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಬಗ್ಗೆ ಮಾಹಿತಿ :

* ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ನಾಗರಿಕ ವಿಮಾನಯಾನ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಸನಬದ್ಧ ಸಂಸ್ಥೆಯಾಗಿದೆ (ವಿಮಾನ ನಿಲ್ದಾಣ ಪ್ರಾಧಿಕಾರದ ಕಾಯಿದೆ, 1994 ರ ಮೂಲಕ ರಚಿಸಲಾಗಿದೆ).

* ಭಾರತದಲ್ಲಿ ನಾಗರಿಕ ವಿಮಾನಯಾನ ಮೂಲಸೌಕರ್ಯಗಳನ್ನು ರಚಿಸುವುದು, ನವೀಕರಿಸುವುದು, ನಿರ್ವಹಿಸುವುದು ಮತ್ತು ನಿರ್ವಹಿಸುವ ಜವಾಬ್ದಾರಿ ಭಾರತ ಸರ್ಕಾರಕ್ಕೆ ಇದೆ.

* ಇದು 11 ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು, 11 ಕಸ್ಟಮ್ಸ್ ವಿಮಾನ ನಿಲ್ದಾಣಗಳು, 89 ದೇಶೀಯ ವಿಮಾನ ನಿಲ್ದಾಣಗಳು ಮತ್ತು ಮಿಲಿಟರಿ ವಿಮಾನಕ್ಷೇತ್ರ, 26 ಸಿವಿಲ್ ಎನ್ಕ್ಲೇವ್ಗಳು ಸೇರಿದಂತೆ ಒಟ್ಟು 126 ವಿಮಾನ ನಿಲ್ದಾಣಗಳನ್ನು ಸಹ ನಿರ್ವಹಿಸುತ್ತದೆ.

## ಮೊದಲ ಮಹಿಳಾ ಅಧಿಕಾರಿ BRO ದಲ್ಲಿ ನೇಮಕ



* ಬಾರ್ಡರ್ ರೋಡ್ ಪ್ರಾಧಿಕಾರ (Border Roads Organisation) ಗಡಿ ರಸ್ತೆಗಳ ನಿರ್ಮಾಣ ಕಾಮಗಾರಿಯ ಮೇಲ್ವಿಚಾರಣೆಗಾಗಿ ಇದೇ ಮೊದಲ ಬಾರಿಗೆ ವೈಶಾಲಿ ಎಸ್.ಹಿವಾಸೆ ಎಂಬ ಮಹಿಳಾ ಅಧಿಕಾರಿಯನ್ನು ನೇಮಕ ಮಾಡಲಾಗಿದೆ.

* ವೈಶಾಲಿ ಎಸ್.ಹಿವಾಸೆ ಅವರು ಮಹಾರಾಷ್ಟ್ರದವರು ಇದೀಗ ಇವರು BRO'ನ ಅಂಗ ಸಂಸ್ಥೆಯಾಗಿರುವ ರೋಡ್ ಕನ್ಸ್ಟ್ರಕ್ಷನ್ ಕಂಪನಿಯನ್ನು ತಮ್ಮ ಅಧೀನದಲ್ಲಿ ಮುನ್ನಡೆಸಲಿದ್ದಾರೆ.

* ಪ್ರಸ್ತುತ ವೈಶಾಲಿ ಎಸ್.ಹಿವಾಸೆ ಅವರು ಕಾರ್ಗಿಲ್‌ನಲ್ಲಿ ರಸ್ತೆ ನಿರ್ಮಾಣ ಕಾಮಗಾರಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ ಎಂದು BRO ಸ್ಪಷ್ಟನೆಯನ್ನು ನೀಡಿದೆ. ಬಾರ್ಡರ್ ರೋಡ್ ಪ್ರಾಧಿಕಾರ ಬಗ್ಗೆ ಮಾಹಿತಿ :

* ಬಾರ್ಡರ್ ರೋಡ್ಸ್ ಆರ್ಗನೈಸೇಶನ್ ಭಾರತದಲ್ಲಿ ರಸ್ತೆ ನಿರ್ಮಾಣ ಕಾರ್ಯಕಾರಿ ಪಡೆ, ಇದು ಭಾರತೀಯ ಸಶಸ್ತ್ರ ಪಡೆಗಳ ಬೆಂಬಲವನ್ನು ನೀಡುತ್ತದೆ.BRO ಭಾರತದ ಗಡಿ ಪ್ರದೇಶಗಳಲ್ಲಿ ಮತ್ತು ಸ್ನೇಹಪರ ನೆರೆಯ ರಾಷ್ಟ್ರಗಳಲ್ಲಿ ರಸ್ತೆ ಜಾಲಗಳನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ನಿರ್ವಹಿಸುತ್ತದೆ.

* ಮಹಾನಿರ್ದೇಶಕರು: ಲೆಫ್ಟಿನೆಂಟ್ ಜನರಲ್ ರಾಜೀವ್ ಚೌಧರಿ
* ಪ್ರಧಾನ ಕಚೇರಿ: ನವದೆಹಲಿ
* ಸ್ಥಾಪಕ: ಜವಾಹರಲಾಲ್ ನೆಹರು
* ಸ್ಥಾಪನೆ: 7 ಮೇ 1960
* ಬಜೆಟ್:, 6,004.08 ಕೋಟಿ (ಯುಎಸ್ $ 840 ಮಿಲಿಯನ್) (2021 22)
* ಸೇವೆ ಸಲ್ಲಿಸಿದ ಪ್ರದೇಶ: ಭಾರತ, ಭೂತಾನ್, ನೇಪಾಳ, ಮ್ಯಾನ್ಮಾರ್, ಅಫ್ಘಾನಿಸ್ತಾನ


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಭೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App

ಪ್ರತಿ ದಿನದ ಸ್ಪರ್ಧಾತ್ಮಕ
ಮಾಹಿತಿಗಾಗಿ ಕೂಡಲೇ
KPSC VAANI APP
ಡೌನ್ಲೋಡ್ ಮಾಡಿಕೊಳ್ಳಿ

ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ
ಪುಸ್ತಕಗಳನ್ನು ಖರೀದಿಸಲು
ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ

ಪ್ರತಿದಿನದ ಉದ್ಯೋಗ ಮಾಹಿತಿ,
ಪ್ರಚಲಿತ ಘಟನೆಗಳು, ಪ್ರಶ್ನೆ
ಪತ್ರಿಕೆಗಳು, ಕಟ್ ಆಫ್ ಅಂಕಗಳು,
Daily Quiz ಸೇರಿ ಹತ್ತು ಹಲವು
ಸ್ಪರ್ಧಾತ್ಮಕ ಮಾಹಿತಿಗಳು ಒಂದೇ
ವೇದಿಕೆಯಲ್ಲಿ ನಿಮಗಾಗಿ

ನಮ್ಮ ಗುಂಪುಗಳನ್ನು ಸೇರಿಕೊಳ್ಳಿ

Click here To Join

To Download Our App

Follow Us on Facebook

Follow Us on Instagram





Scan QR Code
To Download
KPSC Vaani App